ಸಂಪುಟ: 14 Volume | ಸಂಚಿಕೆ: 51 Issue | ಪುಟಗಳು 08 Pages | ಗುರುವಾರ 28 ಮೇ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಪ್ರತಿಭೆಗೆ ಶಾಸ್ತ್ರಜ್ಞಾನವಿದ್ದರೆ ವಜ್ರಕ್ಕೆ ಕುಂದಣವಿಟ್ಟಂತೆ.
–ತ.ರಾ.ಸು

## ಪ್ರವಚನ ರತ್ನ ಸಿರಿ ಪ್ರಶಸ್ತಿಗೆ ಆಯ್ಕೆ



**ಕೆಂಭಾವಿ:** ಶ್ರೀ ವಿರಕ್ತೇಶ್ವರ ಭರತನಾಟ್ಯ ತರಬೇತಿ ಸಂಸ್ಥೆ (ರಿ) ತಾಳಿಕೋಟಿ ಸಂಸ್ಥೆಯ 7ನೇ ವಾರ್ಷಿಕೋತ್ಸವದ ಅಂಗವಾಗಿ, ಆಧ್ಯಾತ್ಮಿಕ ಕ್ಷೇತ್ರದ ಸಾಧಕ ವೇ. ಮೂ. ಗಜದಂಡಯ್ಯ ಎಸ್. ಹಿರೇಮಠ ಯಕ್ತಾಪೂರ ಅವರಿಗೆ ರಾಜ್ಯಮಟ್ಟದ ಗೌರವ ಸಂದಿದೆ.

ಅವರ ಆಧ್ಯಾತ್ಮಿಕ ಸಾಧನೆ ಹಾಗೂ ಪ್ರವಚನ ಸೇವೆಯನ್ನು ಗುರುತಿಸಿ, ಸಂಸ್ಥೆಯು "ರಾಜ್ಯಮಟ್ಟದ ಪ್ರವಚನ ರತ್ನ ಸಿರಿ ಪ್ರಶಸ್ತಿ" ಘೋಷಿಸಿದೆ. ಜೂನ್ 7–2026 ರಂದು ತಾಳಿಕೋಟಿಯ ಶ್ರೀ ಖಾಸ್ಗತೇಶ್ವರ ಸಭಾಭವನದಲ್ಲಿ ಜರುಗಲಿರುವ ಸಂಸ್ಥೆಯ 2 ತಿಂಗಳ ಉಚಿತ ನೃತ್ಯ ತರಬೇತಿಯ ಸಮಾರೋಪ ಹಾಗೂ ಸಾಂಸ್ಕೃತಿಕ ನಾಟ್ಯ ವೈಭವ ಭವ್ಯ ಸಮಾರಂಭದಲ್ಲಿ, ನಾಡಿನ ಪೂಜ್ಯರು ಹಾಗೂ ಗಣ್ಯರ ಸಮ್ಮುಖದಲ್ಲಿ ಈ ಪ್ರಶಸ್ತಿ ನೀಡಿ ಗೌರವಿಸಲಾಗುವುದು.

## ಸಿದ್ದರಾಮಯ್ಯ ಸಿಎಂ ಆಗಿ ಮುಂದುವರೆಯಲಿ

- ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ನಾಲ್ಕು ದಶಕದ ವರೆಗೆ ರಾಜ್ಯದ ಜನರ ನಾಡಿಮಿಡಿತ ಅರಿತಿರುವ ಸಿದ್ಧರಾಮಯ್ಯನವರು ತಳಮಟ್ಟದಿಂದ ಬಂದು ಸಿಎಂ ಆಗಿದ್ದಾರೆ. ಅಹಿಂದ ವರ್ಗದ ಪರವಾಗಿ ಹೋರಾಟ ಮಾಡಿರುವ ಅವರು ಮಾಸ್ ಲೀಡರ್ ಆಗಿದ್ದಾರೆ. ಸಿಎಂ ಬದಲಾವಣೆ ಕುರಿತು ಚರ್ಚೆ ನಡೆದಿದೆ. ಗ್ಯಾರಂಟಿ ಮೂಲಕ ಹಾಗೂ ಸಿಎಂ, ಡಿಸಿಎಂ ಜೋಡಿಯಾಗಿ ಸೇರಿ 136 ಸೀಟು ತಂದಿದ್ದಾರೆ.

ಸಿದ್ಧರಾಮಯ್ಯನವರ ಕನಸಿನ ಕೂಸು ರಾಜ್ಯದಲ್ಲಿ ಜಾತಿಗಣತಿ ಮಾಡಿಸಬೇಕು ಎಂಬುದು ಅವರ ಕನಸು. ಜಾತಿಗಣತಿ ವರದಿ ಸಲ್ಲಿಕೆಯಾಗಿದ್ದು, ಅದು ಅನುಷ್ಠಾನವಾಗಬೇಕಾಗುತ್ತದೆ. ಜಾತಿಗಣತಿ ಯಶಸ್ವಿಯಾಗಿ ಅನುಷ್ಠಾನವಾಗಬೇಕಾದರೆ ಸಿದ್ಧರಾಮಯ್ಯನವರು ಸಿಎಂ ಆಗಿ ಮುಂದುವರೆಯಲು ಅವಕಾಶ ಕೊಡಬೇಕು ಎಂದು ವರಿಷ್ಠರಿಗೆ ವಿನಂತಿಸಿದರು.



ಇದೇ ಸಂದರ್ಭದಲ್ಲಿ ಮಾತನಾಡುತ್ತಾ ಕಾಂಗ್ರೆಸ್ ಪಕ್ಷದ ರಾಜ್ಯಗಳಲ್ಲಿ ಸಿದ್ಧರಾಮಯ್ಯನವರನ್ನು ಹೊರತುಪಡಿಸಿದರೆ ಎಲ್ಲಿಯೂ ಹಿಂದುಳಿದ ವರ್ಗದವರು ಇಲ್ಲ, ಸಿಎಂ ಸ್ಥಾನದಿಂದ ತೆಗೆದರೆ ಅದು ಕಾಂಗ್ರೆಸ್ ಪಕ್ಷದ ಸಿದ್ಧಾಂತವನ್ನು ವಿರೋಧಿಸಿದಂತಾಗುತ್ತದೆ. ಇನ್ನೂ ಸಿದ್ಧರಾಮಯ್ಯನವರನ್ನು ತೆಗೆಯಬೇಕಾದರೆ ಯಾವ ಕಾರಣಕ್ಕೆ ಎಂಬುದನ್ನು ರಾಜ್ಯದ ಜನರಿಗೆ ಬಹಿರಂಗ ಪಡಿಸಬೇಕು ಎಂದರು. ಅಕಸ್ಮಾತ ಬದಲಾವಣೆಯಾದರೆ ಅಹಿಂದ ವರ್ಗಕ್ಕೆ ನಷ್ಟವಾಗಲಿದೆ. ಒಡೆದು ಹೋಗಿದ್ದ ಸಣ್ಣ ಸಮಾಜಗಳು, ಅಹಿಂದ ವರ್ಗವನ್ನು ಒಂದು ಗೂಡಿಸಿದವರು ಅವರು ಎಂದು ಇದೇ ಸಂದರ್ಭದಲ್ಲಿ ಹೇಳಿದರು.

## ಅಕ್ರಮ ಸಿಲಿಂಡರ್ ಮಾರಾಟ, ಆಟೋ ಸೀಜ್

- ಮಲ್ಲಮ್ಮ ನುಡಿ ವಾರ್ತೆ ಬೀದರ್

ತಾಲ್ಲೂಕಿನ ಮರಖಲ ಗ್ರಾಮದ ಸಂತೋಷ ಎಂಬಾತ ಬೀದರನ ಸುಜಾತಾ ಗ್ಯಾಸ್ ಏಜನ್ಸಿಯಿಂದ ಸಿಲಿಂಡರ್ ಗ್ಯಾಸ್ ಪಡೆದುಕೊಂಡು ಅಕ್ರಮವಾಗಿ ಮಾರಾಟ ಮಾಡುತ್ತಿರುವ ಖಚಿತ ಮಾಹಿತಿ ಮೇರೆಗೆ ಬುಧವಾರ ದಾಳಿ ನಡೆಸಿ ಆತನಿಂದ 7 ತುಂಬಿದ 41 ಖಾಲಿ ಸಿಲಿಂಡರ್ ವಶಕ್ಕೆ ಪಡೆದುಕೊಂಡು ಎರಡು ಆಟೋ ಸೀಜ್ ಮಾಡಿದ್ದೇವೆ ಎಂದು ಬೀದರ ಡಿವೈಎಸ್ಪಿ ದೂದ್ ಪೀರ್ ಮುಲ್ಲಾ ತಿಳಿಸಿದ್ದಾರೆ.

ಈ ಹಿಂದೆಯೇ ನಾವು ಎಲ್ಲಾ ಗ್ಯಾಸ್ ಏಜನ್ಸಿಯವರಿಗೆ ಗ್ರಾಹಕರಿಗೆ ತೊಂದರೆಯಾಗದಂತೆ ಸಿಲಿಂಡರ್ ಸರಬರಾಜು ಮಾಡಬೇಕು ಯಾರು ಸಹ ಅಕ್ರಮವಾಗಿ ಮಾರಾಟ ಮಾಡಬಾರದು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದೇವು. ಹಾಗೆ ದಿನ ಗ್ಯಾಸ್ ಸಿಲಿಂಡರ್ ಸರಬರಾಜುದಾರರ ಮೇಲೆ



ನಿಗಾ ಸಹ ಇಟ್ಟಿದ್ದೇವು ಇಂದು ಅಕ್ರಮವಾಗಿ ಮಾರಾಟದ ಬಗ್ಗೆ ಮಾಹಿತಿ ಮೇರೆಗೆ ಸಿಪಿಐ ಜಿ ಎಸ್.ಬಿರಾದಾರ, ಬಾಸುಮಿಯಾ ಕೊಂಚೂರ್ ಹಾಗೂ ಫುಡ್ ಇನ್ಸ್ಪೆಕ್ಟರ್ ಜೊತೆ ಸೇರಿ ದಾಳಿ ನಡೆಸಿದ್ದೇವೆ. ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ವಶಕ್ಕೆ ಪಡೆದು ಮುಂದಿನ ತನಿಖೆ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.



ತಾ.ಪಂ. ಮಾಜಿ ಸದಸ್ಯ ದಿವಂಗತ ನಾಗೇಶ ಸುಭಾಷ್ ಕಲ್ಲೂರ ಅವರು ನಿಧನರಾಗುವ ಮುನ್ನ ಪ್ರತಿಷ್ಠಿತ ಮಲ್ಲಮ್ಮ ನುಡಿ ಓದುಗರಾಗಿದ್ದು ದಿನದ ಸಂಚಿಕೆ ಅವಲೋಕಿಸುತ್ತಿರುವುದು.



ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇಂದು ವಿಧಾನಸೌಧದ ಪೂರ್ವ ದಿಕ್ಕು ನಲ್ಲಿರುವ ಮಾಜಿ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ರವರ ಪುಣ್ಯ ಸ್ಮರಣೆ ಅಂಗವಾಗಿ ಅವರ ಪ್ರತಿಮೆ ಬಳಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಂತರ ಮಾಧ್ಯಮ ದವರೊಂದಿಗೆ ಮಾತನಾಡಿದರು.



ಹುಮನಾಬಾದ: ಬೆಳಿಗ್ಗೆ ಧಾರಕಾರ ಮಳೆ ಬಿದ್ದ ಹಿನ್ನಲೆಯಲ್ಲಿ ರಸ್ತೆಯ ಮೇಲೆ ನೀರು ನಿಂತುಕೊಂಡಿವೆ. ಹಾಗೂ ಮೊಳಕೇರಾ ಗ್ರಾಮದ ಮೋಳಗಿ ಮರಾಯ ದೇವಸ್ಥಾನದ ಹತ್ತಿರ ಯಾರೋ ಒಬ್ಬ ವ್ಯಕ್ತಿ ಗಿಡದ ಕೆಳಗೆ ಕಾರು ನಿಲ್ಲಿಸಿ ಹೋಗಿದ್ದರು. ಧಾರಕಾರ ಮಳೆಯೊಂದಿಗೆ ಗಾಳಿ ತೂರಿ ಮರಗಳು, ಕೊಂಬೆಗಳು ಬಿದ್ದು ಕಾರು ಜಖಂಗೊಂಡಿರುವ ದೃಶ್ಯ ಕಾಣಬಹುದು.

# ಪಟ್ಟದಾಟದ ಪಟ್ಟುಗೆ ಪಟ್ಟ?

## ಇಂದು ಸಿದ್ರಾಮಯ್ಯ ರಾಜಿನಾಮೆ | ಸಿಎಂ ಹುದ್ದೆ ರೇಸ್‌ನಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಹೆಸರು

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಸಿಎಂ ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದು ಬಹುತೇಕ ಖಚಿತವಾಗಿದ್ದು, ಹೈಕಮಾಂಡ್ ಸೂಚಿಸಿದ ಬಳಿಕ ಸಿಎಂ ಹೆಸರು ಘೋಷಣೆಯಾಗಲಿದೆ. ಪಟ್ಟಕ್ಕಾಗಿ ಪುಟ್ಟು ಹಾಕಿದ್ದ ಡಿಸಿಎಂ ಡಿಕೆಶಿವಕುಮಾರ್ ಸಿಎಂ ಆಗುವುದು ಬಹುತೇಕ ಖಚಿತ ಎಂದು ಉನ್ನತ ಮೂಲಗಳು ಖಚಿತಪಡಿಸಿವೆ. ದೆಹಲಿಯಲ್ಲಿ ನಡೆದ ಹೈವೋಲ್ಟೇಜ್ ಸಭೆಯಲ್ಲಿ ರಾಹುಲ್ ಗಾಂಧಿ ಮುಂದೆ ಸಿದ್ದರಾಮಯ್ಯ ಕೆಲವು ಬೇಡಿಕೆಗಳನ್ನು ಇಟ್ಟಿದ್ದಾರೆ. ನೀವು ಹೇಳಿದ ಬಳಿಕ ನಾನು ರಾಜೀನಾಮೆ ಕೊಡಲು ಸಿದ್ಧ, ಆದರೆ ನನ್ನ ಕೆಲವೊಂದು ಬೇಡಿಕೆಗಳು ಇವೆ ಎಂಬ ವಿಚಾರವನ್ನು ಪ್ರಸ್ತಾಪಿಸಿದ್ದಾರೆ ಎಂದು ತಿಳಿದು ಬಂದಿದೆ.

**ಇಂದು ರಾಜ್ಯಪಾಲರ ಭೇಟಿ:** ಕರ್ನಾಟಕ ಸಿಎಂ ಬದಲಾವಣೆ ಚರ್ಚೆ ಜೋರಿರುವ ಬೆನ್ನಲ್ಲೆ ರಾಜ್ಯಪಾಲ ಥಾವರ್ಚಂದ್ ಗೆಹ್ಲೋಟ್ ಭೇಟಿಗೆ ಸ್ವತಃ ಸಿದ್ದರಾಮಯ್ಯ ಅವರೇ ಸಮಯ ಕೇಳಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಗುರುವಾರ ಬೆಳಿಗ್ಗೆ 10.30 ಕ್ಕೆ ಭೇಟಿ ಸಾಧ್ಯತೆ ಇದೆ.

ಸಿದ್ದರಾಮಯ್ಯ – ರಾಜ್ಯಪಾಲರ ಭೇಟಿಗೆ ರಾಜೀನಾಮೆ ಒಂದೇ ಕಾರಣವಾಗಿರದೇ, ರಾಜ್ಯ ಸಚಿವ ಸಂಪುಟ ವಿಸ್ತರಣೆ ಕೂಡ ಆಗಿರಬಹುದು ಎನ್ನಲಾಗಿದೆ.





### ಸಿದ್ದರಾಮಯ್ಯನವರ ಬೇಡಿಕೆಗಳೇನು..?

- ಪುತ್ರ ಯತೀಂದ್ರಗೆ ರಾಜಕೀಯ ಸ್ಥಾನಮಾನ ನೀಡಬೇಕು
- ತಮ್ಮನ್ನು ನಂಬಿ ಬಂದ ಆಪ್ತರು, ಶಾಸಕರ ಹಿತ ಕಾಪಾಡಬೇಕು
- ಹೊಸ ಸಂಪುಟದಲ್ಲಿ ನಾನು ಕೊಡುವ ಪಟ್ಟಿಯನ್ನು ಪರಿಗಣಿಸಬೇಕು
- ನನ್ನ ಪರವಾಗಿ ಮಾತಾಡಿದವರನ್ನು ಟಾರ್ಗೆಟ್ ಮಾಬಾರದು
- ಕೆಪಿಸಿಸಿ ನಾಯಕರಾಗಿ ಸತೀಶ್ ಜಾರಕಿಹೊಳಿಗೆ ಅವಕಾಶ ನೀಡಬೇಕು

### ಕರೆ ಸ್ವೀಕರಿಸದ ಶಾಸಕರು

ಬಿಜೆಪಿ ಶಾಸಕ ಮಾನಪ್ಪ ಡಿ. ವಜ್ಜಲ್ ಅವರನ್ನು ಗ್ರಾಮಗಳ ದಯನೀಯ ಅವಸ್ಥೆ ಬಗ್ಗೆ ಕೇಳಲು ಕರೆ ಮಾಡಿದರೆ. ಅವರು ಕರೆಯನ್ನೇ ಸ್ವೀಕರಿಸುವುದೇ ಇಲ್ಲ. ಪತ್ರಕರ್ತರ ಕರೆಯನ್ನೇ ಸ್ವೀಕರಿಸದವರು ಜನರ ಸಮಸ್ಯೆ ಆಲಿಸ್ತಾರೆನ್ ಸ್ವಾಮಿ ಎಂದು ಸಾರ್ವಜನಿಕರು ನಮ್ಮನ್ನೇ ಪ್ರಶ್ನಿಸುತ್ತಾರೆ.



### ನಾಯಕತ್ವ ಬದಲಾವಣೆ ಬಳಿಕ?

ಹೈಕಮಾಂಡ್ ನಡೆಯಿಂದ ಇದೀಗ ಸಿದ್ದರಾಮಯ್ಯನವರ ರಾಜಕೀಯ ಭವಿಷ್ಯ ಏನು ಎಂಬ ಜಿಜ್ಞಾಸೆ ಕಾಡುತ್ತಿದೆ. ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ತಾರಾ ಇಲ್ಲವೇ ರಾಜಕೀಯಕ್ಕೆ ವಿರಾಮ ಹೇಳುತ್ತಾರಾ ಎಂಬ ಚರ್ಚೆ ನಡೆಯುತ್ತಿದೆ. ರಾಷ್ಟ್ರ ರಾಜ್ಕೀಯ ದಬಲಿಗೆ ಸಕ್ರಿಯ ರಾಜಕೀಯದಲ್ಲೇ ಇರುವುದಾಗಿ ಸಿಎಂ ಸಿದ್ದರಾಮಯ್ಯ ಹೇಳಿಕೊಂಡಿದ್ದಾರೆ.

### ಕೆಪಿಸಿಸಿ ಹುದ್ದೆ ಬದಲಾವಣೆ?

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಬಳಿಕ ಕೆಪಿಸಿಸಿ ಅಧ್ಯಕ್ಷರ ಹುದ್ದೆಯನ್ನು ಬದಲಾಯಿಸಬೇಕು, ಒಬ್ಬರಿಗೆ ಒಂದೇ ಹುದ್ದೆ ಎನ್ನುವ ನಿಯಮ ಅನ್ವಯವಾಗಬೇಕು ಎಂಬ ಒತ್ತಡ ಜೋರಾಗಿದೆ. ಸಚಿವ ಈಶ್ವರ್ ಖಂಡ್ರೆ ಅವರ ಹೆಸರು ಹೆಚ್ಚು ಚರ್ಚೆಯಲ್ಲಿದ್ದು, ಸಿಎಂ ಆಪ್ತ ಬಣದಲ್ಲಿ ಇದ್ದವರ ಹೆಸರೂ ಇದ್ದು, ಕೆಪಿಸಿಸಿಗೆ ನೂತನ ಸಾರಥಿಯ ಹೆಸರನ್ನು ರಾಹುಲ್ ಪ್ರಕಟಿಸಲಿದ್ದಾರೆ.

## ಸಚಿವ ರಾಮಲಿಂಗಾರೆಡ್ಡಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಲಿ

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯದ ರಾಜಕಾರಣದಲ್ಲಿ ಹಿರಿಯ ನಾಯಕರು, ಅನುಭವಿಗಳಾದ ನಾಯಕರಿಗೆ ಸೂಕ್ತ ಗೌರವ ಸಿಗಬೇಕು ಎಂಬುದು ಕಾರ್ಯಕರ್ತರು ಹಾಗೂ ಸಾರ್ವಜನಿಕರ ಆಶಯವಾಗಿದೆ. ಅಂತಹ ನಾಯಕರಲ್ಲಿ ರಾಮಲಿಂಗಾ ರೆಡ್ಡಿ ಅವರು ಪ್ರಮುಖರು. ಹಲವು ದಶಕಗಳಿಂದ ಪಕ್ಷ ಸಂಘಟನೆ, ಆಡಳಿತ ಅನುಭವ ಹಾಗೂ ಜನಸೇವೆ ಮೂಲಕ ತಮ್ಮದೇ ಆದ ಛಾಪು ಮೂಡಿಸಿರುವ ಅವರು ಉಪಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದ್ದಾರೆ ಎಂಬ ಅಭಿಪ್ರಾಯ ರಾಜಕೀಯ ವಲಯದಲ್ಲಿ ಕೇಳಿಬರುತ್ತಿದೆ. ಸರ್ಕಾರದಲ್ಲಿ ಪ್ರಾದೇಶಿಕ ಸಮತೋಲನ, ಅನುಭವಕ್ಕೆ ಮಾನ್ಯತೆ ಹಾಗೂ ಹಿರಿಯ ನಾಯಕರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ರಾಮಲಿಂಗಾ ರೆಡ್ಡಿ ಅವರಿಗೆ ಉಪ



ಮುಖ್ಯಮಂತ್ರಿಯ ಸ್ಥಾನ ನೀಡುವ ಬಗ್ಗೆ ಪಕ್ಷದ ಹೈಕಮಾಂಡ್ ಗಂಭೀರವಾಗಿ ಪರಿಗಣಿಸಬೇಕು. ಅವರ ಆಡಳಿತ ಅನುಭವದಿಂದ ಸರ್ಕಾರದ ಕಾರ್ಯಕ್ಷಮತೆ ಇನ್ನಷ್ಟು ಬಲವಾಗಬಹುದು ಎನ್ನುವ ವಿಶ್ವಾಸ ಕಾರ್ಯಕರ್ತರಲ್ಲಿ ಇದೆ. ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಪಕ್ಷವನ್ನು ಸಂಘಟಿಸುವಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ. ಸಾರಿಗೆ ಸೇರಿದಂತೆ ಹಲವು ಇಲಾಖೆಗಳ ಜವಾಬ್ದಾರಿ ನಿರ್ವಹಿಸಿರುವ ಅನುಭವವೂ ಅವರಿಗೆ ಇದೆ. ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವ ಗುಣ, ಸರಳ ವ್ಯಕ್ತಿತ್ವ ಹಾಗೂ ಪಕ್ಷನಿಷ್ಠೆಯಿಂದ ಅವರು ವಿಶೇಷ ಗೌರವ ಪಡೆದಿದ್ದಾರೆ.

ಹೀಗಾಗಿ, ಮುಂದಿನ ರಾಜಕೀಯ ಸಮೀಕರಣಗಳಲ್ಲಿ ರಾಮಲಿಂಗಾ ರೆಡ್ಡಿ ಅವರಿಗೆ ಉಪ ಮುಖ್ಯಮಂತ್ರಿಯ ಸ್ಥಾನ ನೀಡಿದರೆ ಪಕ್ಷದ ಒಳಸಂಘಟನೆಗೂ ಬಲ ಸಿಗುವುದರ ಜೊತೆಗೆ ಹಿರಿಯ ನಾಯಕರಿಗೆ ಗೌರವ ನೀಡಿದಂತಾಗುತ್ತದೆ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗುತ್ತಿದೆ.

## ಚರಂಡಿ ಗಬ್ಬು ವಾಸನೆ ಕುಡಿಬೇಕ್ರಿ, ಹಾವು ಚೇಳು ಮನೆಗೇ ನುಗ್ತವ್ರೀ..!

- ಸುರೇಶ ಕೆ.ವಿ, ಮುದಗಲ್

ಸಮೀಪದ ಆಮದಿಹಾಳ, ಉಪ್ಪಾರ ನಂದಿಹಾಳ ಹಾಗೂ ಖೈರವಾಡಗಿ ಗ್ರಾಪಂ. ವ್ಯಾಪ್ತಿಯಲ್ಲಿ ಜನರ ಬದುಕೇ ನರಕಸದೃಶವಾಗಿದೆ. ಕುಡಿಯುವ ನೀರ, ಚರಂಡಿ, ಕರೆಂಟ್ ಸೇರಿದಂತೆ ಮೂಲಭೂತ ಸೌಲಭ್ಯಗಳೇ ಇಲ್ಲಿ ಮರೀಚಿಕೆಯಾಗಿದೆ. ಸಾವಿರಾರು ಸಮಸ್ಯೆಗಳ ಪರಿಹಾರವೂ ಕಣ್ಮರೆಯಾಗಿವೆ. ರಾತ್ರಿ ಸಮಯದಲ್ಲಿ ಹಾವು ಚೇಳಿನ ಕಾಟ ಯಾರ ಮುಂದೆ ಹೇಳಬೇಕು? ಎಂದು ಪ್ರಶ್ನಿಸುತ್ತಾರೆ ಜನರು.

**ಇಲ್ಲಿಪ್ರತಿಯೊಂದೂ ಇಲ್ಲ..!:** ಪ್ರತಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಐದರಿಂದ ಏಳು ಸಾವಿರ ಜನ ಸಂಖ್ಯೆ ಇದೆ. ಪ್ರತಿ ವರ್ಷ ಲಕ್ಷಾಂತರ ತೆರಿಗೆ ಸಂಗ್ರಹವಾಗುತ್ತದೆ. ಆದರೆ ರಸ್ತೆ, ಚರಂಡಿ ವ್ಯವಸ್ಥೆ, ಬಳಕೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆ, ಕರೆಂಟ, ಚರಂಡಿ ನೀರು ರಸ್ತೆಗೆ ಹರಿಯುವುದರಿಂದ ಸ್ವಚ್ಚತೆ ಸೇರಿದಂತೆ ಮೂಲಭೂತ ಸೌಲಭ್ಯ ಮಾತ್ರ ಕೇಳಬೇಡಿ ಎನ್ನುತ್ತಾರೆ, ನಮ್ಮ ಕರ್ನಾಟಕ ಸೇನೆ ಖೈರವಡಗಿ ಗ್ರಾಮಘಟಕ ಅಧ್ಯಕ್ಷ ರಾಘವೇಂದ್ರಪಂತ್‌ಗಾರ್.

**ನೀರಿನ ಮೂಲಗೇ ಮರೀಚಿಕೆ:** ಜೆ.ಜೆ.ಎಂ ಪೈಪ ಲೈನ್ ಕಾಮಗಾರಿಯಿಂದ ರಸ್ತೆ ಅಗೆದು ಗ್ರಾಮಗಳಲ್ಲಿ ತಿರಗಾಡುವ ರಸ್ತೆ ಹಾಳಾಗಿವೆ. ಗ್ರಾಮದಲ್ಲಿ ಚರಂಡಿ ಇರದ ಕಾರಣ ಮಳೆ ಬಂದಾಗ ಕಲುಷಿತ ನೀರು ಮನೆಗೆ ನುಗ್ಗುತ್ತವೆ. ಕೆಲವು ಕಡೆ ನೀರಿನ ಮೂಲಗಳೆ ಮರಿಚಿಕೆಯಾಗಿವೆ. ಅಪರೂಪಕ್ಕೆ ಬರುವ ಮಳಗೆ ಪ್ರತಿ ಯೊಂದು ಹಾದಿ ಕೆಸರುಮಯವಾಗುತ್ತವೆ ಎಂದು ದೂರುತ್ತಾರೆ ಜನತೆ.



**ಪಂಚಾಯಿತಿ ಫಜೀತಿ**



**ಕುಡಿಯೋಕೆ ಶುದ್ಧ ನೀರಿಲ್ಲ, ಕೆಸರು ಗದ್ದೆಯಂಥ ರಸ್ತೇಲಿ ನಡೀಬೇಕಲ್ಲ?**

### ಮಕ್ಕಳಿಗೆ ಸೊಳ್ಳೆ ಕಾಟ, ಅಧಿಕಾರಿಗೆ ಅವರದೇ ಆಟ

ಚರಂಡಿಯಲ್ಲಿ ಶೇಖರಣೆಯಾಗಿ ಆಮದಿಹಾಳ, ಉಪ್ಪಾರ ನಂದಿಹಾಳ ಹಾಗೂ ಖೈರವಾಡಗಿ ಗ್ರಾಮಗಳಲ್ಲಿ ಸೊಳ್ಳೆ ತಾಣವಾಗಿದೆ. ಇದರಿಂದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಸೊಳ್ಳೆಗಳ ಕಾಟದಿಂದ ಸಣ್ಣ ಮಕ್ಕಳು ಶಾಲೆಯಲ್ಲಿ ಕುಳಿತು ಪಾಠ ಕೇಳಲು ಪರಿತಪಸುವಂತಾಗಿದೆ. ಸಂಬಂಧ ಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸಿ ವಿವಿಧ ಸಮಸ್ಯೆಗಳಿಗೆ ಗಮನ ಹರಿಸಿ ಸರಿಪಡಿಸಬೇಕು ಎಂದು ಸಾರ್ವ ಜನಿಕರು ಒತ್ತಾಯಿಸಿದ್ದಾರೆ.

ನಾನು ಆಮದಿಹಾಳ ಗ್ರಾ.ಪಂ.ಗೆ ಬಂದು ಆರು ತಿಂಗಳಾಯಿತು. ಗ್ರಾಮದ ವ್ಯಾಪ್ತಿ 5 ಸಾವಿರ ಜನ ಸಂಖ್ಯೆ ಹೊಂದಿದೆ. ಕಳೆದ ವರ್ಷ ತೆರಿಗೆ ಹಣ 12 ಲಕ್ಷ ಜಮಾ ಆಗಿದೆ. ತೆರಿಗೆ ಪರಿಷ್ಕರಣೆಯಿಂದ ಈ ವರ್ಷದ ತೆರಿಗೆ ಮುಂದಿನ ವಾರದಿಂದ ಪ್ರಾರಂಭ ಮಾಡುತ್ತೇನೆ.
–ಮೊಹ್ಮದ ಇಸಾಕ್, ಪಿಡಿಒ, ಆಮದಿಹಾಳ

ಖೈರವಾಡಗಿ ಗ್ರಾಂ.ಪಂ. ವ್ಯಾಪ್ತಿಗೆ 3ಗ್ರಾಮ ಹಾಗೂ 4 ತಾಂಡ ಸೇರಿ ಒಟ್ಟು 7 ಸಾವಿರ ಜನಸಾಂದ್ರತೆ ಇದೆ. ತೆರಗೆ ಸಂಗ್ರಹ ಕಾರ್ಯಧರ್ಶಿಗಳಲ್ಲಿ ವಿಚಾರಿಸಿ ತಿಳಿಸುತ್ತೇನೆ.
–ಮಲ್ಲಿಕಾರ್ಜುನ, ಪಿಡಿಒ, ಖೈರವಾಡಗಿ

ಉಪ್ಪಾರ ನಂದಿಹಾಳ ಗ್ರಾಂ.ಪಂ 5 ಹಳ್ಳಿ 3ತಾಂಡದ ಜನ ಸಂಖ್ಯೆ ಜನಗಣತಿ ನೋಡಿ ತಿಳಿಸುತ್ತೇನೆ. ನಾನು ಗಾಡಿ ಮೇಲೆ ಇದ್ದೇನೆ ಪಂಚಾಯತಿಗೆ ಹೋಗಿ ಎಲ್ಲಾ ಮಾಹಿತಿ ತಿಳಿದುಕೊಂಡು ಹೇಳುತ್ತೇನೆ.
–ಶಿವಪ್ಪ ಉಪ್ಪಾರ, ಪಿಡಿಒ, ನಂದಿಹಾಳ

ಉಪ್ಪಾರನಂದಿಹಾಳಗ್ರಾಮ ಪಂಚಾಯತಿ ತೆರಳುವ ಮುಖ್ಯರಸ್ತೆಯಲ್ಲಿಯೇ ಚರಂಡಿಯ ಮಲಿನ ನೀರು ಹರಿಯುವುದರಿಂದ ವಾಹನ ಸವಾರರಿಗೆ, ಪಾದಾಚಾರಿಗಳಿಗೆ ತೊಂದರೆಯಾಗಿದೆ. ಕೆರೆಗೆ ತೆರಳುವ ರಸ್ತೆ ಸರಿಯಿಲ್ಲ, 2ನೇ ಅಂಗನವಾಡಿ ಕೇಂದ್ರದ ಬಿಲ್ಡಿಂಗ ಕೊರತೆ ಇದೆ.
–ವೆಂಕನಗೌಡ ಬಿ,
ಕರ್ನಾಟಕ ಜನಪರ ಹೋರಾಟ ಸಮಿತಿ ಜಿಲ್ಲಾ ಉಪಾಧ್ಯಕ್ಷ

ಇದುವರೆಗೆ ಯಾವುದೇ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಗ್ರಾಮದಲ್ಲಿ ಅದರಲ್ಲೂ ವಿಶೇಷವಾಗಿ ಖೈರವಾಡಗಿ ಗ್ರಾಮದಲ್ಲಿ ಚರಂಡಿ ವ್ಯವಸ್ಥೆಯಿಲ್ಲ, ಬಳಕೆ ನೀರು ಹಾಗೂ ಮನೆ ತೆರಳುವ ರಸ್ತೆಗಳು ಹದಗೆಟ್ಟು, ಮಳೆ ಬಂದಾಗ ಚರಂಡಿ ನೀರು ಮನೆಗೆ ನುಗ್ಗುತ್ತವೆ. ಯಾರಿಗೆ ಹೇಳೋಣು ನಮ್ಮ ಪ್ರಾಬ್ಲಮ್ಮು.
–ಹಸನ್ ಸಾಬ, ಮುಖ್ಯಸ್ಥ ಖೈರವಾಡಗಿ ಗ್ರಾಮ

## ನಾವು ಕಳವಳ ವ್ಯಕ್ತಪಡಿಸಿದೆವು, ಆದ್ರೆ ಸಿದ್ದರಾಮಯ್ಯ ಸೈಲೆಂಟ್ ಆಗಿದ್ದರು: ಸಚಿವ ಎಚ್.ಕೆ ಪಾಟೀಲ್

## ದೇಶದ ರಕ್ಷಣೆಗೆ ಎಲ್ಲರೂ ಮುಂದಾಗಬೇಕು

ದೇಶವೆಂದರೆ ಕೇವಲ ಗಡಿ, ಭೂಭಾಗ ಅಥವಾ ಸರ್ಕಾರ ಮಾತ್ರವಲ್ಲ. ದೇಶದ ಜನರು, ಸಂಸ್ಕೃತಿ, ಭಾಷೆ, ಪರಂಪರೆ, ರೈತರು, ಸೈನಿಕರು ಹಾಗೂ ನಮ್ಮ ಬದುಕಿನ ಮೌಲ್ಯಗಳ ಸಮಗ್ರ ರೂಪವೇ ದೇಶವಾಗಿದೆ. ಆದ್ದರಿಂದ ದೇಶದ ರಕ್ಷಣೆಯ ಜವಾಬ್ದಾರಿ ಕೇವಲ ಸೈನಿಕರದ್ದೇ ಅಲ್ಲ, ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಆಗಿದೆ.

ಇಂದು ನಮ್ಮ ದೇಶ ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಗಡಿಯಲ್ಲಿ ಶತ್ರುರಾಷ್ಟ್ರಗಳ ಕುತಂತ್ರ, ಒಳನಾಡಿನಲ್ಲಿ ಭಯೋತ್ಪಾದನೆ, ಸಾಮಾಜಿಕ ಅಶಾಂತಿ, ಭ್ರಷ್ಟಾಚಾರ, ನಕಲಿ ಸುದ್ದಿಗಳು ಹಾಗೂ ಸಮಾಜವನ್ನು ವಿಭಜಿಸುವ ಶಕ್ತಿಗಳು ದೇಶದ ಏಕತೆಗೆ ಧಕ್ಕೆ ತರುತ್ತಿವೆ. ಇಂತಹ ಸಂದರ್ಭಗಳಲ್ಲಿ ಪ್ರತಿಯೊಬ್ಬ ಭಾರತೀಯನು ಜಾಗೃತನಾಗಬೇಕು.

## ಸಂಪಾದಕೀಯ

**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**



ದೇಶದ ಗಡಿಯಲ್ಲಿ ನಮ್ಮ ಸೈನಿಕರು ತಮ್ಮ ಪ್ರಾಣ ತ್ಯಾಗ ಮಾಡಿ ದೇಶ ಕಾಪಾಡುತ್ತಿದ್ದಾರೆ. ಅವರ ತ್ಯಾಗವನ್ನು ಗೌರವಿಸುವುದು ಪ್ರತಿಯೊಬ್ಬರ ಹೊಣೆ. ಯುವಕರು ದೇಶಭಕ್ತಿ ಬೆಳೆಸಿಕೊಂಡು ಸೇನೆ, ಪೊಲೀಸ್ ಹಾಗೂ ಸಾರ್ವಜನಿಕ ಸೇವೆಗಳ ಕಡೆ ಆಸಕ್ತಿ ತೋರಬೇಕು. ದೇಶದ ಕಾನೂನು ಪಾಲನೆ ಮಾಡುವುದು, ತೆರಿಗೆ ಸರಿಯಾಗಿ ಪಾವತಿಸುವುದು, ಸಾರ್ವಜನಿಕ ಆಸ್ತಿಗಳನ್ನು ಕಾಪಾಡುವುದು ಕೂಡ ದೇಶಸೇವೆಯೇ ಆಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳನ್ನು ಹರಡುವುದು, ಧರ್ಮ–ಜಾತಿ ಹೆಸರಿನಲ್ಲಿ ದ್ವೇಷ ಬೀಜ ಬಿತ್ತುವುದು ದೇಶದ ಶಾಂತಿಗೆ ಅಪಾಯಕಾರಿಯಾಗಿದೆ. ಜನರು ಯೋಚಿಸಿ ಮಾತನಾಡಬೇಕು, ಪರಿಶೀಲಿಸಿ ಮಾಹಿತಿ ಹಂಚಬೇಕು. ಏಕತೆ ಮತ್ತು ಸೌಹಾರ್ದತೆಯೇ ದೇಶದ ನಿಜವಾದ ಶಕ್ತಿ ಎಂಬುದನ್ನು ಮರೆಯಬಾರದು.

ಶಾಲೆ–ಕಾಲೇಜುಗಳಲ್ಲಿ ದೇಶಭಕ್ತಿ, ಸಂವಿಧಾನ ಮೌಲ್ಯಗಳು ಹಾಗೂ ರಾಷ್ಟ್ರೀಯ ಏಕತೆ ಕುರಿತು ಹೆಚ್ಚಿನ ಅರಿವು ಮೂಡಿಸುವ ಅಗತ್ಯವಿದೆ. ಯುವ ಪೀಳಿಗೆಗೆ ದೇಶದ ಇತಿಹಾಸ, ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಹಾಗೂ ಭಾರತೀಯ ಸಂಸ್ಕೃತಿಯ ಮಹತ್ವ ತಿಳಿಸಬೇಕು.

ದೇಶದ ರಕ್ಷಣೆ ಎಂದರೆ ಕೇವಲ ಯುದ್ಧ ಸಮಯದಲ್ಲಿ ಮಾತ್ರವಲ್ಲ; ಶಾಂತಿಯ ಕಾಲದಲ್ಲಿಯೂ ದೇಶದ ಅಭಿವೃದ್ಧಿಗೆ ಕೈಜೋಡಿಸುವುದು, ಪರಿಸರ ಸಂರಕ್ಷಣೆ, ರೈತರ ಗೌರವ, ಮಹಿಳೆಯರ ಸುರಕ್ಷತೆ ಹಾಗೂ ಸಮಾಜದ ಶಾಂತಿಯನ್ನು ಕಾಪಾಡುವುದು ಸಹ ದೇಶಭಕ್ತಿಯ ಒಂದು ರೂಪವಾಗಿದೆ.

"ದೇಶ ಉಳಿದರೆ ನಾವು ಉಳಿಯುತ್ತೇವೆ" ಎಂಬ ಭಾವನೆ ಪ್ರತಿಯೊಬ್ಬರಲ್ಲೂ ಮೂಡಬೇಕು. ದೇಶದ ಏಕತೆ, ಅಖಂಡತೆ ಹಾಗೂ ಗೌರವ ಕಾಪಾಡಲು ಎಲ್ಲರೂ ಕೈಜೋಡಿಸಿದಾಗ ಮಾತ್ರ ಭಾರತ ಮತ್ತಷ್ಟು ಬಲಿಷ್ಠ ರಾಷ್ಟ್ರವಾಗಿ ಬೆಳೆಯಲು ಸಾಧ್ಯ.

## ಎಂಎಲ್ಸಿ ಸ್ಥಾನ ಮುಂದುವರಿಸಿ, ಸಚಿವ ಸ್ಥಾನ ನೀಡಿ



**ಗಂಗಾವತಿ:** ಕಾಂಗ್ರೆಸ್ ಪಕ್ಷದ ನಿಷ್ಠಾವಂತ ನಾಯಕ ಹಾಗೂ ಗಂಗಾಮತ ಸಮಾಜದ ಹಿರಿಯ ಮುಖಂಡ ತಿಪ್ಪಣ್ಣ ಕಮಕನೂರ್ ಅವರನ್ನು ವಿಧಾನ ಪರಿಷತ್ ಸದಸ್ಯ (ಎಂಎಲ್ಸಿ) ಸ್ಥಾನದಲ್ಲಿ ಮುಂದುವರಿಸಬೇಕು ಮತ್ತು ಮುಂದಿನ ದಿನಗಳಲ್ಲಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಗಂಗಾಮತ ಸಮಾಜದ ಮುಖಂಡರು ರಾಜ್ಯ ಸರ್ಕಾರ ಹಾಗೂ ಕಾಂಗ್ರೆಸ್ ಹೈಕಮಾಂಡ್‌ಗೆ ಒತ್ತಾಯಿಸಿದ್ದಾರೆ.

ನಗರದ ಸರೋಜಮ್ಮ ಕಲ್ಯಾಣ ಮಂಟಪದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಸಮಾಜದ ವಿವಿಧ ಸ್ತರದ ಮುಖಂಡರು ಈ ಆಗ್ರಹ ಮಂಡಿಸಿದರು. ಈ ಬೇಡಿಕೆಗೆ ಹೈಕಮಾಂಡ್ ಮೇಲೆ ಒತ್ತಡ ಹೇರಲು ರಾಜ್ಯಾದ್ಯಂತ ಇರುವ ಸಮಾಜದ ಪ್ರಮುಖರನ್ನು ಒಗ್ಗೂಡಿಸಿಕೊಂಡು ಬೆಂಗಳೂರಿಗೆ ಬೃಹತ್ ನಿಯೋಗ ಕೊಂಡೊಯ್ಯಲು ತೀರ್ಮಾನಿಸಲಾಗಿದೆ.

**ಪಕ್ಷಕ್ಕಾಗಿ ನಿಷ್ಠಾವಂತ ಸೇವೆ:** ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಗಂಗಾಮತ ಸಮಾಜದ ಜಿಲ್ಲಾ ಗೌರವ ಅಧ್ಯಕ್ಷ ರಾಜಶೇಖರ ಮುಸ್ಟೂರು ಅವರು, "ತಿಪ್ಪಣ್ಣ ಕಮಕನೂರ್ ಅವರು ದಶಕಗಳಿಂದ ಕಾಂಗ್ರೆಸ್ ಪಕ್ಷದ ಬಲವರ್ಧನೆಗಾಗಿ ಪ್ರಾಮಾಣಿಕವಾಗಿ ದುಡಿದಿದ್ದಾರೆ. ರಾಜ್ಯದಲ್ಲಿ ಗಂಗಾಮತ ಸಮುದಾಯವು ಅತಿ ದೊಡ್ಡ ಜನಸಂಖ್ಯೆಯನ್ನು ಹೊಂದಿದ್ದು, ಸಮಾಜದ ಧ್ವನಿಯಾಗಿ ಕೆಲಸ ಮಾಡಲು ಕಮಕನೂರ್ ಅವರಂತಹ ನಾಯಕರ ಅಗತ್ಯವಿದೆ. ಅವರ ಶ್ರಮವನ್ನು ಗುರುತಿಸಿ ಎಂಎಲ್ಸಿ ಸ್ಥಾನವನ್ನು ಮುಂದುವರಿಸುವ ಮೂಲಕ ಪಕ್ಷವು ಸಮಾಜಕ್ಕೆ ನ್ಯಾಯ ಒದಗಿಸಬೇಕು," ಎಂದರು.

**ಸಚಿವ ಸ್ಥಾನಕ್ಕೆ ಆಗ್ರಹ:** ಮಾಜಿ ಎಂಎಲ್ಸಿ ಎಚ್.ಆರ್. ಶ್ರೀನಾಥ್ ಮಾತನಾಡಿ, "ತಿಪ್ಪಣ್ಣ ಕಮಕನೂರ್ ಅವರು ಕೇವಲ ಸ್ವ–ಸಮುದಾಯಕ್ಕೆ ಸೀಮಿತವಾಗದೆ, ಸರ್ವ ಸಮಾಜದ ಒಳಿತಿಗಾಗಿ ಹಾಗೂ ಹಿಂದುಳಿದ ವರ್ಗಗಳ ಏಳಿಗೆಗಾಗಿ ಶ್ರಮಿಸಿ ಎಲ್ಲರ ವಿಶ್ವಾಸ ಗಳಿಸಿದ್ದಾರೆ. ಮುಂದಿನ ದಿನಗಳಲ್ಲಿ ಸಚಿವ ಸಂಪುಟ ವಿಸ್ತರಣೆಯಾದರೆ ಅವರಿಗೆ ಸಚಿವ ಸ್ಥಾನ ನೀಡಬೇಕು. ಇದರಿಂದ ಶೋಷಿತ ಸಮಾಜಗಳ ಅಭಿವೃದ್ಧಿಗೆ ಮತ್ತಷ್ಟು ಆನೆಬಲ ಬಂದಂತಾಗುತ್ತದೆ," ಎಂದು ಅಭಿಪ್ರಾಯಪಟ್ಟರು.

**ಸಮುದಾಯಕ್ಕೆ ಸಿಗುವ ಗೌರವ:** ತಾಲೂಕು ಅಧ್ಯಕ್ಷ ಹನುಮೇಶ ಭಟಾರಿ ಮಾತನಾಡಿ, "ಕಾಂಗ್ರೆಸ್ ಪಕ್ಷವು ಈ ಹಿಂದೆ ಕಮಕನೂರ್ ಅವರ ಶ್ರಮಕ್ಕೆ ತಕ್ಕಂತೆ ಎಂಎಲ್ಸಿ ಸ್ಥಾನ ನೀಡಿ ಗೌರವಿಸಿದೆ. ಈಗ ಅದೇ ಸ್ಥಾನವನ್ನು ಮುಂದುವರಿಸುವ ಮೂಲಕ ಸಮಸ್ತ ಗಂಗಾಮತ ಕುಲಬಾಂಧವರ ಗೌರವವನ್ನು ಕಾಪಾಡಬೇಕು," ಎಂದು ವಿನಂತಿಸಿದರು.

**ಬೆಂಗಳೂರಿಗೆ ನಿಯೋಗ:** ತಿಪ್ಪಣ್ಣ ಕಮಕನೂರ್ ಅವರ ರಾಜಕೀಯ ಭವಿಷ್ಯ ಹಾಗೂ ಸಮಾಜದ ಹಿತದೃಷ್ಟಿಯಿಂದ ಕಾಂಗ್ರೆಸ್ ನಾಯಕರನ್ನು ಭೇಟಿಯಾಗಿ ಒತ್ತಡ ಹೇರಲು ಶೀಘ್ರದಲ್ಲೇ ರಾಜ್ಯದ ವಿವಿಧ ಜಿಲ್ಲೆಗಳ ಮುಖಂಡರನ್ನೊಳಗೊಂಡ ನಿಯೋಗ ರಾಜಧಾನಿ ಬೆಂಗಳೂರಿಗೆ ತೆರಳಲಿದೆ ಎಂದು ಮುಖಂಡರು ಇದೇ ವೇಳೆ ಪ್ರಕಟಿಸಿದರು.

**ಉಪಸ್ಥಿತಿ:** ಈ ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಉಪಾಧ್ಯಕ್ಷ ಪರಶುರಾಮ ಮಡ್ಡೇರ್, ಗೌರವ ಅಧ್ಯಕ್ಷ ಹುಲಗಪ್ಪ ಕಾಪು, ನಿಜಶರಣ ಅಂಬಿಗರ ಚೌಡಯ್ಯ ಯುವಕ ಸಂಘದ ಅಧ್ಯಕ್ಷ ಭೈರೇಶ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಶಿವಕುಮಾರ ಅರಿಕೇರಿ, ಮುಖಂಡರಾದ ಸಿದ್ದಪ್ಪ ಸೇರಿದಂತೆ ಸಮಾಜದ ಪ್ರಮುಖರು ಉಪಸ್ಥಿತರಿದ್ದರು.

# ಅವಿಭಕ್ತ ಕುಟುಂಬದಲ್ಲಿ ಜೀವನ ಸಾಗಿಸಿ: ಬಸವಲಿಂಗ ಅವಧೂತ





• ಮಲ್ಲಮ್ಮ ನುಡಿ ವಾರ್ತೆ ಬೀದರ್

ಒಂದೇ ಮನೆಯಲ್ಲಿ ಜೀವನ ಸಾಗಿಸಿ ಸಂಭಂಧ ವೃದ್ದಸಿಕೋಳ್ಳಿಮುಂದಿನ ಪೀಳಿಗೆಗೆಮಾರ್ಗದರ್ಶಿಯಾಗಿ ಎಂದು ಜಹೀರಾಬಾದ್ ತಾಲ್ಲೂಕಿನ ಮಲ್ಲಯ್ಯಗಿರಿ ಹಾಗೂ ದೇಗಲಮಡಿ ಆಶ್ರಮದ ಪೀಠಾಧಿಪತಿ ಡಾ. ಬಸವಲಿಂಗ ಅವಧೂತರು ನುಡಿದರು.

ಬೀದರ ತಾಲ್ಲೂಕಿನ ಕೋಳಾರ (ಕೆ) ಗ್ರಾಮದಲ್ಲಿ ಆಯೋಜಿಸಿದ್ದ ಶ್ರೀ ಸಾಯಿ ಬಾಬಾ ಮಂದಿರ 12ನೇ ಜಾತ್ರಾ ಮಹೋತ್ಸವ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದರು. ಇಂದಿನ ಮಕ್ಕಳಿಗೆ ಮನೆಯಲ್ಲಿ ಸಂಸ್ಕಾರ ಸಿಗದ ಕಾರಣ ಮದುವೆಯಾದ ಕೆಲವೇ ದಿನಗಳಲ್ಲಿ ವಿಚ್ಚೇದವಾಗುತ್ತಿವೆ ಎಂದು ವಿಷಾದ ವ್ಯಕ್ತ ಪಡಿಸಿದರು. ಭಾರತ ದೇಶದಲ್ಲಿ ಮಹಿಳಿಯರಿಗೆ ವಿಶೇಷ ಸ್ಥಾನ ಇದೆ. ದೇವತೆ ಎಂದಲ್ಲೂ ಪೂಜಿಸುತ್ತಾರೆ ಎಂದು ಹೇಳಿದರು.

ಸಾಯಿ ಬಾಬಾ ಅವರಲ್ಲಿ ಒಂದು ದೊಡ್ಡ ಶಕ್ತಿ ಇತ್ತು ಅದನ್ನು ಒಳ್ಳೆದಕ್ಕೆ ಮಾತ್ರ ಬಳಸುತ್ತಿದ್ದರು ಆವರೊಬ್ಬ ಪವಾಡ ಪುರುಷರಾಗಿದ್ದರು ಎಂದು ಹೇಳಿದರು. ಇಂತಹ ಜಾತ್ರಾ ಮಹೋತ್ಸವಗಳು ನಡೆಯುವುದರಿಂದ ಸಂಬಂಧಗಳು ವೃದ್ಧಿಯಾಗುತ್ತವೆ ಎಂದು ನುಡಿದರು. ಯಾರೊಬ್ಬರು ಒಳ್ಳೆಯದನ್ನು ಹೇಳಿದರೆ ಸ್ವೀಕರಿಸುವ ಗುಣ ಎಲ್ಲರೂ ಹೊಂದಬೇಕು.

ಶರಣರು, ಸಂತರು, ಪೂಜ್ಯರ ವಾಣಿಗಳನ್ನು ಆಲಿಸಬೇಕು, ತಂದೆ ತಾಯಿಯ ಜೀವಿತವರೆಗೂ ಅವರ ಸೇವೆ ಮಾಡಲೇ ಬೇಕು ಎಂದರು.

ಒತ್ತಡದ ಜೀವನ ಶೈಲಿಯಿಂದಾಗಿ ಅನೇಕ ರೋಗಗಳಿಗೆ ಮನುಷ್ಯ ಒಳಗಾಗುತ್ತಿದ್ದಾನೆ. ಒತ್ತಡದಿಂದ ಮುಕ್ತಿ ಹಾಗೂ ಸುಂದರ ಜೀವನ ಕಟ್ಟಿಕೊಳ್ಳಲು ಪ್ರವಚನ, ಪುರಾಣ ಆಲಿಸಬೇಕು. ಎಂದು ತಿಳಿಸಿದರು. ವೈದ್ಯ ಡಾ. ಶ್ರೇಯಶ್ ಹೆಬ್ಬಾಳಕರ್ ಮಾತನಾಡುತ್ತಾ ಡಾ. ಬಸವಲಿಂಗ ಅವಧೂತರು ಪವಾಡ ಪುರುಷರಾಗಿದ್ದಾರೆ. ಇವರನ್ನು ಭಕ್ತಿಯಿಂದ ನಡೆದುಕೊಂಡರೆ ಬಂದಿರುವ ತೊಂದರೆಗಳು ತಾನ್ನಾಗಿಯೇ ದೂರವಾಗುತ್ತವೆ ಎಂದು ಹೇಳಿದರು.

ಇದಕ್ಕೂ ಮುನ್ನ ಶ್ರೀ ಸಾಯಿ ಬಾಬಾ ಮೂರ್ತಿಗೆ ಅವಧೂತರು ಪೂಜ್ಯ ಸಲ್ಲಿಸಿದರು

ದೇವಸ್ಥಾನದ ದೀಲಿಪ ವಡಗಾಂವೆ, ಅಮರ ವಡಗಾಂವೆ, ಅನೀಲ ಕೋಟೆ, ಶಂಕರ ಸಿಂದೆ, ಸಂತೋಷ ಸ್ವಾಮಿ, ಶಂಕ್ರಣ್ಣಾ ಕೋಳಾರ, ರಾಹುಲ್, ಮೊದಲಾದವರು ಇದ್ದರು.

# ಜ್ಞಾನದ ಜೊತೆಗೆ ಕೌಶಲ್ಯ ಇದ್ದರೆ ಯಾವುದೇ ಕ್ಷೇತ್ರದಲ್ಲಿಯೂ ಯಶಸ್ವಿ

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ



ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ದೈಹಿಕ ಆರೋಗ್ಯ ಜೋತೆ ಕೌಶಲ್ಯಗಳನ್ನು ಬೆಳಸಿಕೊಳ್ಳಬೇಕು. ಮೊಬೈಲ್ ನಿಂದ ವಿದ್ಯಾರ್ಥಿಗಳು ದೂರ ಉಳಿದಾಗ ಮಾತ್ರ ಯಶಸ್ವಿಯಾಗಲು ಸಾಧ್ಯ ಎಂದು ಪುಣ್ಯಕೋಟಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಸೂರ್ಯಕಾಂತ ಶೀಲವಂತ ಹೇಳಿದರು. ನಗರದ ಎಸ್ ಎಸ್ ಕೆ ಬಸವೇಶ್ವರ ಮಹಾವಿದ್ಯಾಲಯದಲ್ಲಿ ವಾಣಿಜ್ಯ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಬೇಕು. ಜ್ಞಾನದ ಜೊತೆಗೆ ಕೌಶಲ್ಯ ಇದ್ದರೆ ವಿಶ್ವದಲ್ಲಿ ಯಾವುದೇ ಕ್ಷೇತ್ರದಲ್ಲಿಯೂ ಯಶಸ್ವಿಯಾಗಬಹುದು, ಪದವಿ ಮುಗಿದ ನಂತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಿ, ಅದರ ಜೊತೆಗೆ ಸ್ವಾವಲಂಬಿಗಳಾಗಿಬೇಕು, ನೌಕರಿಗಾಗಿ ಹುಡುಕುವುದು ಬೇಡ ಇನ್ನೊಬ್ಬರಿಗೆ ನೀವೇ ನೌಕರಿ ನೀಡುವಂತಹರಾಗಬೇಕಂದರು. ಅಧ್ಯಕ್ಷತೆ ವಹಿಸಿದ್ದ ಎಸ್ ಎಸ್ ಕೆ ಬಸವೇಶ್ವರ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಶಿವಕುಮಾರ ಪಾಟೀಲ್ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಅವಕಾಶಗಳು ಎಲ್ಲರಿಗು ಸಮಾನವಾಗಿ ದೊರೆಯುತ್ತವೆ. ಆದರೆ ಅದನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದು ನಿಮ್ಮಗೆ ಬಿಟ್ಟಿದ್ದು ಎಂದು ತಿಳಿಸಿದರು, ವಿದ್ಯಾರ್ಥಿಗಳು ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಸಾಧಿಸುವ ಹಂಬಲ ಮತ್ತು ಛಲ ಎರಡು ಇರಬೇಕು. ಸಮಯದ ಸುದುಪಯೋಗ ಮಾಡಿಕೋಳ್ಳಬೇಕು. ವಿದ್ಯಾರ್ಥಿಗಳ ಮುಂದಿನ ಜೀವನಕ್ಕೆ ಶುಭ ಹಾರೈಸಿದರು. ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಭಾಗ್ಯಶ್ರೀ ಘೋಲೆ ಅವರು ಪ್ರಾಸ್ತಾವಿಕವಾಗಿ ಮಹಾವಿದ್ಯಾಲಯದ ಸಾಧನೆ ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಎನ್.ಎಸ್.ಎಸ್ ಅಧಿಕಾರಿ ಡಾ.ಸುರೇಶ್ ಎಚ್.ಆರ್, ಐಕ್ಯೂಎಸಿ ಸಂಯೋಜಕರಾದ ಡಾ.ವಿಜಯಕುಮಾರ, ಕಲ್ಯಾಣಪ್ಪ ನಾವದಗಿ, ಶರಣು ಮಠಪತಿ, ನಾಗರಾಜ, ಶಶಿಧರ, ಸುಮನ ರೆಡ್ಡಿ, ಕು. ಅಶ್ವಿನಿ ಜಲಾದೆ, ಪೂಜಾ. ಎನ್, ಶಿಲ್ಪಾ ಬಿರಾದಾರ, ನಾಗಮ್ಮ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಕು.ಪ್ರಿಯದರ್ಶಿನಿ ಸ್ವಾಗತಿಸಿದರು. ಕು. ಭಾಗ್ಯಶ್ರೀ ವಂದಿಸಿದರು. ಶಂಕರ ಮತ್ತು ವಿಜಯಲಕ್ಷ್ಮಿ ನಿರೂಪಿಸಿದರು. ಕು.ವಿಜಯಲಕ್ಷ್ಮೀ ಪ್ರಾರ್ಥನಾ ಗೀತೆ ಹಾಡಿದರು.

# ಹಾಲು ಉತ್ಪಾದಕರ ಸಹಕಾರಿ ಸಂಘದ ಆಯ್ಕೆ ಪ್ರಕ್ರಿಯೆ: ವಿಜಯೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಬಂಗಾರಪೇಟೆ



ಶಾಸಕ ಎಸ್‌ಎನ್ ನಾರಾಯಣಸ್ವಾಮಿರವರು ಕೋಲಾರ ಹಾಲು ಒಕ್ಕೂಟದ ನಿರ್ದೇಶಕರಾದ ನಂತರ ಕ್ಷೇತ್ರದಲ್ಲಿ ಹೈನೋಧ್ಯಮಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಲು ನಿರ್ಧಾರ ಮಾಡಿದ್ದಾರೆ. ಅವರ ದೂರ ದೃಷ್ಟಿ ಚಿಂತನೆಗಳಿಗೆ ಅನುಗುಣವಾಗಿ ಇಂದು ನೂತನವಾಗಿ ಹಾಲು ಉತ್ಪಾದಕರ ಸಂಘ ಸ್ಥಾಪನೆಯಾಗಿದ್ದು ಇದಕ್ಕೆ ಪೂರಕ ಎಂಬಂತೆ ಸರ್ವ ಸದಸ್ಯರ ಸಹಕಾರ ಮತ್ತು ಬೆಂಬಲದೊಂದಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆದಿದೆ ಎಂದು ಅಧ್ಯಕ್ಷ ಎಸ್ ರಾಮಚಂದ್ರ ತಿಳಿಸಿದರು.

ತಾಲೂಕಿನ ಆಲಂಬಾಡಿ ಜೋತೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೂತನವಾಗಿ ಸ್ಥಾಪನೆಯಾದ ಹಾಲು ಉತ್ಪಾದಕರ ಸಹಕಾರಿ ಸಂಘದ ಆಯ್ಕೆ ಪ್ರಕ್ರಿಯೆಯ ನಂತರ ವಿಜಯೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಹಾಲು ಉತ್ಪಾದನೆ ರೈತರ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ಅತ್ಯಂತ ನಿರ್ಣಾಯಕ ಪಾತ್ರ ವಹಿಸುತ್ತದೆ, ಇದಕ್ಕೆ ಪೂರಕ ಎಂಬಂತೆ ಹಲವು ಬಾರಿ ನಮ್ಮ ಗ್ರಾಮದಲ್ಲಿ ಡೇರಿ ಸ್ಥಾಪನೆ ಮಾಡುವಂತೆ ಶಾಸಕರಿಗೆ ಮನವಿ ಮಾಡಲಾಗಿತ್ತು. ನಮ್ಮ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಶಾಸಕರು ನೂತನ ಡೇರಿ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟರು. ಇದರೊಟ್ಟಿಗೆ ಹಾಲು ಉತ್ಪಾದಕರ ಸಹಕಾರಿ ಸಂಘ ಸ್ಥಾಪನೆ ಮಾಡಿರುವುದು ಈ ಭಾಗದ ರೈತರಲ್ಲಿ ಮತ್ತಷ್ಟು ಶಕ್ತಿ ತುಂಬಿದೆ ಎಂದರು.

**ಪರಸ್ಪರ ಸಹಕಾರ ಮತ್ತು ಬೆಂಬಲದೊಂದಿಗೆ ಪ್ರಾಮಾಣಿಕ ಪ್ರಯತ್ನ:** ಉಪಾಧ್ಯಕ್ಷ ಚಂದ್ರಪ್ಪ ಮಾತನಾಡಿ ಇದೇ ಮೊದಲ ಬಾರಿಗೆ ನೂತನ ಸಂಘ ಸ್ಥಾಪನೆಯಾಗಿದ್ದು ಕಾಂಗ್ರೆಸ್ ಬೆಂಬಲಿತರು ಅಭಿರೋಧವಾಗಿ ಆಯ್ಕೆಯಾಗಿದ್ದಾರೆ, ಸರ್ವ ಸದಸ್ಯರ ಸಹಕಾರ ಮತ್ತು ಬೆಂಬಲದೊಂದಿಗೆ ಹಾಲು ಉತ್ಪಾದಕರ ಸಂಘದ ಶ್ರೇಯೋಭಿವೃದ್ಧಿಗೆ ಮತ್ತು ರೈತರ ಭವಿಷ್ಯವನ್ನು ರೂಪಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

**ಐದು ವರ್ಷದಲ್ಲಿ ಅಧಿಕಾರ:** ಅಲಂಬಾಡಿ ಜ್ಯೋತೇನಹಳ್ಳಿ ಗ್ರಾಮದಲ್ಲಿ ನೂತನವಾಗಿ ಸ್ಥಾಪಿತವಾದ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷರಾಗಿ ಎಸ್ ರಾಮಚಂದ್ರ ಹಾಗೂ ಉಪಾಧ್ಯಕ್ಷರಾಗಿ ಎಂ ಚಂದ್ರಪ್ಪ ನವರು ಸ್ಥಳೀಯ ಆಡಳಿತ ಮಂಡಳಿಯ ನಿರ್ದೇಶಕರ ಒಮ್ಮತದ ನಿರ್ಧಾರದ ಮೇರೆಗೆ 5 ವರ್ಷಗಳ ಪೂರ್ಣಾವಧಿಗೆ ಅವಿರೋಧವಾಗಿ ಆಯ್ಕಯಾಗಿದ್ದಾರೆ, ಹಾಗೂ ನಿರ್ದೇಶಕರಾಗಿ ಹರೀಶ್, ಚಂದ್ರಪ್ಪ ಮಂಜುನಾಥ್, ಸತೀಶ್ ಕುಮಾರ್ ಗೌಡ, ಕೃಷ್ಣಪ್ಪ, ಎಲ್ಲೇಶ್, ವೆಂಕಟೇಶ್, ಶ್ರೀಧರ್, ಕನಕಮ್ಮ, ಶಾಂತಮ್ಮ, ಆಯ್ಕೆ ಆಗಿರುವುದಾಗಿ ಚುನಾವಣಾಧಿಕಾರಿ ಬಾಲಕೃಷ್ಣ ತಿಳಿಸಿದರು.

# ಮೇ.30ರಂದು ಬೀದರ್‌ನಲ್ಲಿ ಎಸ್.ಆಯ್.ಆರ್ ವಿರೋಧಿಸಿ ಪ್ರತಿಭಟನೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್



ಈ ತಿಂಗಳ 30ರಂದು ನಗರದ ಅಂಬೇಡ್ಕರ್ ವೃತ್ತದಲ್ಲಿ ಅಂದು ಬೆಳಿಗ್ಗೆ 11 ಗಂಟೆಗೆ ಮತದಾರರ ತೀವ್ರಪರಿಷ್ಕರಣೆ (ಎಸ್.ಆಯ್.ಆರ್) ವಿರೋಧಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಎದ್ದೇಳು ಕರ್ನಾಟಕ ಸಂಘಟನೆಯ ಜಿಲ್ಲಾ ಸಂಯೋಜ–ಕರಾದ ಓಂಪ್ರಕಶ ರೊಟ್ಟೆ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡುವ ಅವರು, ಅಲ್ಪಸಂಖ್ಯಾತ ಸಮುದಾಯದ ವಿವಿಧ ಸಂಘಟನೆಗಳು, ದಲಿತ ಸಮುದಾಯದ ಹಲವು ಸಂಘಟಕರು, ಹಿಂದುಳಿದ ವರ್ಗಗಳ ಮುಖಂಡರು ಸೇರಿದಂತೆ ಸುಮಾರು 39ಕ್ಕೂ ಅಧಿಕ ಸಂಘಟನೆಗಳು ಈ ಪ್ರತಿಭಟನೆಯಲ್ಲಿ ಭಾಗವಹಿಸುವರು. ಎಲ್ಲರ ಅಭಿಪ್ರಾಯ ಮಂಡನೆ ಆದ ಬಳಿಕ ಬೀದರ್ ಸಹಾಯಕ ಆಯುಕ್ತರ ಕಚೇರಿಗೆ ತೆರಳಿ ರಾಷ್ಟ್ರಪತಿಗಳಿಗೆ, ಮುಖ್ಯಮಂತ್ರಿಗಳಿಗೆ ಈ ಕುರಿತು ಮನವಿ ಪತ್ರ ಸಲ್ಲಿಸಲಾಗುವುದೆಂದು ಹೇಳಿದರು.

ಎಸ್.ಆಯ್.ಆರ್ ಪ್ರಕ್ರಿಯೆಯ ವಿರುದ್ಧ ಜಾತ್ಯತೀತ ಪಕ್ಷಗಳು ಹಾಗೂ ಜನಪರ ಸಂಘಟನೆಗಳ ಒಕ್ಕೂಟವು ರಾಜ್ಯವ್ಯಾಪಿ "ಕರ್ನಾಟಕ ಪ್ರತಿರೋಧ" ಪ್ರತಿಭಟನೆಗೆ ಕರೆ ನೀಡಿದೆ. ಅಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮೊದಲ ಸುತ್ತಿನ ಪ್ರತಿಭಟನೆ ನಡೆಯಲಿದ್ದು, "ಇದು ಬಿಹಾರವೂ ಅಲ್ಲ, ಬಂಗಾಳವೂ ಅಲ್ಲ, ಬಸವಣ್ಣರ ಕರ್ನಾಟಕ" ಎಂಬ ಸಂದೇಶವನ್ನು ಜನರಿಗೆ ರವಾನಿಸಲಾಗುವುದು ಎಂದು ಹೇಳಿದರು.

ಕೇಂದ್ರ ಚುನಾವಣಾ ಆಯೋಗವು ಇ.ಸಿ ಎಸ್. ಆಯ್.ಆರ್ ಹೆಸರಿನಲ್ಲಿ ಕೋಟ್ಯಾಂತರ ಜನರ ಮತದಾನದ ಹಕ್ಕು ಕಸಿಯುವ ಕೆಲಸಕ್ಕೆ ಕೇಂದ್ರ ಸರ್ಕಾರ ಮುಂದಾಗಿದೆ. ಈಗಾಗಲೇ 12 ರಾಜ್ಯಗಳಲ್ಲಿ ನಡೆದಿರುವ ಎಸ್.ಆಯ್.ಆರ್ ಪ್ರಕ್ರಿಯೆಯಿಂದ ಸುಮಾರು6.5 ಕೋಟಿ ಜನರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಹೇಳಿ, ಇವರಲ್ಲಿ ಬಹುತೇಕರು ಅರ್ಹ ಮತದಾರರೇ ಆಗಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆಗೆ ಯಾರೂ ವಿರೋಧಿಗಳಲ್ಲ. ಆದರೆ, ಪ್ರತಿಯೊಬ್ಬರನ್ನೂ ಅನುಮಾನಾಸ್ಪದರಂತೆ ಕಾಣುವ ಮತ್ತು ಸಣ್ಣಪುಟ್ಟ ಕಾರಣಗಳನ್ನು ಹೇಳಿ ಮತದಾರರ ಪಟ್ಟಿಯಿಂದ ಕೈಬಿಡುವ ಕ್ರಮ ಪ್ರಜಾಪ್ರಭುತ್ವ ವಿರೋಧಿಯಾಗಿದೆ ಎಂದು ಟೀಕಿಸಿದರು.

ಜನವಿರೋಧಿ ಎಸ್.ಆಯ್.ಆರ್ ಪ್ರಕ್ರಿಯೆಯನ್ನು ತಕ್ಷಣ ನಿಲ್ಲಿಸಬೇಕು, "ಲಾಜಿಕಲ್ ಡಿಸ್ಕ್ರಿಪೆನ್ಸಿ" ಸಾಫ್ಟ್‌ವೇರ್ ಬಳಕೆಯನ್ನು ಸಂಪೂರ್ಣ ನಿಷೇಧಿಸಬೇಕು, ಮತದಾರರ ಪಟ್ಟಿಯನ್ನು ಪಾರದರ್ಶಕ ಹಾಗೂ ಮೆಷಿನ್–ರೀಡಬಲ್ ರೂಪದಲ್ಲಿ ಸಾರ್ವಜನಿಕರಿಗೆ ಲಭ್ಯ ಮಾಡಬೇಕು, ಕರಡು ಪಟ್ಟಿಗೆ ಗ್ರಾಮಸಭೆ ಹಾಗೂ ವಾರ್ಡ್ ಸಭೆಗಳ ಮೂಲಕ ಸಾರ್ವಜನಿಕ ಪರಿಶೀಲನೆ ನಡೆಸಬೇಕು, ದಾಖಲೆ ಸಲ್ಲಿಕೆ ಹಾಗೂ ಮೇಲ್ಮನವಿಗೆ ಕನಿಷ್ಠ ಆರು ತಿಂಗಳ ಅವಧಿ ನೀಡಬೇಕು, ರಾಜ್ಯ ಸರ್ಕಾರವು ಅಗತ್ಯವಿದ್ದರೆ ಸುಪ್ರೀಂ ಕೋರ್ಟ್ ಮೊರೆ ಹೋಗಬೇಕು ಹಾಗೂ ವಿಶೇಷ ಗ್ರಾಮಸಭೆ/ ವಾರ್ಡ್ ಸಭೆಗಳನ್ನು ನಡೆಸಿ ಅರ್ಹ ಮತದಾರರಿಗೆ "ಸ್ಮಾರ್ಟ್ ಕಾರ್ಡ್" ನೀಡುವ ವ್ಯವಸ್ಥೆ ಮಾಡಬೇಕು ಎಂದು ರೊಟ್ಟೆ ಆಗ್ರಹಿಸಿದರು.

ಎದ್ದೇಳು ಕರ್ನಾಟಕ ಸಂಘಟನೆಯ ಸಲಹಾ ಮಂಡಳಿ ಸದಸ್ಯರಾದ ಮಹಮ್ಮದ್ ನಿಜಾಮುದ್ದಿನ್ ಮಾತನಾಡಿ, ಬಿಹಾರದಲ್ಲಿ ದಾಖಲೆಗಳಿದ್ದರೂ "ಲಾಜಿಕಲ್ ಡಿಸ್ಕ್ರಿಪೆನ್ಸಿ" ಹೆಸರಿನಲ್ಲಿ ಸಾವಿರಾರು ಜನರಿಗೆ ಮತದಾನದ ಹಕ್ಕು ನಿರಾಕರಿಸಲಾಗಿದೆ. ವಿಶೇಷವಾಗಿ ವಿವಾಹಿತ ಮಹಿಳೆಯರು, ಅಲೆಮಾರಿ ಸಮುದಾಯಗಳು, ಆದಿವಾಸಿಗಳು, ದಲಿತರು, ಗ್ರಾಮೀಣ ಬಡವರು ಹಾಗೂ ಅಲ್ಪಸಂಖ್ಯಾತರು ಈ ಪ್ರಕ್ರಿಯೆಯಿಂದ ಹೆಚ್ಚು ತೊಂದರೆ ಅನುಭವಿಸುತ್ತಿದ್ದಾರೆ ಎಂದು ದೂರಿದರು. ಇನ್ನೋರ್ವ ಸದಸ್ಯರಾದ ಪ್ರೊ.ವಿಠಲದಾಸ ಪ್ಯಾಗೆ ಮಾತನಾಡಿ, ಎಸ್.ಆಯ್.ಆರ್ ಪ್ರಕ್ರಿಯೆಯ ನಿಜವಾದ ಉದ್ದೇಶ ನುಸುಳುಕೋರರನ್ನು ಪತ್ತೆಹಚ್ಚುವುದು ಅಲ್ಲ, ಬದಲಾಗಿ ವಿರೋಧ ಪಕ್ಷಗಳಿಗೆ ಬೆಂಬಲ ನೀಡುವ ಸಮುದಾಯಗಳ ಮತಗಳನ್ನು ಕಡಿತಗೊಳಿಸಿ ರಾಜಕೀಯ ಲಾಭ ಪಡೆಯುವುದೇ ಆಗಿದೆ. ಇದನ್ನು ಸಿಎಎ ಹಾಗೂ ಎನ್.ಆರ್.ಸಿ ಮಾದರಿಯ ಅಪಾಯಕಾರಿ ಕ್ರಮವೆಂದು ಟೀಕಿಸಿದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ಮಾರೂತಿ ಬೌದ್ದೆ ಮಾತನಾಡಿ, "ಕರ್ನಾಟಕ ಪ್ರತಿರೋಧ" ಹೋರಾಟದ ಮೂಲಕ ಶರಣರು, ಸೂಫಿಗಳು ಹಾಗೂ ಸಂತರ ನಾಡಾದ ಕರ್ನಾಟಕ ಎಸ್.ಆಯ್.ಆರ್‌ನಂತಹ ಜನವಿರೋಧಿ ನೀತಿಗಳನ್ನು ಒಪ್ಪುವುದಿಲ್ಲ ಎಂಬ ಸಂದೇಶ ನೀಡಲಾಗುವುದು. ಸಾಹಿತಿಗಳು, ಚಿಂತಕರು, ಕಲಾವಿದರು, ಪ್ರಗತಿಪರ ಸಂಘಟನೆಗಳು ಹಾಗೂ ಜಾತ್ಯತೀತ ಪಕ್ಷಗಳ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಅಂಬೇಡ್ಕರ್) ರಾಜ್ಯ ಸಂಯೋಜಕ ಮಹೇಶ ಗೋರನಾಳಕರ್ ಮಾತನಾಡಿ, "ಕರ್ನಾಟಕ ಪ್ರತಿರೋಧ"ವು ರಾಜ್ಯದ ಪ್ರತಿಯೊಬ್ಬ ನಾಗರಿಕರ ಮತದಾನದ ಹಕ್ಕು ಮತ್ತು ಬದುಕುವ ಹಕ್ಕು ರಕ್ಷಿಸುವ ಪ್ರಜಾತಾಂತ್ರಿಕ ಹೋರಾಟವಾಗಿದ್ದು, ಎಲ್ಲರೂ ಕೈಜೋಡಿಸಬೇಕು ಎಂದು ಅವರು ಕರೆ ನೀಡಿದರು.

ಲಿಂಗಾಯತ ಸಮಾಜದ ಮುಖಂಡ ಬಸವಕುಮಾರ ಪಾಟೀಲ್, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಮನ್ನಾನ್ ಸೇಠ್, ಕರ್ನಾಟಕ ರಾಷ್ಟ್ರಸಮಿತಿ ಜಿಲ್ಲಾಧ್ಯಕ್ಷ ಹಣಮಂತ ಮಟ್ಟೆ, ಆಮ್ ಆದ್ಮಿ ಪಾರ್ಟಿ ಜಿಲ್ಲಾಧ್ಯಕ್ಷ ಸಿದ್ದಪ್ಪಾ ಫುಲಾರಿ, ಎಸ್.ಡಿ.ಪಿ.ಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹಸೀನ್ ಮಾತನಾಡಿದರು. ಭಾರತೀಯ ಬೌದ್ಧ ಮಹಾಸಭೆ ಖಜಾಂಚಿ ನರಸಪ್ಪಾ ಮೇಟ್ಟಿ, ಕ್ರಿಶ್ಚಿಯನ್ ಸಮಾಜದ ಗಣ್ಯರಾದ ಆರ್. ವಿಜಯಕುಮಾರ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ರೈತರಿಗೆ ಗುಣಮಟ್ಟದ ಬೀಜ ಒದಗಿಸಿ: ಶಾಸಕ ಪ್ರಭು ಚವ್ಹಾಣ ಸೂಚನೆ

ಮಲ್ಲಮ್ಮ ನುಡಿ ವಾರ್ತೆ ಔರಾದ

2026–27ನೇ ಸಾಲಿನ ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣೆ ಕಾರ್ಯಕ್ರಮಕ್ಕೆ ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಔರಾದ(ಬಿ) ರೈತ ಸಂಪರ್ಕ ಕೇಂದ್ರದಲ್ಲಿ ಮೇ.27 ರಂದು ಚಾಲನೆ ನೀಡಿದರು.



ಈ ಸಂದರ್ಭದಲ್ಲಿ ಮಾತನಾಡಿದ ಅವರು, ಈ ವರ್ಷ ಮುಂಗಾರು ಶೀಘ್ರ ಬರುವ ಮುನ್ಸೂಚನೆ ಇರುವುದರಿಂದ ರೈತರಿಗೆ ಬಿತ್ತನೆ ಸಮಯಕ್ಕೆ ಬೀಜಗಳು ಲಭ್ಯವಾಗಬೇಕು ಎನ್ನುವ ಉದ್ದೇಶದಿಂದ ಮುಂಚಿತವಾಗಿ ಬಿತ್ತನೆ ಬೀಜ ವಿತರಣೆಗೆ ಚಾಲನೆ ನೀಡಲಾಗುತ್ತಿದೆ. ಮುಂಗಾರು ಹಂಗಾಮಿಗೆ ಅಗತ್ಯವಿರುವ ವಿವಿಧ ಬೆಳೆಗಳ ಬೀಜಗಳನ್ನು ಕೃಷಿ ಇಲಾಖೆಯ ಮೂಲಕ ವಿತರಿಸಲಾಗುತ್ತಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳನ್ನು ನಿಗದಿತ ದರಕ್ಕಿಂತ ಹೆಚ್ಚು ಬೆಲೆಗೆ ಮಾರಾಟ ಮಾಡಬಾರದು. ಈ ಕುರಿತು ಅಧಿಕಾರಿಗಳು ಹಾಗೂ ಮಾರಾಟಗಾರರ ಮೇಲೆ ಕಟ್ಟುನಿಟ್ಟಿನ ನಿಗಾ ವಹಿಸಬೇಕು. ರೈತರ ಸಂಪರ್ಕ ಕೇಂದ್ರಗಳಲ್ಲಾಗಲಿ, ಖಾಸಗಿ ಕೇಂದ್ರಗಳಲ್ಲಾಗಲಿ ಯಾವುದೇ ಕಾರಣಕ್ಕೂ ರೈತರಿಂದ ಹೆಚ್ಚುವರಿ ಹಣ ವಸೂಲಿ ಮಾಡುವಂತಿಲ್ಲ. ಇಂತಹ ಘಟನೆಗಳು ಎಲ್ಲಿಯಾದರೂ ನಡೆದರೆ ಅಂಥವರ ವಿರುದ್ಧ ಮುಲಾಜಿಲ್ಲದೇ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು. ಬಿತ್ತನೆ ಬೀಜ ಅಥವಾ ರಸಗೊಬ್ಬರ ನೀಡಿದ ನಂತರ ರೈತರಿಗೆ ಕಡ್ಡಾಯವಾಗಿ ರಸೀದಿ ನೀಡಬೇಕು ಎಂದು ನಿರ್ದೇಶನ ನೀಡಿದರು.

ಬಿತ್ತನೆ ಬೀಜ ಮತ್ತು ರಸಗೊಬ್ಬರಗಳ ದರದ ಪಟ್ಟಿಯನ್ನು ಎಲ್ಲ ರೈತ ಸಂಪರ್ಕ ಕೇಂದ್ರಗಳಲ್ಲಿ ರೈತರಿಗೆ ಸ್ಪಷ್ಟವಾಗಿ ಕಾಣುವಂತೆ ಕಡ್ಡಾಯವಾಗಿ ಪ್ರದರ್ಶಿಸಬೇಕು. ಯಾವುದೇ ರೈತರಿಗೆ ದರದ ಬಗ್ಗೆ ಗೊಂದಲ ಅಥವಾ ಅನ್ಯಾಯವಾಗದಂತೆ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು. ರೈತರಿಗೆ ಪೂರೈಸುವ ಬಿತ್ತನೆ ಬೀಜಗಳು ಉತ್ತಮ ಗುಣಮಟ್ಟದಿಂದ ಕೂಡಿರಬೇಕು. ಈ ಬಗ್ಗೆ ಅಧಿಕಾರಿಗಳು ರೈತರಿಗೆ ಕೊಡುವ ಮುನ್ನ ಪರಿಶೀಲಿಸಬೇಕು. ಈ ವಿಷಯದಲ್ಲಿ ಯಾವುದೇ ರೀತಿಯ ದೂರುಗಳಿಗೆ ಅವಕಾಶ ಕೊಟ್ಟಲ್ಲಿ ಸುಮ್ಮನಿರುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಪ್ರತಿ ವರ್ಷ ಇಲ್ಲಿಂದ ಮಹಾರಾಷ್ಟ್ರ ಹಾಗೂ ತೆಲಂಗಾಣ ರಾಜ್ಯಗಳಿಗೆ ಬಿತ್ತನೆ ಬೀಜ ಮತ್ತು ರಸಗೊಬ್ಬರಗಳ ಅಕ್ರಮ ಸಾಗಾಟ ನಡೆಯುತ್ತಿರುವುದು ಗಮನಕ್ಕೆ ಬಂದಿದೆ. ಗಡಿ ಭಾಗಗಳಲ್ಲಿ ಅಧಿಕಾರಿಗಳು ವಿಶೇಷ ತಪಾಸಣೆ ನಡೆಸಿ, ಅಕ್ರಮ ಸಾಗಾಟವನ್ನು ಸಂಪೂರ್ಣವಾಗಿ ತಡೆಗಟ್ಟಬೇಕು. ನಮ್ಮ ರೈತರಿಗೆ ಬಂದ ಬಿತ್ತನೆ ಬೀಜ, ರಸಗೊಬ್ಬರ ಅನ್ಯರ ಪಾಲಾಗಬಾರದು. ನಮ್ಮ ರೈತರಿಗೆ ಯಾವುದೇ ರೀತಿಯ ಅನ್ಯಾಯವಾಗಬಾರದು ಎಂದು ಖಡಕ್ ಸೂಚನೆ ನೀಡಿದರು.

ಔರಾದ(ಬಿ) ಕ್ಷೇತ್ರದಲ್ಲಿ ಹೆಚ್ಚಾಗಿ ಬೆಳೆಸಲಾಗುವ ಸೋಯಾ ಬೀನ್ ಹಾಗೂ ಮತ್ತಿತರೆ ಬೆಳೆಗಳ ಬಿತ್ತನೆ ಬೀಜಗಳನ್ನು ಸಮರ್ಪಕವಾಗಿ ಪೂರೈಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಕ್ಷೇತ್ರದ ಪ್ರತಿಯೊಬ್ಬ ರೈತರಿಗೂ ಅಗತ್ಯ ಪ್ರಮಾಣದ ಬೀಜಗಳು ಸಿಗುವಂತೆ ಸಮರ್ಪಕ ವ್ಯವಸ್ಥೆ ಮಾಡಬೇಕು. ಯಾವುದೇ ರೈತ ಬೀಜಕ್ಕಾಗಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಬಾರದು. ಎಲ್ಲ ಗ್ರಾಮಗಳಲ್ಲಿ ಕಡ್ಡಾಯವಾಗಿ ಡೊಂಗೂರ ಸಾರಿಸಿ ಬಿತ್ತನೆ ಬೀಜ ವಿತರಿಸುವ ದಿನಾಂಕದ ಬಗ್ಗೆ ತಿಳಿಸಬೇಕು. ರೈತ ಸಂಪರ್ಕ ಕೇಂದ್ರಗಳು ರೈತರ ಸ್ನೇಹಿಯಾಗಿ ಕೆಲಸ ಮಾಡಬೇಕು. ರೈತರಿಗೆ ಯಾವುದೇ ರೀತಿಯ ಅನ್ಯಾಯವಾದರೆ ಸುಮ್ಮನಿರುವುದಿಲ್ಲ. ತಪ್ಪಿತಸ್ಥರು ಯಾರೇ ಇರಲಿ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಸಿದರು.

ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರಾದ ಧೂಳಪ್ಪ ಪ್ರಾಸ್ತಾವಿಕ ಮಾತನಾಡಿ, ಸೋಯಾಬೀನ್ 36,100 ಕ್ವಿಂಟಾಲ್ ಬೇಡಿಕೆಯ ಪೈಕಿ 31,218 ಕ್ವಿಂಟಾಲ್ ಬಂದಿದೆ. ಹೆಸರು 300 ಕ್ವಿಂಟಾಲ್ ಪೈಕಿ 220 ಕ್ವಿಂಟಾಲ್ ಬಂದಿದೆ. ಹೆಸರು 100 ಕ್ವಿಂಟಾಲ್ ಪೈಕಿ 25 ಕ್ವಿಂಟಾಲ್ ಹಾಗೂ 50 ಕ್ವಿಂಟಾಲ್ ಪೈಕಿ 13 ಕ್ವಿಂಟಾಲ್ ಬಂದಿದೆ. ಉಳಿದ ಎಲ್ಲ ಬಿತ್ತನೆ ಬೀಜಗಳು ಅಗತ್ಯಕ್ಕೆ ಅನುಗುಣವಾಗಿ ದಾಸ್ತಾನು ಮಾಡಿಕೊಳ್ಳಲಾಗಿದೆ. ರೈತರು ಆತಂಕಪಡಬೇಕಿಲ್ಲ ತಮಗೆ ತಿಳಿಸಿದ ದಿನಾಂಕದಂದು ಬಿತ್ತನೆ ಬೀಜ ಪಡೆಯಬೇಕು ಎಂದು ತಿಳಿಸಿದರು.

ಎಲ್ಲ ರೈತರು ಒಂದೇ ಬೆಳೆಗೆ ಮೊರೆ ಹೋಗದೆ ಬೇರೆ–ಬೇರೆ ಬೆಳೆಗಳನ್ನು ಬಿತ್ತನೆ ಮಾಡಿದರೆ ಆರ್ಥಿಕ ಸಂಕಷ್ಟದಿಂದ ತಪ್ಪಿಸಿಕೊಳ್ಳಬಹುದು. ಹಾಗೆಯೇ 80 ಎಂ.ಎಂ ಮಳೆಯಾದ ನಂತರವೇ ಸೋಯಾಬೀನ್ ಬಿತ್ತನೆ ಮಾಡಬೇಕು. ದೊಡ್ಡ ಟ್ರಾ??ಕ್ಟರ್‌ಗಳಿಂದ ಹೆಚ್ಚಿನ ಆಳಕ್ಕೆ ಬಿತ್ತನೆ ಮಾಡುವುದರಿಂದ ಮೊಳಕೆ ಒಡೆಯುವುದು ಕಷ್ಟ. ಹಾಗಾಗಿ ರೈತರು ಅಗತ್ಯ ಮುನ್ನೆಚ್ಚರಿಕೆಯೊಂದಿಗೆ ಬಿತ್ತನೆ ಕೈಗೊಳ್ಳಬೇಕು. ಎಲ್ಲ ಬೆಳೆಗಳಿಗೂ ತಪ್ಪದೇ ವಿಮೆ ಮಾಡಿಸಬೇಕು ಎಂದು ರೈತರಿಗೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಕೃಷಿಕ ಸಮಾಜದ ಅಧ್ಯಕ್ಷ ಸಂತೋಷ ಹಜಾರೆ, ಮುಖಂಡರಾದ ಧೊಂಡಿಬಾ ನರೋಟೆ, ಶಿವಾಜಿರಾವ ಪಾಟೀಲ ಮುಂಗನಾಳ, ಕೃಷಿಕ ಸಮಾಜದ ಸದಸ್ಯ ಗೋವಿಂದರಾವ ಇಂಗಳೆ, ಸಚಿನ ರಾಠೋಡ, ಸಂಜು ವಡೆಯಾರ್ ಸೇರಿದಂತೆ ಕೃಷಿ ಇಲಾಖೆಯ ಅಧಿಕಾರಿಗಳು, ರೈತ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ನಂತರ ಭಂಡಾರಕುಮಟಾ ರೈತ ಸಂಪರ್ಕ ಕೇಂದ್ರದಲ್ಲಿ ಬಿತ್ತನೆ ಬೀಜ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

# ನಾಗೇಂದ್ರ ಅವರಿಗೆ ಸಚಿವ ಸ್ಥಾನ ಸಿಗಬೇಕು: ಶಾಸಕ ನಾರಾ ಭರತ್ ರೆಡ್ಡಿ




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಹೊಸದಾಗಿ ಸಚಿವ ಸಂಪುಟ ಪುನರ್ರಚನೆಯಾದರೆ ಮಾಜಿ ಸಚಿವ ಬಿ.ನಾಗೇಂದ್ರ ಅವರಿಗೆ ಸಚಿವ ಸ್ಥಾನ ಸಿಗಬೇಕು ಎಂಬುದು ನನ್ನ ಹಾಗೂ ಜಿಲ್ಲೆಯ ಶಾಸಕರ ಅಭಿಪ್ರಾಯ ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.

ಬಳ್ಳಾರಿಯ ಮಹಾನಗರ ಪಾಲಿಕೆಯಲ್ಲಿ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದರು.

ಸಿಎಂ ಬದಲಾವಣೆ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು; ಸಿಎಂ ಬದಲಾವಣೆ ಬಗ್ಗೆ ನನಗೆ ಮಾಹಿತಿಯಿಲ್ಲ, ಶಾಸಕಾಂಗ ಪಕ್ಷದ ಸಭೆಯ ಬಗ್ಗೆಯೂ ಕರೆ ಬಂದಿಲ್ಲ, ಆದರೆ ಸಿಎಂ ಬದಲಾವಣೆಗೆ ಸಂಬಂಧಿಸಿ ಹೈಕಮಾಂಡ್ ಸೂಚನೆಯಂತೆ ನಾನು ನಡೆದುಕೊಳ್ಳುತ್ತೇನೆ ಎಂದರು.

ಸಚಿವ ಸಂಪುಟ ಪುನರ್ರಚನೆ ಅಥವಾ ಸಿಎಂ ಬದಲಾವಣೆ ವಿಷಯದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿಯವರ ತೀರ್ಮಾನವೇ ಅಂತಿಮ, ಅವರು ಹೇಳಿದಂತೆ ನಾವು ನಡೆದುಕೊಳ್ಳುತ್ತೇವೆ ಎಂದರು.

ಈ ಸಂದರ್ಭ ಕಾಂಗ್ರೆಸ್ ಮುಖಂಡರಾದ ಅಯಾಜ್ ಅಹ್ಮದ್, ಸುಬ್ಬರಾಯುಡು, ಮೊಹಮ್ಮದ್ ಭಾಯ್, ಡಿ.ಸೂರಿ, ಬಿಆರೆಲ್ ಸೀನಾ, ಅಲ್ಲಾಬಕಷ್, ಹೊನ್ನಪ್ಪ, ಕಣೇಕಲ್ ಮೆಹಬೂಬಸಾಬ, ಪಾಲಿಕೆಯ ಸದಸ್ಯ ಜಬ್ಬಾರ್ ಮತ್ತಿತರರು ಹಾಜರಿದ್ದರು.

# ಡೊನೇಷನ್ ಹಾವಳಿ ವಿರುದ್ಧ ಕರವೇ ಕಾವಲುಪಡೆ ಪ್ರತಿಭಟನೆ ಯಶಸ್ವಿ




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚುತ್ತಿರುವ ಡೊನೇಷನ್ ಹಾವಳಿ ಹಾಗೂ ಶಿಕ್ಷಣದ ವ್ಯಾಪಾರೀಕರಣ ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ (ರಿ) ಕಾವಲುಪಡೆ ಬಳ್ಳಾರಿ ಜಿಲ್ಲಾ ಘಟಕದ ವತಿಯಿಂದ ಬುಧವಾರ ನಗರದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆ ಯಶಸ್ವಿಯಾಗಿ ನಡೆಯಿತು.

ನಗರದ ಮೋತಿ ವೃತ್ತದಲ್ಲಿರುವ ಬಸವಣ್ಣನವರ ಪ್ರತಿಮೆಯಿಂದ ಕೋಟೆ ಪ್ರದೇಶದಲ್ಲಿರುವ ಜಿಲ್ಲಾ ಶಿಕ್ಷಣಾಧಿಕಾರಿಗಳ ಕಚೇರಿವರೆಗೆ ಕಾರ್ಯಕರ್ತರು ಪ್ರತಿಭಟನೆ ಮೆರವಣಿಗೆ ನಡೆಸಿದರು. ಈ ವೇಳೆ ಸರ್ಕಾರ ಹಾಗೂ ಶಿಕ್ಷಣ ಇಲಾಖೆಯ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಶಿಕ್ಷಣವನ್ನು ಡೊನೇಷನ್ ರೂಪದಲ್ಲಿ ಮಾರಾಟ ಮಾಡಲಾಗುತ್ತಿದ್ದು, ಖಾಸಗಿ ಶಾಲಾ–ಕಾಲೇಜುಗಳ ಮೇಲಿನ ನಿಯಂತ್ರಣದಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಸಾಮಾನ್ಯ ಪೋಷಕರು ಹಾಗೂ ವಿದ್ಯಾರ್ಥಿಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿದ್ದು, ಶಿಕ್ಷಣ ಎಲ್ಲರಿಗೂ ಸಿಗುವ ಹಕ್ಕಾಗಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆ ಬಳಿಕ ಜಿಲ್ಲಾ ಶಿಕ್ಷಣಾಧಿಕಾರಿಗಳ ಕಚೇರಿಗೆ ತೆರಳಿದ ಕರವೇ ಕಾವಲುಪಡೆ ಪದಾಧಿಕಾರಿಗಳು, ಶಿಕ್ಷಣ ಇಲಾಖೆಯ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು. ಡೊನೇಷನ್ ಹಾವಳಿ ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು, ಖಾಸಗಿ ಶಿಕ್ಷಣ ಸಂಸ್ಥೆಗಳ ಶುಲ್ಕ ನಿಯಂತ್ರಣಕ್ಕೆ ವಿಶೇಷ ಸಮಿತಿ ರಚಿಸಬೇಕು ಹಾಗೂ ಪೋಷಕರ ಮೇಲಿನ ಆರ್ಥಿಕ ಭಾರ ಕಡಿಮೆ ಮಾಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಯಿತು.

ರಾಜ್ಯಾಧ್ಯಕ್ಷ ಡಾ. ಹೆಚ್. ಸುರೇಶ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ 100ಕ್ಕೂ ಹೆಚ್ಚು ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

# ಸುಲಭ ಸೌಲಭ್ಯಗಳೊಂದಿಗೆ ಸಾರ್ವಜನಿಕ ಸೇವೆಗೆ ಮುಕ್ತ: ಎಡಿಸಿ ಮಹಮ್ಮದ್ ಝುಬೇರ್.ಎನ್

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದಲ್ಲಿ ನಿವಾಸಿ ಕೇಂದ್ರಿತ ಆಧಾರ್ ಸೇವೆಗಳನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಸುಲಭ ಸೌಲಭ್ಯಗಳೊಂದಿಗೆ ಸಾರ್ವಜನಿಕ ಸೇವೆ ಒದಗಿಸಲು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರದಿಂದ ನೂತನ ಆಧಾರ್ ಕೇಂದ್ರ ಆರಂಭಿಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಅವರು ಹೇಳಿದರು.



ಬೆಂಗಳೂರಿನ ಯುಐಡಿಎಐ ಪ್ರಾದೇಶಿಕ ಕಚೇರಿ ವತಿಯಿಂದ ನಗರದ ನೇತಾಜಿ ನಗರದಲ್ಲಿ ಬುಧವಾರ ನೂತನ ಯುಐಡಿಎಐ ಆಧಾರ್ ಸೇವಾ ಕೇಂದ್ರ ಅಧಿಕೃತವಾಗಿ ಉದ್ಘಾಟಿಸಿ ಅವರು ಮಾತನಾಡಿದರು.

ಬಳ್ಳಾರಿಯ ಈ ನೂತನ ಕೇಂದ್ರವು ಆಧುನಿಕ ಸೌಕರ್ಯಗಳನ್ನು ಹೊಂದಿದ್ದು, ಸಾರ್ವಜನಿಕರಿಗೆ ಒಂದೇ ಸೂರಿನಡಿ ಹಲವು ಸೇವೆಗಳನ್ನು ಒದಗಿಸಲಿದೆ. ಈ ಕೇಂದ್ರವು ಸಾರ್ವಜನಿಕರಿಗೆ ಸುಲಭವಾಗಿ ಸೇವೆಗಳನ್ನು ಒದಗಿಸಲು 4 ಕಾರ್ಯಾಚರಣಾ ಕಿಟ್‌ಗಳನ್ನು ಹೊಂದಿರುವ 'ಮಾದರಿ–ಸಿ' ಮಾದರಿಯ ಕೇಂದ್ರವಾಗಿದೆ. ಇಲ್ಲಿ ಹೊಸ ಆಧಾರ್ ದಾಖಲಾತಿ, ಜನಸಂಖ್ಯಾ ವಿವರಗಳ (ಹೆಸರು, ವಿಳಾಸ ಇತ್ಯಾದಿ) ನವೀಕರಣ, ಬಯೋಮೆಟ್ರಿಕ್ ನವೀಕರಣಗಳು, ದೋಷ ತಿದ್ದುಪಡಿ ಹಾಗೂ ಆಧಾರ್‌ಗೆ ಸಂಬಂಧಿಸಿದ ಕುಂದುಕೊರತೆಗಳ ಪರಿಹಾರ ಸೇವೆಗಳು ಲಭ್ಯವಿರಲಿವೆ ಎಂದು ತಿಳಿಸಿದರು.

ಸಾರ್ವಜನಿಕ ರಜಾದಿನಗಳನ್ನು ಹೊರತುಪಡಿಸಿ, ಈ ಕೇಂದ್ರವು ವಾರದ ಎಲ್ಲಾ ದಿನಗಳಲ್ಲೂ ಸಾರ್ವಜನಿಕರಿಗಾಗಿ ತೆರೆದಿರುತ್ತದೆ. ಯುಐಡಿಎಐ ನೇರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುವ ಈ ಕೇಂದ್ರವನ್ನು ಸಂಪೂರ್ಣವಾಗಿ ನಿವಾಸಿ ಸ್ನೇಹಿಯಾಗಿ ವಿನ್ಯಾಸಗೊಳಿಸಲಾಗಿದೆ. ವಿಶೇಷವಾಗಿ ವಿಕಲಚೇತನರು ಮತ್ತು ಹಿರಿಯ ನಾಗರಿಕರಿಗಾಗಿ ವೀಲ್‌ಚೇರ್ ಪ್ರವೇಶ (ರ್‍ಯಾಂಪ್), ಪ್ರತ್ಯೇಕ ವಿಶ್ರಾಂತಿ ಕೊಠಡಿಗಳು ಮತ್ತು ಮೀಸಲಾದ ಕುಂದುಕೊರತೆ ಪರಿಹಾರ ಕಾರ್ಯವಿಧಾನಗಳನ್ನು ಇಲ್ಲಿ ಅಳವಡಿಸಲಾಗಿದೆ. ಪ್ರತಿಯೊಂದು ಆಧಾರ್ ಸೇವಾ ಕೇಂದ್ರವನ್ನು ಯುಐಡಿಎಐ ಎಎಸ್‌ಕೆ ವ್ಯವಸ್ಥಾಪಕರು ನಿರ್ವಹಿಸಲಿದ್ದು, ಸಾರ್ವಜನಿಕರಿಂದ ಬರುವ ದೂರು ಹಾಗೂ ಕುಂದುಕೊರತೆಗಳನ್ನು ಸ್ವೀಕರಿಸಿ, ಅವುಗಳನ್ನು ಸಕಾಲದಲ್ಲಿ ಪರಿಹರಿಸಲು ಶ್ರಮಿಸಲಿದ್ದಾರೆ ಎಂದರು.

ಬಳಿಕ ಕೇಂದ್ರದ ಸಿಬ್ಬಂದಿ ಹಾಗೂ ಸಾರ್ವಜನಿಕರೊಂದಿಗೆ ಸಂವಾದ ನಡೆಸಿದ ಅವರು, ಆಧಾರ್ ಸೇವೆಗಳನ್ನು ಸಾರ್ವಜನಿಕರಿಗೆ ಯಾವುದೇ ತೊಂದರೆಯಿಲ್ಲದೆ ಪರಿಣಾಮಕಾರಿಯಾಗಿ ಒದಗಿಸಲು, ಪ್ರಸ್ತುತ ಅನುಸರಿಸಲಾಗುತ್ತಿರುವ ಆಧಾರ್ ದಾಖಲಾತಿ ಮತ್ತು ನವೀಕರಣ ಕಾರ್ಯವಿಧಾನಗಳ ಕುರಿತು ಮಾಹಿತಿ ಪಡೆದುಕೊಂಡರು.

ಯುಐಡಿಎಐ ಬೆಂಗಳೂರು ಪ್ರಾದೇಶಿಕ ಕಚೇರಿಯ ಉಪನಿರ್ದೇಶಕ ಗುಲ್ಶನ್ ಕುಮಾರ್ ಸಿಂಗ್ ಅವರು ಮಾತನಾಡಿ, ಕಳೆದ ವಾರದಲ್ಲಿ ರಾಜ್ಯದ ವಿಜಯಪುರ ಮತ್ತು ಬೀದರ್‌ನಲ್ಲಿ ಎರಡು ಹೊಸ ಕೇಂದ್ರಗಳನ್ನು ಉದ್ಘಾಟಿಸಲಾಯಿತು. ಈ ಮೂಲಕ ರಾಜ್ಯದಲ್ಲಿ ಒಟ್ಟು 7 ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದವು. ಈಗ ಬಳ್ಳಾರಿಯಲ್ಲಿ ಆರಂಭವಾಗಿರುವ ಹೊಸ ಕೇಂದ್ರವು ಕರ್ನಾಟಕದ 8ನೇ ಅಧಿಕೃತ ಆಧಾರ್ ಸೇವಾ ಕೇಂದ್ರವಾಗಿದೆ ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ಒಟ್ಟು 16 ಹೊಸ ಆಧಾರ್ ಸೇವಾ ಕೇಂದ್ರಗಳನ್ನು ತೆರೆಯಲು ಯುಐಡಿಎಐ ಯೋಜಿಸಿದೆ. ಆ ಮೂಲಕ ಸೆಪ್ಟೆಂಬರ್ ವೇಳೆಗೆ ಕರ್ನಾಟಕದಲ್ಲಿ ಒಟ್ಟು ಯುಐಡಿಎಐ ಎಎಸ್‌ಕೆ ಕೇಂದ್ರಗಳ ಸಂಖ್ಯೆಯನ್ನು 24ಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ಸಾರ್ವಜನಿಕರು ಆಧಾರ್ ಸೇವೆಗಳಿಗಾಗಿ ಕೇಂದ್ರದಲ್ಲಿ ಸುದೀರ್ಘ ಸಾಲಿನಲ್ಲಿ ನಿಲ್ಲುವುದನ್ನು ತಪ್ಪಿಸಲು ಆನ್‌ಲೈನ್ ಮೂಲಕ ಮುಂಗಡ ಅಪಾಯಿಂಟ್‌ಮೆಂಟ್ ಬುಕ್ ಮಾಡುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಸಾರ್ವಜನಿಕರು ಯುಐಡಿಎಐನ ಅಧಿಕೃತ ಪೋರ್ಟಲ್ https://bookappointment.uidai.gov.in/ ಗೆ ಭೇಟಿ ನೀಡಿ ಸಮಯ ಕಾಯ್ದಿರಿಸಬಹುದು. ಜೊತೆಗೆ, 5 ರಿಂದ 17 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಮಾಡಿಸಬೇಕಾದ ಬಯೋಮೆಟ್ರಿಕ್ ನವೀಕರಣಗಳನ್ನು ಸೆಪ್ಟೆಂಬರ್ 2026 ರವರೆಗೆ ಸಂಪೂರ್ಣ ಉಚಿತವಾಗಿ ನೀಡಲಾಗುತ್ತಿದೆ. ಈ ಸೌಲಭ್ಯವು ಆಧಾರ್ ಸೇವಾ ಕೇಂದ್ರಗಳಲ್ಲದೆ, ಆಯಾ ಶಾಲೆಗಳಲ್ಲಿ ಆಯೋಜಿಸಲಾಗುವ ವಿಶೇಷ ಶಿಬಿರಗಳ ಮೂಲಕವೂ ಲಭ್ಯವಿರಲಿದೆ ಎಂದು ವಿವರಿಸಿದರು.

ಭಾರತ ಸರ್ಕಾರದ ಡಿಜಿಟಲ್ ಸೇರ್ಪಡೆ ಮತ್ತು ಉತ್ತಮ ಆಡಳಿತದ ದೃಷ್ಟಿಕೋನಕ್ಕೆ ಅನುಗುಣವಾಗಿ ಬಳ್ಳಾರಿಯಲ್ಲಿ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ. ಇದು ಸಾರ್ವಜನಿಕರ ಜೀವನವನ್ನು ಸುಗಮಗೊಳಿಸುವುದಲ್ಲದೆ, ಡಿಜಿಟಲ್ ಆಡಳಿತವನ್ನು ಬಲಪಡಿಸಲು ಮತ್ತು ಜನರಿಗೆ ಪರಿಣಾಮಕಾರಿ, ನಿವಾಸಿ ಕೇಂದ್ರಿತ ಆಧಾರ್ ಸೇವೆಗಳನ್ನು ತಲುಪಿಸುವ ಯುಐಡಿಎಐನ ಬದ್ಧತೆಯನ್ನು ಪುನರುಚ್ಚರಿಸುತ್ತದೆ ಎಂದರು. ಈ ವೇಳೆ ಯುಐಡಿಎಐ ಪ್ರಾದೇಶಿಕ ಕಚೇರಿಯ ಸಹಾಯಕ ವ್ಯವಸ್ಥಾಪಕ ಪ್ರಸಾದ್ ಬಾಬು, ಆಧಾರ್ ಕೇಂದ್ರದ ಸಿಬ್ಬಂದಿ ಹಾಗೂ ಸೇವಾ ಪೂರೈಕೆದಾರರಾದ ಎಂ/ಎಸ್ ಬಿಎಲ್ ಎಸ್ ಇಂಟರ್ ನ್ಯಾಷನಲ್ ಸಂಸ್ಥೆಯ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಪ್ರಥಮ ಪ್ರಧಾನಿ ಪಂಡಿತ ನೆಹರೂಗೆ ಶ್ರದ್ಧಾ ನಮನ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ, ಸ್ವತಂತ್ರ ಭಾರತದ ಮೊದಲ ಪ್ರಧಾನಿ, ನವ ಭಾರತ ನಿರ್ಮಾತೃ ಭಾರತ ರತ್ನ ಪಂಡಿತ್ ಜವಾಹರ್ ಲಾಲ್ ನೆಹರು ಅವರ ಭಾವ ಚಿತ್ರಕ್ಕೆ ಪುಷ್ಪ ನಮನಗಳನ್ನು ಹಾಕುವ ಮೂಲಕ ಪುಣ್ಯಸ್ಮರಣೆಯನ್ನು, ಜಿಲ್ಲಾ ಕಾಂಗ್ರೆಸ್ ಸಮಿತಿಯ ವತಿಯಿಂದ ಆಚರಿಸಲಾಯಿತು.



ಈ ವೇಳೆ ಪಕ್ಷದ ಮುಖಂಡರುಗಳು ಸೇರಿ ಪಂಡಿತ್ ಜವಾಹರ್ ಲಾಲ್ ನೆಹರು ಅವರು ದೇಶಕ್ಕೆ ನೀಡಿದ ಕೊಡುಗೆಗಳನ್ನು ಸ್ಮರಿಸಿದರು.

ಈ ಸಂಧರ್ಭದಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಾದ ಕಲ್ಲುಕಂಭ ಪಂಪಾಪತಿ, ಮಹಮ್ಮದ್ ಗೌಸ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹುಮಯೂನ್ ಖಾನ್, ಡಿಸಿಸಿ ಕಾರ್ಯಾಧ್ಯಕ್ಷರಾದ ಭೋಯಪಾಟಿ ವಿಷ್ಣು ವರ್ಧನ್, ಜಿಲ್ಲಾ ಗ್ಯಾರಂಟಿ ಸಮಿತಿಯ ಅಧ್ಯಕ್ಷರಾದ ಚಿದಾನಂದಪ್ಪ,, ಡಿಸಿಸಿ ಉಪಾಧ್ಯಕ್ಷರಾದ ಶ್ರೀನಿವಾಸುಲು, ಡಿಸಿಸಿ ಉಪಾಧ್ಯಕ್ಷರಾದ ಕೆ.ಶ್ರೀನಿವಾಸುಲು, ಪ್ರಚಾರ ಸಮಿತಿಯ ಜಿಲ್ಲಾ ನಗರ ಅಧ್ಯಕ್ಷರಾದ ಶ್ರೀ ಈರನ್ನ ಗೌಡ, ಸೇವದಾಳ ಜಿಲ್ಲಾ ನಗರ ಅಧ್ಯಕ್ಷರದ ಅತ್ತವುಲ್ಲ, ಕಾರ್ಯಕರ್ತರಾದ ಬಿ.ಎ.ಮಲ್ಲೇಹಶ್ವರಿ, ಲಿಂಗರಾಜು, ಪರ್ವಿನ್ ಭಾನು ಮತ್ತು ಇತರರು ಉಪಸ್ಥಿತರಿದ್ದರು.

# ಬಳ್ಳಾರಿ ಜಿಲ್ಲಾದ್ಯಂತ ಅನಧಿಕೃತ ಗೋವು, ಒಂಟೆಗಳ ಸಾಗಣೆ ಹಾಗೂ ವಧೆ ಕಟ್ಟುನಿಟ್ಟಾಗಿ ನಿಷೇಧ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಸರ್ವೋಚ್ಛ ನ್ಯಾಯಾಲಯದ ಆದೇಶದನ್ವಯ ದೇಶಾದ್ಯಂತ ಅನಧಿಕೃತ ಗೋವು ಮತ್ತು ಒಂಟೆಗಳ ಸಾಗಾಣಿಕೆ ಹಾಗೂ ವಧೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

ಬಕ್ರೀದ್ ಹಬ್ಬದ ಆಚರಣೆಯ ಹಿನ್ನೆಲೆಯಲ್ಲಿ, ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಇಂತಹ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ಜಿಲ್ಲಾಡಳಿತವು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಇತ್ತೀಚೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಮಟ್ಟದ ಸಂಬಂಧಪಟ್ಟ ಎಲ್ಲಾ ಇಲಾಖಾ ಅಧಿಕಾರಿಗಳ ಸಭೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲಾದ್ಯಂತ ಇರುವ ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲಿ ಪಶುಸಂಗೋಪನಾ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ಕಾರ್ಯನಿರ್ವಹಿಸಲಿದ್ದು, ಕಟ್ಟುನಿಟ್ಟಿನ ನಿಗಾ ವಹಿಸಲಿದ್ದಾರೆ.

ಸಾರ್ವಜನಿಕರಲ್ಲಿ ಮನವಿ ಮತ್ತು ಸಹಾಯವಾಣಿ: ಜಿಲ್ಲೆಯಲ್ಲಿ ಎಲ್ಲಿಯಾದರೂ ಅಕ್ರಮವಾಗಿ ಗೋವು ಅಥವಾ ಒಂಟೆಗಳ ಸಾಗಾಣಿಕೆ ಮತ್ತು ವಧೆ ಮಾಡುವುದು ಕಂಡುಬಂದಲ್ಲಿ, ಸಾರ್ವಜನಿಕರು ತಕ್ಷಣವೇ ಪಶುಸಂಗೋಪನಾ ಇಲಾಖೆ– 08392–275146, ಪೊಲೀಸ್ ಇಲಾಖೆ (ತುರ್ತು ಸಂಖ್ಯೆ) 112 ಗೆ ಸಂಪರ್ಕಿಸಿ ಮಾಹಿತಿ ನೀಡಬಹುದಾಗಿದೆ. ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆ ಮತ್ತು ನಿಯಮಗಳ ಪಾಲನೆಗಾಗಿ ಎಲ್ಲಾ ಸಮುದಾಯದ ಧಾರ್ಮಿಕ ಮುಖಂಡರು ಜಿಲ್ಲಾಡಳಿತದೊಂದಿಗೆ ಸಂಪೂರ್ಣವಾಗಿ ಸಹಕರಿಸಬೇಕು ಎಂದು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

# ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ವ್ಯಕ್ತಿ, ಸಂಸ್ಥೆಗಳಿಂದ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಮೇ.27: ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯಾ ಮತ್ತು ವಿಕಲಚೇತನರ ಸಬಲೀಕರಣ ಇಲಾಖೆಯ ವತಿಯಿಂದ 2026–27ನೇ ಸಾಲಿನಲ್ಲಿ ವಿಕಲಚೇತನರಿಗಾಗಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ವ್ಯಕ್ತಿ ಹಾಗೂ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಅರ್ಜಿಗಳನ್ನು ದಿನಾಂಕ: 31–07–2026ರೊಳಗಾಗಿ ಆಂಗ್ಲ ಭಾಷೆಯಲ್ಲಿ www.depwd.gov.in and www.awards.gov.in ಆನ್‌ಲೈನ್ ವೆಬ್‌ಸೈಟ್‌ನಲ್ಲಿ ನೇರವಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಿದ ಪ್ರಸ್ತಾವನೆಯನ್ನು ಹಾರ್ಡ್ ಪ್ರತಿಯೊಂದಿಗೆ ಪ್ರಸ್ತಾವನೆಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಕಟ್ಟಡ ಮ.ನಂ:–1–3–1411/4

ಆಶಾಪೂರು ರಸ್ತೆ, ಆಫೀರ್ಸ್ ಕಾಲೋನಿ ಎದುರುಗಡೆ ಶ್ರೀ ರಾಜಾಮಾತಾ

ದೇವಸ್ಥಾನ ಹತ್ತಿರ, ರಾಯಚೂರು ಇಲ್ಲಿ ಸಲ್ಲಿಸಬಹುದಾಗಿದೆ.

## ಆಧ್ಯಾತ್ಮದಿಂದ ಮನ ಪರಿವರ್ತನೆ : ಜಯಂತಿ ಅಕ್ಕ



• **ಮಲ್ಲಮ್ಮ ನುಡಿ ವಾರ್ತೆಯಲಬುರ್ಗಾ**

ಆಧ್ಯಾತ್ಮದಿಂದ ಮನ ಪರಿವರ್ತನೆಯಾಗಲು ಸಾದ್ಯ ಎಂದು ಜಯಂತಿ ಸಕ್ಕ ಅವರು ಪಟ್ಟಣದ ಬ್ರಹ್ಮಕುಮಾರಿ ಈಶ್ವರಿ ವಿದ್ಯಾಲಯದಲ್ಲಿ ಆಯೋಜಿದ ವ್ಯಾಪಾರಸ್ಥರಿಗೆ ಮಾರ್ಗದರ್ಶನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಆತ್ಮ ತೃಪ್ತಿ ಇರಬೇಕಾದರೆ ಮೋಸ ವಂಚನೆಯಿಂದ ದೂರವಿರಬೇಕು ,ಎಲ್ಲರ ಜೋತೆಗೆ ಪ್ರೀತಿಯಿಂದ ನಗು ನಗುತಾ ಇದ್ದು ಉತ್ತಮ ಸಮಾಜ ಸೇವೆ ಮಾಡುವಲ್ಲಿ ಮುಂದಾಗಬೇಕು ಎಂದರು. ನಾವು ಹಣಕ್ಕೆ ಹೇಗೆ ಮಹತ್ವ ಕೊಡುತ್ತೆವೆ ಆದೆ ರಿತಿಯಾಗಿ ನಮ್ಮ ಜೀವನ ಸರಿಯಾಗಿ ಇರಬೇಕಾದರೆ ಉತ್ತಮ ಆರೋಗ್ಯವಂತರಾಗಬೇಕಾದರೆ ಆರೋಗ್ಯದ ಕಡೆ ಕಾಳಜಿವಹಿಸಬೇಕು ಎಂದು ವ್ಯಾಪರಸ್ಥರಾದಮಾಗುಂಡಪ್ಪ ಕಟಗೇರಿ ಅವರು ಮಾತನಾಡಿದರು. ಪ್ರಮಾಣಿಕವಾಗಿ ವ್ಯಾಪಾರ ಮಾಡಿದಾಗ ಜನರು ನಮ್ಮನ್ನು ಹುಡುಕಿಕೊಂಡು ಬರುತ್ತಾರೆ ಇದರಿಂದ ಅವರಲ್ಲಿ ವಿಶ್ವಾಸಮೂಡಿನಮ್ಮ ವ್ಯಾಪಾರ ಉತ್ತಾಮವಾಗಲು ಸಾದ್ಯಎಂದು ವ್ಯಾಪರಸ್ಥ ಸಂಗಣ್ಣ ಟಿಂಗಿನಕಾಯಿ ಅವರು ಹೇಳಿದರು. ಈ ವೇಳೆ ವ್ಯಾಪಾರಸ್ಥರಾದ ಶಿವಕುಮಾರ ಭೂತೆ, ಮುತ್ತಯ್ಯ ಮಲಕಸಮುದ್ರ, ನಾಗೇಶ ಸಂಕನಗೌಡ್ರ, ವೀರುಪಾಕ್ಷಪ್ಪ ಪತ್ತಾರ, ಪ್ರವೀಣ ಶೇಟ್ಟರ, ಮಹೇಶ ಹೋಟಲ್, ಸಿದ್ದಯ್ಯ ಕೊಣ್ಣೂರ,,ಗೀತಾ ಹಾಗು ರೇಖಾ ಅಕ್ಕನವರು ಸೇರಿದಂತೆ ಬ್ರಹ್ಮಕುಮಾರಿಯ ಪರಿವಾರದವರು ಭಾಗವಹಿಸಿದ್ದರು. ನಂತರ ಪ್ರೀತಿಯ ಭೋಜನೆ ಜರುಗಿತು.

## ಕಾಮಗಾರಿಯಲ್ಲಿ ಗುಣಮಟ್ಟ ಕಾಪಾಡಿಕೊಳ್ಳಿ: ಶರಣಗೌಡ ಕಂದಕೂರ ಸೂಚನೆ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಸರ್ಕಾರದಿಂದ ಬಿಡುಗಡೆಗೊಳಿಸುವ ಅನುದಾನವನ್ನ ಸದ್ಬಳಕೆ ಮಾಡಿಕೊಳ್ಳುವ ಮೂಲಕ ಅಧಿಕಾರಿಗಳು ಗ್ರಾಮೀಣ ಭಾಗದ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡುವಂತೆ ಶಾಸಕ ಶರಣಗೌಡ ಕಂದಕೂರ ಸಂಬಂಧಿಸಿದ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ಬುಧವಾರ ಗುರಮಠಕಲ್ ಕ್ಷೇತ್ರದ ಚಿನ್ನಾಕಾರ್ ಕ್ರಾಸ್ ಬಳಿ ಕೆಕೆಆರ್ಡಿಬಿ ಮೈಕ್ರೋ ಸಾಮಾನ್ಯ ಯೋಜನೆ ಅಡಿಯಲ್ಲಿ 9.90 ಕೋಟಿ ರೂ.ವೆಚ್ಚದಲ್ಲಿ ಮತಕ್ಷೇತ್ರದ ಸಿಂದಗಿ–ಕೊಡಂಗಲ್ ರಾಜ್ಯ ಹೆದ್ದಾರಿ 16 ಮುಖ್ಯ ರಸ್ತೆ ಆಯ್ದು ಭಾಗಗಳಲ್ಲಿ ಮರು ಡಾಂಬರಕರಣ ಹಾಗೂ ಗುರುಮಠಕಲ್ ಪಟ್ಟಣದ ರಸ್ತೆ ಅಗಲೀಕರಣ ಮತ್ತು ಬ್ರಿಡ್ಜ್ ನಿರ್ಮಾಣ ಹಾಗೂ ಗುರುಮಠಕಲ್ ಪಟ್ಟಣದಲ್ಲಿ ಸೌಂದರ್ಯಿಕರಣ ಮತ್ತು ಆಧುನಿಕ ಬಸ್ ಸ್ಟಾಂಡ್ ನಿರ್ಮಾಣ ಕಾಮಗಾರಿಗಳಿಗೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿದರು.

ಕ್ಷೇತ್ರದ ಅಭಿವೃದ್ಧಿಗೆ ನಾವು ಸರ್ಕಾರದ ಹಂತದಲ್ಲಿ ಸಾಕಷ್ಟು ಶ್ರಮಪಟ್ಟು ಅನುದಾನ ತರುತ್ತೇವೆ. ಅದು ಸದ್ಬಳಕೆಯಾದಾಗ ಮಾತ್ರ ಜನತೆಗೆ ಅನುಕೂಲವಾಗುವದಲ್ಲದೆ, ನಾವು ಪಟ್ಟ ಶ್ರಮ ಸಾರ್ಥಕವಾಗುತ್ತದೆ. ಇದು ಅಂತರರಾಜ್ಯ ಸಂಪರ್ಕಿಸುವ ಪ್ರಮುಖ ರಸ್ತೆ, ಗಡಿಭಾಗದ ಜನರು ತಮ್ಮ ದೈನಂದಿನ ಕಾರ್ಯಕ್ರಗಳಿಗಾಗಿ ಗುರುಮಿಠಕಲ್, ತೆಲಂಗಾಣದ ನಾರಾಯಣಪೇಟಗೆ



ಹೆಚ್ಚಾಗಿ ತೆರಳುತ್ತಾರೆ ಎಂದರು.

ಅಲ್ಲದೇ ಹೈದ್ರಾಬಾದ್ ಸಂಪರ್ಕಿಸುವ ರಸ್ತೆಯಾಗಿರುವುದರಿಂದ ಭಾರಿ ವಾಹನಗಳ ಓಡಾಟ ಹೆಚ್ಚಾಗಿದೆ, ಅದಕ್ಕಾಗಿ ರಸ್ತೆಯನ್ನು ದುರಸ್ಥಿಗೊಳಿಸಲಾಗುತ್ತಿದೆ. ಗುತ್ತಿಗೆದಾರರು ಹಾಗೂ ನಿರ್ವಹಣೆ ಮಾಡುವ ಲೋಕೋಪಯೋಗಿ ಅಧಿಕಾರಿಗಳು ಗುಣಮಟ್ಟದಿಂದ ಕಾಮಗಾರಿ ಕೈಗೊಂಡು ನಿಗಧಿತ ಅವಧಿಯೊಳಗೆ ಮುಗಿಸಬೇಕೆಂದು ನಿರ್ದೇಶನ ನೀಡಿದರು.

ಇನ್ನೂ ಗುರಮಠಕಲ್ ಪಟ್ಟಣದಲ್ಲಿ ಬೀದಿ ದೀಪಗಳು ಅಳವಡಿಸಿದ ಮೇಲೆ ಅವುಗಳ ನಿರ್ವಹಣೆ ಮಾಡುವ ಜವಾಬ್ದಾರಿ ಪುರಸಭೆ ಅಧಿಕಾರಿಗಳದ್ದು. ಪಟ್ಟಣದ ಉದ್ಯಾನವನ ಸೌಂದರ್ಯಿಕರಣಕ್ಕೆ 50 ಲಕ್ಷ ನೀಡಲಾಗಿದೆ. ಅಲ್ಲದೆ, ಕಾಲವಾರ ಮತ್ತು ಅಂಬಿಗರ ಚೌಡಯ್ಯನವರ ವೃತ್ತದ ಅಭಿವೃದ್ದಿಗೆ ಆದ್ಯತೆ ನೀಡಲಾಗಿದೆ. ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕೂ ಅಗತ್ಯ ಕ್ರಮಕೈಗೊಳ್ಳಲಾಗಿದೆ ಎಂದು ಹೇಳಿದರು.

ಈ ವೇಳೆ ಸ್ಥಳದಲ್ಲಿದ್ದ ಚಿನ್ನಾಕಾರ ಗ್ರಾಮ ಪಂಚಾಯತ ವ್ಯಾಪ್ತಿಯ ಎಲ್ಲಾ ಗ್ರಾಮಗಳ, ತಾಂಡಾಗಳ ಜನರ ಕುಂದು–ಕೊರತೆಗಳನ್ನು ಆಲಿಸಿ, ಪಕ್ಕದಲ್ಲಿಯೇ ಇದ್ದ ತಾಲ್ಲೂಕಾ ಮಟ್ಟದ ಅಧಿಕಾರಿಗಳಿಗೆ ಪರಿಹಾರಕ್ಕೆ ಸೂಚಿಸಿದರು.

ಇನ್ನೂ ಕೆಲವು ಸಮಸ್ಯೆಗಳಿಗೆ ತಾವೇ ಖುದ್ದಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ವಾಸ್ತವಿಕ ಪರಿಸ್ಥಿತಿ ವಿವರಿಸಿ ಕ್ರಮ ಕೈಗೊಳ್ಳಲು ಮನವಿ ಮಾಡಿದರು.

ಈ ವೇಳೆ ತಹಸೀಲ್ದಾರ್ ಚನ್ನಮಲ್ಲಪ್ಪ ಗಂಟಿ, ತಾಪಂ ಇಒ ಅಮರೇಶ ಪಾಟೀಲ್, ಪುರಸಭೆ ಮುಖ್ಯಾಧಿಕಾರಿ ಶರಣಪ್ಪ, ಎಇಇ ಪರಶುರಾಮ, ಸಿಪಿಐ ದೌಲತ್, ಜೆಡಿಎಸ್ ಜಿಲ್ಲಾಧ್ಯಕ್ಷ ಸುಭಾಷ್ಚಂದ್ರ ಕಟಕಟಿ, ಪಿಎಲ್ ಡಿ ಬ್ಯಾಂಕ್ ಅಧ್ಯಕ್ಷ ರಾಮಣ್ಣ ಯಡ್ಡಳ್ಳಿ, ಮುಖಂಡರಾದ ಸಿದ್ದರಾಮರಡ್ಡಿ ಗುಂಜನೂರ, ಅಜಯರಡ್ಡಿ ಯಲ್ಹೇರಿ, ಶರಣು ಆವಂಟಿ, ರವಿ ಪೊಲೀಸ್ ಪಾಟೀಲ್, ಮಹೇಂದ್ರರಡ್ಡಿ ಕಂದಕೂರ, ಬಸಣ್ಣ ದೇವರಳ್ಳಿ, ರವಿ ಗವಿನೋಳ, ಬಸವರಾಜ ದಾಸರ, ಆನಂದ ವಡವಟ್, ಬಾಬು, ವೆಂಕಟೇಶ ಪೂಜಾರಿ, ಮೌಲಾನಾ ಸಾಬ್, ಹಣಮಂತ ಚಿನ್ನಾಕಾರ, ಸಂದೀಪ ಚಿನ್ನಾಕಾರ, ಪಿಡಿಒ ಜಯಶ್ರೀ ಇದ್ದರು.

### ಅಧಿಕಾರಿಗಳು ಸ್ಥಳದಲ್ಲೇ ಇದ್ದು ಕೆಲಸ ಮಾಡಿ

**ಸಧ್ಯ ಮಳೆಗಾಲ ಆರಂಭಗೊಂಡಿದ್ದು ಗ್ರಾಮೀಣ ಭಾಗದಲ್ಲಿ ಮನೆಗಳು ಬಿರುಕು ಬಿಡುವುದು ಮತ್ತು ಹಳೆ ಮನೆಗಳು ನೆಲಕಚ್ಚುವ ಸಾಧ್ಯತೆ ಇರುತ್ತದೆ. ಹೀಗಾಗಿ ಅಧಿಕಾರಿಗಳು ಪಂಚಾಯಿತಿ ವ್ಯಾಪ್ತಿಯಲ್ಲಿ ಕಡ್ಡಾಯವಾಗಿರಬೇಕು. ಮೇಲಧಿಕಾರಿಗಳ ಸೂಚನೆಗೆ ಕಾಯದೆ ತಕ್ಷಣ ಕಾರ್ಯೋನ್ಮುಖರಾಗಬೇಕು. ವಿಶೇಷವಾಗಿ ಮಳೆಗಾಲದಲ್ಲಿ ಕುಡಿಯುವ ನೀರು ಕಲುಷಿತಗೊಳ್ಳುವ ಸಂಭವ ಹೆಚ್ಚಿರುವ ಕಾರಣ ಗ್ರಾಮೀಣ ಭಾಗದಲ್ಲಿ ನೀರಿನ ಟ್ಯಾಂಕ್ ಸ್ವಚ್ಛಗೊಳಿಸಬೇಕು ಎಂದು ಸ್ಥಳದಲ್ಲಿದ್ದ ತಹಸೀಲ್ದಾರರಿಗೆ ಶಾಸಕ ಕಂದಕೂರ ಸೂಚನೆ ನೀಡಿದರು.**

## ಕಾರ್ಯಕರ್ತನ ಮನೆಗೆ ಭೇಟಿ ನೀಡಿದ ಬಿಜೆಪಿ ನಿಯೋಗ; ಹಳ್ಳಿಕೇರಿಗೆ ಸ್ವಾಂತನ

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ಮಣ್ಣು ಅಕ್ರಮ ಬಯಲಿಗೆಳಿದಿದ್ದಕ್ಕೆ ಶಾಸಕ ರಾಘವೇಂದ್ರ ಹಿಟ್ನಾಳ್ ಬೆಂಬಲಿಗನಾಗಿರುವ ವ್ಯಕ್ತಿಯೊಬ್ಬರ ದೌರ್ಜನ್ಯಕ್ಕೆ ಒಳಗಾಗಿರುವ ತಾಲೂಕಿನ ನೆಲೋಗಿಪುರ ಗ್ರಾಮದ ಬಿಜೆಪಿ ಹಿರಿಯ ಕಾರ್ಯಕರ್ತನ ಮನೆಗೆ ಮಂಗಳವಾರ ಕಮಲ ಪಡೆಯ ನಾಯಕರು ಹಾಗೂ ಕಾರ್ಯಕರ್ತರು ಭೇಟಿ ನೀಡಿ, ಧೈರ್ಯ ತುಂಬಿದರು.

ಕೊಪ್ಪಳ ತಾಲೂಕಿನ ನೆಲೋಗಿಪುರ ಗ್ರಾಮದ ಬಳಿಯ ತುಂಗಭದ್ರಾ ಹಿನ್ನೀರು ಪ್ರದೇಶದಲ್ಲಿನ ಮಣ್ಣನ್ನು ಅಕ್ರಮವಾಗಿ ಎತ್ತಿ ಬೇರೆಡೆ ಸುಮಾರು 2 ಎಕರೆ ಪ್ರದೇಶದಲ್ಲಿ ಸಂಗ್ರಹಣೆ ಮಾಡಿರುವ ಗಂಭೀರ ಅಕ್ರಮವನ್ನು ಬೆಳಕಿಗೆ ತಂದಿದ್ದ ಹಿನ್ನಲೆ ಬಿಜೆಪಿ ಪಕ್ಷದ ಹಿರಿಯ ಕಾರ್ಯಕರ್ತ ಭೀಮೇಶ ಹಳ್ಳಿಕೇರಿಗೆ ಪ್ರಭಾವಿ ಪ್ರತಿಯೊಬ್ಬರು ಬೆದರಿಕೆ ಹಾಕಿದ್ದರು.

ಈ ಹಿನ್ನಲೆ ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್, ಕೊಪ್ಪಳ ಲೋಕಸಭಾ ಕ್ಷೇತ್ರದ ನಿಕಟಪೂರ್ವ ಅಭ್ಯರ್ಥಿ ಬಸವರಾಜ ಕ್ಯಾವಟರ್ ಸೇರಿದಂತೆ ಮುಖಂಡರು ಹಾಗೂ ಕಾರ್ಯಕರ್ತರು ಭೀಮೇಶ ಹಳ್ಳಿಕೇರಿಗೆ ಧೈರ್ಯ ತುಂಬಿ, ನಿಮ್ಮ ಜತೆ ನಾವಿದ್ದೇವೆ, ಎದೆಗುಂದಬೇಡಿ ಎಂದು ಧೈರ್ಯ ತುಂಬಿದರು.

ಅಲ್ಲದೆ, ಇಂತಹ ಅಕ್ರಮದ ವಿರುದ್ಧ ಕ್ರಮ ಕೈಗೊಳ್ಳುವ ಬದಲು ಸತ್ಯವನ್ನು ಬಹಿರಂಗಪಡಿಸಿದ ಕಾರ್ಯಕರ್ತರನ್ನೇ ಬೆದರಿಸುವ ಪ್ರಯತ್ನ ಮಾಡಿದ ಪೊಲೀಸ್ ಇಲಾಖೆಯ ಕಾರ್ಯವನ್ನು ಇದೇ ವೇಳೆ ಬಿಜೆಪಿ ನಾಯಕರು ಖಂಡಿಸಿದರು.

ಈ ಪ್ರಕರಣದಲ್ಲಿ ಕೆಲ ಪೊಲೀಸ್ ಅಧಿಕಾರಿಗಳ ನಿರ್ಲಕ್ಷ ಹಾಗೂ ರಾಜಕೀಯ ವ್ಯಕ್ತಿಗಳ ಪ್ರಭಾವ ಸ್ಪಷ್ಟವಾಗಿ ಕಾಣಿಸುತ್ತಿದೆ. ಅಕ್ರಮದ ಬಗ್ಗೆ ಮಾಹಿತಿ ಮತ್ತು ಸಾಕ್ಷಿಗಳು ಇದ್ದರೂ ಕೂಡ ಕ್ರಮ ಕೈಗೊಳ್ಳಲು ವಿಳಂಬವಾಗುತ್ತಿರುವುದು ಹಲವು ಅನುಮಾನಗಳಿಗೆ



ಕಾರಣವಾಗಿದೆ. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆಯ ಪತಿಯೋರ್ವರು ಬೆದರಿಕೆ ಹಾಕಿರುವ ವಿಚಾರ ಗಂಭೀರ ತನಿಖೆಗೆ ಒಳಪಡಬೇಕು.

ಈ ಬೆದರಿಕೆಯ ಹಿಂದೆ ಯಾರ ರಾಜಕೀಯ ಶಕ್ತಿ ಕೆಲಸ ಮಾಡುತ್ತಿದೆ...? ಯಾರ ಆಶ್ರಯದಲ್ಲಿ ಈ ದಬ್ಬಾಳಿಕೆ ನಡೆಯುತ್ತಿದೆ ಎಂಬುದು ರಾಜ್ಯದ ಜನರ ಮುಂದೆ ಬರಲೇಬೇಕು. ಸತ್ಯ ಹೇಳಿದವರಿಗೆ ರಕ್ಷಣೆ ಸಿಗದೇ, ಅಕ್ರಮ ಮಾಡಿದವರಿಗೆ ರಾಜಕೀಯ ಪ್ರಭಾವ ಮತ್ತು ಅಧಿಕಾರದ ರಕ್ಷಣೆ ಸಿಗುವ ಪರಿಸ್ಥಿತಿ ನಿರ್ಮಾಣವಾಗಿದ್ದರೆ ಸಾಮಾನ್ಯ ಜನರು ನ್ಯಾಯದ ಮೇಲೆ ಹೇಗೆ ನಂಬಿಕೆ ಇಡಬೇಕು..?

ಒಬ್ಬ ಕಾರ್ಯಕರ್ತ ಅಕ್ರಮದ ವಿರುದ್ಧ ಧ್ವನಿ ಎತ್ತಿದರೆ ಅವನನ್ನು ಪೊಲೀಸರು ಬೆದರಿಸುವುದು ಕೇವಲ ವ್ಯಕ್ತಿಯ ಮೇಲಿನ ದಾಳಿ ಅಲ್ಲ, ಅದು ಪ್ರಜಾಪ್ರಭುತ್ವ ಮತ್ತು ಸತ್ಯದ ಧ್ವನಿಯ ಮೇಲಿನ ದಾಳಿ ಎಂದು ಬಿಜೆಪಿ ಪಕ್ಷದ ನಾಯಕರು ಇದೇ ವೇಳೆ ಆಕ್ರೋಶ ವ್ಯಕ್ತಪಡಿಸಿದರು.

ಕೊನೆಗೆ "ನೀವು ಸತ್ಯಕ್ಕಾಗಿ ಹೋರಾಟ ಮಾಡುತ್ತಿದ್ದೀರಿ, ನಿಮ್ಮೊಂದಿಗೆ ನಾವು ಗಟ್ಟಿಯಾಗಿ ನಿಲ್ಲುತ್ತೇವೆ" ಎಂಬ ವಿಶ್ವಾಸವನ್ನು ಬಿಜೆಪಿ ಕಾರ್ಯಕರ್ತ ಭೀಮೇಶನಿಗೆ ಮುಖಂಡರು ನೀಡಿದರು.


ಗ್ರಾಮೀಣ ಮಂಡಲ ಅಧ್ಯಕ್ಷ ವೀರೇಶ ಸಜ್ಜನ, ಮುಖಂಡರಾದ ಮಹಾಂತೇಶ ಪಾಟೀಲ್ ಮೈನಳ್ಳಿ, ಮುಖಂಡ ಪ್ರದೀಪ ಹಿಟ್ನಾಳ್, ಗಣೇಶ್ ಹೊರತಟ್ನಾಳ, ಉಮೇಶ್ ಕುರ್ಡೇಕರ್, ಡಾ . ಸಿದ್ದಲಿಂಗಸ್ವಾಮಿ, ಅಂದಪ್ಪ ಯಲ್ಲಮ್ಮನವರ್ ಹಾಗೂ ಗ್ರಾಮದ ಹಿರಿಯರು ಉಪಸ್ಥಿತರಿದ್ದರು.

## ಮುಖ್ಯಮಂತ್ರಿಯಾಗಿ ಸಿಎಂ ಸಿದ್ದರಾಮಯ್ಯ ಅವರನ್ನು ಮುಂದುವರೆಸದಿದ್ದರೆ ತಕ್ಕಪಾಠ: ಭೀಮು ಪೂಜಾರಿ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಾಮಾಜಿಕ ಆರ್ಥಿಕ ಗಣತಿ ವರದಿ ಸಲ್ಲಿಕೆಯಾಗುವ ವರೆಗೆ ಮುಂದುವರೆಸಬೇಕು ಎಂದು ಸಮಾಜಿಕ ಹೋರಾಟಗಾರ ಭೀಮು ಪೂಜಾರಿ ಆಗ್ರಹಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ಯಾವುದೆ ಕಳಂಕವಿಲ್ಲದೇ ಸಮರ್ಥವಾಗಿ ಆಡಳಿತ ನಡೆಸಿಕೊಂಡು ಹೋಗುತ್ತಿರುವ ಸಿದ್ದರಾಮಯ್ಯ ಅವರನ್ನು ಏಕಾಏಕಿ ಕೆಳಗಿಳಿಸುವ ಕಾಂಗ್ರೆಸ್ ಹೈಕಮಾಂಡ್ ನಿರ್ಣಯಕ್ಕೆ ಅಹಿಂದ ಸಮುದಾಯದ ಕಡುವಿರೋಧವಿದೆ ಎಂದು ಅವರು ಹೇಳಿದ್ದಾರೆ. ಯಾವುದೇ ಕಾರಣಕ್ಕೂ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಬಾರದು ಎಂದು ಆಗ್ರಹಿಸಿರುವ ಅವರು, ಒಂದು ವೇಳೆ ಕಾಂಗ್ರೆಸ್ ಹೈಕಮಾಂಡ್



ಈ ನಿಟ್ಟಿನಲ್ಲಿ ಮುಂದುವರೆದಿದ್ದೇ ಆದಲ್ಲಿ ಅಹಿಂದ ಸಮುದಾಯ ಕಾಂಗ್ರೆಸ್ ಮತ್ತೆ ಎಂದೂ ಮೇಲೆಳದಂತೆ ಪೆಟ್ಟುಕೊಡಲಿದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ. ಹಿಂದುಳಿದ ವರ್ಗಗಳ ಏಕೈಕ ನಾಯಕರಾಗಿರುವ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿದ್ದೇ ಆದಲ್ಲಿ ಹಿಂದುಳಿದ ಸಮುದಾಯ ಸುಮ್ಮನೇ ಕೂಡ್ರುವುದಿಲ್ಲ. ಉಗ್ರ ಹೋರಾಟ ರೂಪಿಸಬೇಕಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ಸಿದ್ದರಾಮಯ್ಯ ಅವರ ಕನಸಿನ ಕೂಸಾದ ಆರ್ಥಿಕ ಸಾಮಾಜಿಕ ಗಣತಿ (ಜಾತಿ ಗಣತಿ) ವರದಿಯನ್ನು ಸಲ್ಲಿಕೆ ಮಾಡುವವರೆಗಾದರೂ ಅವರನ್ನು ಮುಂದುವರೆಸಬೇಕು ಇಲ್ಲವಾದಲ್ಲಿ ಕಾಂಗ್ರೆಸ್ ಗೆ ಸರಿಯಾದ ಪಾಠ ಕಲಿಸಬೇಕಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

## ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ : ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ ವೇಳಾಪಟ್ಟಿ ಪ್ರಕಟ: ಡಾ. ಸುರೇಶ ಇಟ್ನಾಳ

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**



ಭಾರತ ಚುನಾವಣಾ ಆಯೋಗವು 2026ರ ಮೇ 14ರಂದು ಹೊರಡಿಸಿದ ಪ್ರಕಟಣೆಯನ್ವಯ ಅರ್ಹತಾ ದಿನಾಂಕ 01.10.2026ಕ್ಕೆ ಅನ್ವಯಿಸುವಂತೆ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ 2026ರ ವೇಳಾಪಟ್ಟಿಯನ್ನು ನಿಗದಿಪಡಿಸಲಾಗಿರುತ್ತದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ. ಇಟ್ನಾಳ ಅವರು ಹೇಳಿದರು. ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆಗೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮೇ 27ರಂದು ಜಿಲ್ಲೆಯ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಕರೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ–2026ಕ್ಕೆ ಸಂಬಂಧಿಸಿದಂತೆ 1.10.2026ನ್ನು ಅರ್ಹತಾ ದಿನಾಂಕ ಎಂದು ನಿಗದಿಪಡಿಸಲಾಗಿದೆ. 2026ರ ಜೂನ್ 20 ರಿಂದ ಜೂನ್ 29 ರವರೆಗೆ ಪರಿಷ್ಕರಣೆಯ ಸಿದ್ಧತೆ, ತರಬೇತಿ ಮತ್ತು ಮುದ್ರಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಜೂನ್ 30 ರಿಂದ ಜುಲೈ 29ರವರೆಗೆ ಬಿ.ಎಲ್.ಓ.ಗಳಿಂದ ಮನೆ ಮನೆ ಭೇಟಿ ನಡೆಯುತ್ತದೆ. ಜುಲೈ 29ರೊಳಗೆ ಮತಗಟ್ಟೆಗಳ ರ್‍ಯಾಷನಲೈಜೆಷನ್ ನಡೆಯಲಿದೆ. ಆಗಸ್ಟ್ 5ರಂದು ಕರಡು ಮತದಾರರ ಪಟ್ಟಿ ಪ್ರಕಟಣೆ ಮಾಡಲಾಗುತ್ತದೆ. ಆಗಸ್ಟ್ 5 ರಿಂದ ಸೆಪ್ಟೆಂಬರ್ 4ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶವಿರುತ್ತದೆ. ಆಗಸ್ಟ್ 5 ರಿಂದ ಅಕ್ಟೋಬರ್ 3 ರವರೆಗೆ ನೋಟೀಸ್ ಅವಧಿ, ಹಕ್ಕುಗಳು ಮತ್ತು ಆಕ್ಷೇಪಣೆಗಳ ವಿಲೇವಾರಿ ನಡೆಯಲಿದೆ. 2026ರ ಅಕ್ಟೋಬರ್ 7 ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಣೆ ಮಾಡಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು.

*ಬಿಎಲ್ಎ ನೇಮಿಸಲು ಸೂಚನೆ:* ಕುಷ್ಟಗಿ, ಕನಕಗಿರಿ, ಗಂಗಾವತಿ, ಯಲಬುರ್ಗಾ, ಕೊಪ್ಪಳ ವಿಧಾನಸಭಾ ಕ್ಷೇತ್ರಗಳು ಸೇರಿದಂತೆ ಕೊಪ್ಪಳ ಜಿಲ್ಲೆಯಲ್ಲಿನ ಒಟ್ಟು 11,92,589 ಮತದಾರ ಪೈಕಿ ಈಗಾಗಲೇ ಶೇ.94.98ರಷ್ಟು ಮ್ಯಾಪಿಂಗ್ ಕಾರ್ಯ ನಡೆದಿರುತ್ತದೆ. ಉಳಿದ 59,853 ಮತದಾರರಿಗೆ ಮ್ಯಾಪಿಂಗ್ ಕಾರ್ಯ ಬಾಕಿ ಇದ್ದು, ಅರ್ಹ ಎಲ್ಲ ಮತದಾರರ ಹೆಸರು ಮತದಾರರ ಪಟ್ಟಿಗೆ ಸೇರ್ಪಡೆಯಾಗಬೇಕಿದೆ. ಕೊಪ್ಪಳ ಜಿಲ್ಲೆಯಲ್ಲಿನ 1315 ಮತಗಟ್ಟೆಗಳಿಗೆ ರಾಜಕೀಯ ಪಕ್ಷಗಳು ಕಡ್ಡಾಯವಾಗಿ ಬಿಎಲ್ಎಗಳನ್ನು ನೇಮಿಸಬೇಕು. ಇದುವರೆಗೆ ಬಿಎಲ್.ಎ.ಗಳನ್ನು ನೇಮಕ ಮಾಡದೇ ಇರುವ ರಾಜಕೀಯ ಪಕ್ಷಗಳು ಕೂಡಲೇ ಬಿಎಲ್ಎಗಳನ್ನು ನೇಮಕ ಮಾಡಲು ಕ್ರಮ ವಹಿಸಬೇಕು ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳು ಸಭೆಯಲ್ಲಿದ್ದ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಸೂಚನೆ ನೀಡಿದರು.

ಕೊಪ್ಪಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ ಅವರು ಮಾತನಾಡಿ, ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆಯ ಬಗ್ಗೆ ಜನರಿಗೆ ಏನಾದರು ಗೊಂದಲಗಳಿದ್ದಲ್ಲಿ ತಿಳಿದುಕೊಳ್ಳಲು ಅನುಕೂಲವಾಗುವಂತೆ ಕೊಪ್ಪಳ ಜಿಲ್ಲೆಯ 152 ಗ್ರಾಮ ಪಂಚಾಯತಗಳಲ್ಲಿ ಜೊತೆಗೆ ಪಟ್ಟಣ ಮತ್ತು ನಗರ ಪ್ರದೇಶಗಳ ಪ್ರತಿ ವಾರ್ಡನಲ್ಲಿ ವೋಟರ್ ಫೆಸಿಲಿಟೇಷನ್ ಸೆಂಟರ್ ತೆರೆದು ಅಲ್ಲಿ ಆಸನಗಳ, ಕುಡಿಯುವ ನೀರು, ಇಂಟರನೆಟ್, ಕಂಪ್ಯೂಟರ್ ವ್ಯವಸ್ಥೆ ಮಾಡಲಾಗುತ್ತದೆ. ಹೋರ್ಡಿಂಗ್ಸ್, ಪೋಸ್ಟರ್, ಕರಪತ್ರ ಮತ್ತು ಜಿಂಗಲ್ಸ್ ಮೂಲಕ ಜನತೆಗೆ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆಯ ಬಗ್ಗೆ ಮಾಹಿತಿ ನೀಡಲಾಗುತ್ತದೆ ಎಂದು ಅವರು ತಿಳಿಸಿದರು.

ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆಯ ಬಗ್ಗೆ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಕಸ ವಿಲೇವಾರಿ ವಾಹನಗಳಲ್ಲಿ ಜಿಂಗಲ್ಸ್ ಅಳವಡಿಸಿ ಮತ್ತು ಸಹಕಾರಿ ಸಂಘಗಳು ಹಾಗೂ ನ್ಯಾಯಬೆಲೆ ಅಂಗಡಿಗಳ ಮೂಲಕ ಪ್ರಚಾರ ನಡೆಸಬೇಕು ಎಂದು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸಭೆಗೆ ಸಲಹೆ ಮಾಡಿದರು.

ಸಭೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಅಮರೇಗೌಡ ಪಾಟೀಲ್ ಬಯ್ಯಾಪೂರ, ನವೀನ್ ಗುಳಗಣ್ಣನವರ, ಕೃಷ್ಣ ಇಟ್ಟಂಗಿ, ಮಂಜುನಾಥ ಸೊರಟೂರ, ರಾಜು ಬಾಕ್ಳೆ, ಕಳಕನಗೌಡ, ಶರಣು ಶೆಟ್ಟರ್, ಸೋಮನಗೌಡ, ರಮೇಶ ಡಂಬ್ರಳ್ಳಿ, ಮೌನೇಶ್ ಕಿನ್ನಾಳ, ಶಿವಕುಮಾರ್ ಇ., ರಮೇಶ ಎಂ. ಹಾಗೂ ಮತ್ತಿತರರು ಮತ್ತು ಜಿಲ್ಲಾ ಚುನಾವಣಾ ಶಾಖೆ–ಯ ಶಿರಸ್ತೇದಾರರಾದ ನಾಗರಾಜ್ ಸೇರಿದಂತೆ ಚುನಾವಣಾ ಶಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

## ಸ್ವಚ್ಛತೆಗಾರರು ತಮ್ಮ ಆರೋಗ್ಯದ ಕಡೆ ಗಮನ ಕೊಡಿ : ನಾಗೇಶ್



• **ಮಲ್ಲಮ್ಮ ನುಡಿ ವಾರ್ತೆ ಕುಕನೂರು**

ಕಾರ್ಮಿಕರು ಕೇವಲ ದುಡಿಮೆಗೆ ಮಾತ್ರವೇ ಪ್ರಾಧಾನ್ಯತೆ ನೀಡದೆ, ಸ್ವಚ್ಛತೆಯನ್ನು ಕಾಪಾಡುವುದು, ತಮ್ಮ ಆರೋಗ್ಯ ರಕ್ಷಣೆಯ ಕಡೆಗೂ ಗಮನ ಹರಿಸಬೇಕು ಎಂದು ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿ ನಾಗೇಶ್ ಹೇಳಿದರು.


ಇಲ್ಲಿನ ಪಟ್ಟಣ ಪಂಚಾಯಿತಿ ಆವರಣದಲ್ಲಿ ಸೋಮವಾರ ಆಯೋಜಿಸಿದ್ದ ಸ್ವಚ್ಛ ಭಾರತ ಅಭಿಯಾನ ಅಡಿಯಲ್ಲಿ ಘನತ್ಯಾಜ್ಯ ವಿಲೇವಾರಿ ಸ್ವಚ್ಛತಾ ಕಾರ್ಯಕ್ರಮದ ಅನುಷ್ಠಾನ ಸಭೆಯಲ್ಲಿ ಅವರು ಮಾತನಾಡಿದರು.

ಕಾರ್ಮಿಕರು ಕೇವಲ ದುಡಿಮೆಗಷ್ಟೇ ಸೀಮಿತವಾಗದೆ, ಆರೋಗ್ಯ ಕಾಪಾಡಿಕೊಳ್ಳುವುದರ ಕಡೆಗೆ ಹೆಚ್ಚಿನ ಗಮನ ನೀಡಬೇಕು. ಕಾರ್ಮಿಕರು ಪಟ್ಟಣದ ಸ್ವಚ್ಛತೆಗೆ ಮೊದಲ ಆದ್ಯತೆಯನ್ನು ಸರಿಯಾದ ಸಮಯಕ್ಕೆ ಕಾರ್ಯ ತತ್ಪರರಾಗಿ ಪಟ್ಟಣ ಸುಂದರವಾಗಿ ಕಾಣುವಂತೆ ಮಾಡುವುದು ನಿಮ್ಮೆಲ್ಲರ ಜವಾಬ್ದಾರಿ ಎಂದರು.

ಸ್ವಚ್ಛ ಭಾರತ್ ಅಭಿಯಾನದ ಸುಪ್ರೀಂ ಕೋರ್ಟಿನ ಆದೇಶದ ಅನ್ವಯ ಸ್ವಚ್ಛತೆ ಸ್ವಚ್ಛತೆಯಿಂದ ಆರೋಗ್ಯ ಎಂಬ ಸಂದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿದೆ.

ಆದ್ದರಿಂದ ಗುಂಪುಗಳ ಪ್ರತಿ ಮೇಲ್ವಿಚಾರಕರು ಹಸಿ ಕಸ, ಒಣ ಕಸ, ರಸ್ತೆ, ಒಳಚರಂಡಿ ಪ್ರತಿಯೊಂದು ಸ್ವಚ್ಛತೆ ಇರುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ನಿಮ್ಮ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದರು

## ತಾಲೂಕಿನಾದ್ಯಂತ ನಿಷ್ಕ್ರಿಯಗೊಂಡ ಬಿ.ಜೆ.ಪಿ. ಪಕ್ಷ



**ಮಲ್ಲಮ್ಮ ನುಡಿ ವಾರ್ತೆಕಲಘಟಗಿ**

ಮೇ.27: ಸಂಘಟನೆಯ ಮೂಲಕವೇ ತಾಲೂಕಿನಲ್ಲಿ ಅಧಿಕಾರ ಗಿಟ್ಟಿಸಿಕೊಂಡ ತಾಲೂಕಾ ಬಿ.ಜೆ.ಪಿ ಸಂಘಟನೆ ಉತ್ತಮ ಸಂಘಟಿಕರಿಲ್ಲದೆ ತಾಲೂಕಿನಾದ್ಯಂತ ನಿಷ್ಕ್ರಿಯಗೊಂಡಿದೆ.

ಜನತಾದಳ ಬಲವಾಗಿದ್ದಾಗೂ ಕೂಡ ನಿರಂತರ ಸಂಘಟನೆಯ ಮೂಲಕ ಜಯ ಸಾಧಿಸುವ ಮೂಲಕ ಉತ್ತಮ ಕಾರ್ಯಕರ್ತರನ್ನು ಹುಟ್ಟುಹಾಕಿ ಅಧಿಕಾರ ಪಡೆದುಕೊಂಡಿತ್ತು. ನಂತರ ದಿನಮಾನಗಳಲ್ಲಿ ಕ್ಷೇತ್ರ ವಿಭಜನೆಯ ನಂತರ ಪ್ರಭಾವಿಗಳ ಕೈಯಿಂದ ಕ್ಷೇತ್ರ ಬೇರೆಯವರ ಪಾಲದಾರು ಸತತ ಸೋಲುಗಳ ನಡುವೆ ಸಂಘಟನೆಯ ಮೂಲಕ ಅತ್ಯದ್ಭುತ ಜಯದೊಂದಿಗೆ ಪಕ್ಷ ತಲೆ ಎತ್ತಿತ್ತು ಆದರೆ ಕಾರ್ಯಕರ್ತರನ್ನು ಬೆಂಬಲಿಸಿ ಜನ ಸಾಮಾನ್ಯರೊಡನೆ ನಿತ್ಯ ಸಂಪರ್ಕವಿಲ್ಲದೆ ಬಿ.ಜೆ.ಪಿ ಪಕ್ಷ ತಾಲೂಕಿನಲ್ಲಿ ಮಕಾಡೆ ಮಲಗಿದೆ ಯಾವುದೇ ಪತ್ರಕರ್ತರ ಸಭೆಗಳಿಲ್ಲ ಆಡಳಿತ ಪಕ್ಷದವರ ವಿರುದ್ಧ ಧ್ವನಿಎತ್ತುವರಿಲ್ಲ ಕೊನೆಯ ಪಕ್ಷ ಪಶ್ಚಿಮ ಬಂಗಾಳ, ಆಸ್ಸಾಂ, ಪುದಿಚೆರಿಯಲ್ಲಿ ಪಕ್ಷ ವಿಜಯ ಸಾಧಿಸಿದ್ದನ್ನು ತಾಲೂಕಿನಲ್ಲಿ ಯಾವುದೇ ಕಾರ್ಯಕರ್ತರು ಉತ್ಸಾಹದಿಂದ ಆಚರಿಸಲಿಲ್ಲ ಇದೆ ರೀತಿ ಸಂಘಟನೆ ಮುಂದುವರೆದರೆ ಪಕ್ಷಕ್ಕೆ ಬರುವ ದಿನಮಾಗಳಲ್ಲಿ ಜಯ ಮರಿಚಿಕೆಯಾಗಬಹುದು.

ನಮ್ಮ ಕಾಲದಲ್ಲಿ ಮನೆ ಮನೆಗೆ ಹೋಗಿ ಜನರನ್ನು ಮನವಲಿಸಿ ಪಕ್ಷಕ್ಕೆ ಸ್ವಂತ ಖರ್ಚಿನಲ್ಲಿ ಸೇರ್ಪಡೆ ಮಾಡುತ್ತಿದ್ದೆವು ಪಕ್ಷದ ಸಂಘಟನೆ ಇಲ್ಲಿದಿದ್ದಾಗ ಮನೆ ಮನೆಗೆ ಹೋಗಿ ಪಕ್ಷ ಧ್ವಜವನ್ನು ಕಟ್ಟಿದ್ದೆವೆ ಆ ರೀತಿ ಸಂಘಟಕರ ಕೊರತೆ ತಾಲೂಕಿನಲ್ಲಿ ಕಾಡುತ್ತಿದೆ.

**ಮಾಜಿ ನಾಮ ನಿರ್ದೇಶನ ಸದಸ್ಯ ಮದಸೂಧನ ಉಪಾದ್ಯೆ**

---

ಪಕ್ಷ ಸಂಘಟನೆಗೆ ತಯಾರಾಗದೇ ಕೇವಲ ಅಧಿಕಾರಕ್ಕೆ ಮಾತ್ರ ಪಕ್ಷಕ್ಕೆ ಸೇರ್ಪಡೆಗೋಳ್ಳುತ್ತಿದ್ದು ಗೆದ್ದಲು ಕಟ್ಟಿದ ಹುತ್ತಲ್ಲಿ ಹಾವುಗಳು ವಾಸವಾಗಿವೆ.

**ಮಹದೇವಪ್ಪ ಬೇರುಡಗಿ ಪಕ್ಷದ ಹಿರಿಯ ಕಾರ್ಯಕರ್ತ**

---

ತಾಲೂಕಿನಲ್ಲಿ ನಿರಂತರವಾಗಿ ನಮ್ಮ ಪಕ್ಷದ ಚಟುವಟಿಕೆ ನಡೆದಿದ್ದು ತಾಲೂಕಿನ ಸಮಸ್ಯೆಗಳಿಗೆ ಇ ಸರ್ಕಾರ ಸ್ಪಂದಿಸುತ್ತಿಲ್ಲ ಅನೇಕ ರೈತರಿಗೆ ಸಮಸ್ಯೆಯಾದರು ಸಚಿವರ ಸ್ಪಂದಿಸುತ್ತಲ್ಲ ಮುಂಬರುವ ದಿನದಲ್ಲಿ ಹೋರಾಟ ಅನಿವಾರ್ಯ

**ಬಿಜೆಪಿ ಮಂಡಲ ಅಧ್ಯಕ್ಷ ಯಲ್ಲಾರಿ ಶಿಂಧೆ**

## ರೈತರ ಬೇಡಿಕೆಯಂತೆ ಜಿಲ್ಲೆಯಲ್ಲಿ ರಸಗೊಬ್ಬರ ದಾಸ್ತಾನು

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ರೈತರ ಬೇಡಿಕೆಯಂತೆ ಜಿಲ್ಲೆಯಲ್ಲಿ ರಸಗೊಬ್ಬರ ದಾಸ್ತಾನು ಮಾಡಲಾಗಿದ್ದು, ಕೊಪ್ಪಳ ಜಿಲ್ಲೆಯಲ್ಲಿ ಯಾವುದೇ ರೀತಿಯ ರಸಗೊಬ್ಬರದ ಕೊರತೆ ಇರುವುದಿಲ್ಲವೆಂದು ಕೊಪ್ಪಳ ಜಂಟಿ ಕೃಷಿ ನಿರ್ದೇಶಕರಾದ ಜಿ.ಡಿ ಕೃಷ್ಣಮೂರ್ತಿ ಅವರು ತಿಳಿಸಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ ಏಪ್ರೀಲ್ ನಿಂದ ಮೇ ವರೆಗೆ ರಸಗೊಬ್ಬರ ಬೇಡಿಕೆಯು 33,187 ಟನ್ ಯಿದ್ದು, 43,282 ಟನ್ ರಸಗೊಬ್ಬರ ದಾಸ್ತಾನಿಕರಿಸಿದ್ದು (Opening Balance ಸೇರಿ), 10,032 ಟನ್ ರಸಗೊಬ್ಬರ ವಿತರಣೆ ಮಾಡಲಾಗಿದೆ. ಬಾಕಿ ಉಳಿದಿರುವ ದಾಸ್ತಾನು 33,250 ಟನ್ ರಸಗೊಬ್ಬರವಿದ್ದು, ಇದರಲ್ಲಿ ಯೂರಿಯಾ 11,004 ಟನ್, ಡಿಎಪಿ 5002 ಟನ್, ಎಂಓಪಿ 1092 ಟನ್, ಕಾಂಪ್ಲೆಕ್ಸ್ 15,740 ಟನ್, ಎಸ್.ಎಸ್.ಪಿ 412 ಟನ್ ಮತ್ತು ಇದರ ಜೊತೆಗೆ 13,520 ಲೀಟರ್ ನ್ಯಾನೋ ಯೂರಿಯಾ, 1825 ಲೀಟರ್ ನ್ಯಾನೋ ಡಿಎಪಿ ಕೃಷಿ ಪರಿಕರ ಮಾರಾಟಗಾರ ಮಳಿಗೆಗಳಲ್ಲಿ ಲಭ್ಯವಿದ್ದು, ಜಿಲ್ಲೆಯಲ್ಲಿ ರಸಗೊಬ್ಬರದ ಕೊರತೆ ಇರುವುದಿಲ್ಲ.

ನ್ಯಾನೋ ಯೂರಿಯಾ ಹಾಗೂ ನ್ಯಾನೋ ಡಿಎಪಿ ಸ್ಪ್ರೇ ಮಾಡುವುದರಿಂದ ಗಿಡಗಳಿಗೆ ನೇರವಾಗಿ ಪೋಷಕಾಂಶ ದೊರೆಯುವುದರಿಂದ ನೀರು ಹಾಗೂ ಮಣ್ಣನ್ನು ಸಂರಕ್ಷಿಸಬಹುದು.

ಕೊಪ್ಪಳ ಜಿಲ್ಲೆಯ ನಾನಾ ಗೋದಾಮುಗಳಿಗೆ ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರ ಕಛೇ–ರಿಯ ಅಧಿಕಾರಿಗಳ ತಂಡ ಭೇಟಿ ನೀಡಿ, ಯೂರಿಯಾ ದಾಸ್ತಾನು ಪರಿಶೀಲನೆ ನಡೆಸಲಾಗಿದೆ. ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ರೈತರು ಯೂರಿಯಾ ರಸಗೊಬ್ಬರ ಖರೀದಿಸಲು ರೈತರ ಫ್ರೂಟ್ ಐಡಿ (ಎಫ್.ಐಡಿ) ಸಂಖ್ಯೆ ಕಡ್ಡಾಯಗೊಳಿಸಲಾಗಿದೆ. ರೈತರ ಎಫ್.ಐಡಿ ಸಂಖ್ಯೆ ಬಳಸಿಕೊಂಡು ಅವರು ಹೊಂದಿರುವ ಜಮೀನಿನ ವಿಸ್ತೀರ್ಣ ಮತ್ತು ಬೆಳೆದ ಬೆಳೆಗೆ ಅನುಗುಣವಾಗಿ ಎಷ್ಟು ಪ್ರಮಾಣದ ಯೂರಿಯಾ ಅಗತ್ಯವಿದೆಯೋ ಅಷ್ಟನ್ನು ಮಾತ್ರ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಸಂಪೂರ್ಣ ಪ್ರಕ್ರಿಯೆಯು ಕೆ–ಕಿಸಾನ್ ಯೂರಿಯಾ ವಿತರಣೆ ತಂತ್ರಾಂಶದ ಮೂಲಕವೇ ನಡೆಯಲಿದೆ.

ರೈತರಲ್ಲದವರು ರೈತರ ಹೆಸರಿನಲ್ಲಿ ರಸಗೊಬ್ಬರ ಖರೀದಿಸಿ ಆಕ್ರಮವಾಗಿ ಕಾಳಸಂತೆಯಲ್ಲಿ ಮಾರಾಟ ಮಾಡುವುದನ್ನು ತಡೆಯುವುದು, ರೈತರು ಮಿತವಾಗಿ ಗೊಬ್ಬರ ಬಳಸುವಂತೆ ಮಾಡುವುದು ಹಾಗೂ ಮಾರಾಟದ ಮೇಲೆ ನಿಗಾ ಇರಿಸುವ ಉದ್ದೇಶದಿಂದ ಈ ಕ್ರಮ ಜಾರಿಗೆ ತರಲಾಗಿದೆ. ಎಫ್.ಐಡಿ ಹೊಂದಿಲ್ಲದ ರೈತರು ತಕ್ಷಣವೇ ತಮ್ಮ ಪಹಣಿ, ಬ್ಯಾಂಕ್ ಪಾಸ್ ಬುಕ್ ಮತ್ತು ಆಧಾರ್ ಕಾರ್ಡ್ ದಾಖಲೆಗಳೊಂದಿಗೆ ಸಮೀಪದ ರೈತ ಸಂಪರ್ಕ ಕೇಂದ್ರ, ತೋಟಗಾರಿಕೆ ಇಲಾಖೆ, ಕಂದಾಯ ಇಲಾಖೆ, ಗ್ರಾಮ ಒನ್, ಸಾಮಾನ್ಯ ಸೇವಾ ಕೇಂದ್ರಗಳಿಗೆ ಭೇಟಿ ನೀಡಿ ಎಫ್.ಐಡಿ ಸೃಜಿಸಿಕೊಳ್ಳಬೇಕು. ಈಗಾಗಲೇ ಎಫ್.ಐಡಿ ಹೊಂದಿರುವ ರೈತರು ತಮ್ಮ ಎಲ್ಲ ಸರ್ವೆ ನಂಬರ್ ಗಳನ್ನು ಅದಕ್ಕೆ ಜೋಡಣೆ ಮಾಡಿಸಿಕೊಳ್ಳಲು ಅವಕಾಶವಿದೆ. ಇದರಿಂದ ತಮ್ಮ ಎಲ್ಲಾ ಜಮೀನುಗಳಿಗೆ ರಸಗೊಬ್ಬರ ಪಡೆಯಬಹುದಾಗಿದೆ.

ರಸಗೊಬ್ಬರ ಮಾರಾಟಗಾರರು ಕಡ್ಡಾಯವಾಗಿ ಕೆ–ಕಿಸಾನ್ ತಂತ್ರಾಂಶದಲ್ಲಿ ರೈತರ ಎಫ್ ಐಡಿ ನಮೂದಿಸಿ ಯೂರಿಯಾ ಮಾರಾಟ ಮಾಡಬೇಕು. ಒಂದು ವೇಳೆ 'ಓ' ಫಾರಂ ನವೀಕರಿಸದೆ ಮಾರಾಟ ಮಾಡಿದರೆ, ನಿಗದಿಪಡಿಸಿದ ಗರಿಷ್ಟ ಮಾರಾಟ ಬೆಲೆಗಿಂತ ಹೆಚ್ಚಿನ ದರಕ್ಕೆ ಮಾರಿದರೆ ಅಥವಾ ಕೃಷಿ ಯೇತರ ಉದ್ದೇಶಗಳಿಗೆ ಯೂರಿಯಾ ಸರಬರಾಜು ಮಾಡುವುದು ಕಂಡುಬಂದಲ್ಲಿ ಅಂತಹ ಮಾರಾಟಗಾರರ ವಿರುದ್ಧ ರಸಗೊಬ್ಬರ ನಿಯಂತ್ರಣ ಕಾಯ್ದೆ 1985 ಮತ್ತು ಅಗತ್ಯ ವಸ್ತುಗಳ ಕಾಯ್ದೆ 1955ರ ಅಡಿಯಲ್ಲಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಂಟಿ ಕೃಷಿ ನಿರ್ದೇಶಕರು ಎಚ್ಚರಿಸಿದ್ದಾರೆ.

# ಜಿಲ್ಲೆಯಲ್ಲಿ ತೈಲ ಕೊರತೆ ಇಲ್ಲ, ಸಾರ್ವಜನಿಕರು ಅಂತಕ ಪಡಬಾರದು: ಜಿಲ್ಲಾಧಿಕಾರಿ ಪೂವಿತಾ



• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಮೇ.27 : ಜಿಲ್ಲೆಯಲ್ಲಿ ಪೆಟ್ರೋಲ್, ಡೀಸೆಲ್ ಹಾಗೂ ಎಲ್.ಪಿ.ಜಿ ಅನಿಲ್ ಪೂರೈಕೆಯಲ್ಲಿ ಯಾವುದೇ ಕೊರತೆಯಿಲ್ಲ. ಹಾಗಾಗಿ ಸಾರ್ವಜನಿಕರು ಅಂತಕ ಪಡಬಾರದು ಎಂದು ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ಹೇಳಿದರು.

ಮೇ.27ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ವಿಡಿಯೋ ಕಾನ್ಫರೇಷನ್ ಸಭಾಂಗಣದಲ್ಲಿ ಜಿಲ್ಲೆಯ ಅಧಿಕಾರಿಗಳು, ತೈಲ ಕಂಪನಿಯ ಸೇಲ್ಸ್ ಅಧಿಕಾರಿಗಳು ಹಾಗೂ ಪೆಟ್ರೋಲ್, ಡೀಸೆಲ್ ಬಂಕ್ ಪ್ರತಿನಿಧಿಗಳೊಂದಿಗೆ ವಿಡಿಯೋ ಸಂವಾದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ತೈಲ ಪೂರೈಕೆ ವಿಷಯದಲ್ಲಿ ಕಂಪನಿಗಳು ಜಾಗರೂಕತೆ ವಹಿಸಿ, ಸಮಸ್ಯೆ ಬಾರದ ರೀತಿಯಲ್ಲಿ ಇಂಧನ ಪೂರೈಸಬೇಕು. ಜಿಲ್ಲೆಗೆ ವಿವಿಧ ತೈಲ ಕಂಪನಿ ವಿತರಕರು ಸಮರ್ಪಕವಾಗಿ ಪೆಟ್ರೋಲ್ ಮತ್ತು ಡೀಸೆಲ್ ಪೂರೈಸಬೇಕು. ಎಲ್ಲ ಬಂಕ್ ಮಾಲೀಕರು ದೈನಂದಿನ ಮಾಹಿತಿ ಒದಗಿಸಬೇಕು. ಸಾರ್ವಜನಿಕರ ಬೇಡಿಕೆ ಅನುಸಾರ ಇಂಧನ ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮಾರಾಟಗಾರರಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಮುಂಗಾರು ಆರಂಭವಾಗುತ್ತಿರುವರಿಂದ ರೈತರ ಭೂಮಿ ಉಳುಮೆ ಕಾರ್ಯ ನಡೆಯುತ್ತಿದೆ. ಹಾಗಾಗಿ ರೈತರಿಗೆ ಯಾವುದೇ ಅನಾನುಕೂಲ ಹಾಗೂ ಸಮಸ್ಯೆಯಾಗದಂತೆ ಇಂಧನ ಪೂರೈಕೆ ಮಾಡಬೇಕು. ನಿಗದಿತ ದರದಲ್ಲಿ ತೈಲವನ್ನು ಮಾರಾಟ ಮಾಡಬೇಕು. ಒಂದು ವೇಳೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದಲ್ಲಿ ಅಂತಹವರ ವಿರುದ್ಧ ಕ್ರಮ ಜರುಗಿಸಲಾಗುತ್ತದೆ ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ಗ್ರಾಹಕರ ಹಿತರಕ್ಷಣೆ, ಇಂಧನ ಸುರಕ್ಷತೆ ಮತ್ತು ನಿಯಮಾವಳಿಗಳ ಪಾಲನೆ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಯಿತು.

ತೈಲ ಕಂಪನಿ ಪ್ರತಿನಿಧಿಗಳು ಮಾತನಾಡಿ, ಜಿಲ್ಲೆಯಲ್ಲಿ ಇಂಧನದ ಕೊರತೆ ಇರುವುದಿಲ್ಲ ಎಂದು ಸ್ಪಷ್ಟಪಡಿಸುವುದರ ಜೊತೆಗೆ ಇಂಡೆಂಟ್ ಅನುಗುಣವಾಗಿ ಇಂಧನ ಪೂರೈಸಲಾಗುತ್ತಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಆಹಾರ ಇಲಾಖೆಯ ಉಪ ನಿರ್ದೇಶಕ ನಜೀರ್ ಅಹಮದ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಬಿಪಿಸಿಎಲ್ 48, ಐಒಸಿಎಲ್ 84 ಎಚ್‌ಪಿಸಿಎಲ್ 30 ಇದ್ದು, ನಯಾರ 32 ಒಳಗೊಂಡಂತೆ ಒಟ್ಟು 194 ಪೆಟ್ರೋಲ್ ಬಂಕ್‌ಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಸಭೆಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಸು ಗಿರಿ, ರಾಯಚೂರು ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್, ಲಿಂಗಸುಗೂರು ಸಹಾಯಕ ಆಯುಕ್ತ ಬಸವಣ್ಣೆಪ್ಪ ಕಲಶೆಟ್ಟಿ, ರಾಯಚೂರು ತಹಶಿಲ್ದಾರ್ ಸುರೇಶ್ ವರ್ಮಾ, ಆಹಾರ ಇಲಾಖೆಯ ವ್ಯವಸ್ಥಾಪಕ ಹರೀಶ್ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕಿನ ತಹಶೀಲ್ದಾರರು, ವಿವಿಧ ತೈಲ ಕಂಪನಿಗಳ ಪ್ರತಿನಿಧಿಗಳು ಸಭೆಯಲ್ಲಿ ಇದ್ದರು.

# ಲಿಂಗಸುಗೂರ: ಮೀನುಗಾರಿಕೆ ಇಲಾಖೆಯಿಂದ ನೇರ ಗುತ್ತಿಗೆ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಮೇ.27: ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ಕೃಷ್ಣ ನದಿಭಾಗದ ಐದಬಾವಿಯಿಂದ ತಿಂತಣಿ ಬ್ರಿಜ್‌ಯವರೆಗೆ ಮೀನುಪಾಶುವಾರು ಹಕ್ಕನ್ನು 2026–27ನೇ ಮೀನುಗಾರಿಕೆ ಫಸಲಿ ವರ್ಷದಿಂದ 2030–31ನೇ ಮೀನುಗಾರಿಕೆ ಫಸಲಿ ವರ್ಷದವರೆಗೆ ಗರಿಷ್ಠ ಐದು ವರ್ಷಗಳ ಅವಧಿಗೆ ಸರ್ಕಾರದ ನಿಯಮಗಳ ಅರ್ಹ ಮೀನುಗಾರರ ಸಹಕಾರ ಸಂಘ ಮತ್ತು ಮೀನುಗಾರಿಕೆ ಇಲಾಖೆಯಡಿ ನೊಂದಣೆ–ಯಾದ ಅರ್ಹ ಮೀನು ಉತ್ಪಾದಕರ ಸಂಸ್ಥೆಗಳಿಗೆ ನೇರ ಗುತ್ತಿಗೆ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಜಲಸಂಪನ್ಮೂಲಗಳ ಮೀನುಪಾಶುವಾರು ಹಕ್ಕನ್ನು (ಅನುಬಂಧ–10) ಪಡೆಯಲಿಚ್ಚಿಸುವ ಅರ್ಹ ಮೀನುಗಾರರ ಸಹಕಾರ ಸಂಘ ಮಾತ್ರ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ದಿನಾಂಕ: 12–06–2026 ರೊಳಗಾಗಿ ಕಚೇರಿ ವೇಳೆಯಲ್ಲಿ ಈ ಕಚೇರಿಗೆ ಸಲ್ಲಿಸತಕ್ಕದ್ದು, ನಿಗದಿತ ಅವಧಿಯ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಗುತ್ತಿಗೆ ಪಡೆಯಲು ಸಲ್ಲಿಸಬೇಕಾದ ಅರ್ಜಿ (ಅನುಬಂಧ–9) ಷರತ್ತು ಮತ್ತು ನಿಬಂಧನೆಗಳು (ಅನುಬಂಧ–11) ಮತ್ತು ಗುತ್ತಿಗೆದಾರರು ಬರೆದುಕೊಡಬೇಕಾದ ಗುತ್ತಿಗೆ ಕರಾರಿನ ಮುಚ್ಚಳಿಕೆ ಪತ್ರದ (ಅನುಬಂಧ–10)ರ ಪತ್ರಗಳನ್ನು ಕಚೇ–ರಿಯ ವೇಳೆಯಲ್ಲಿ ಪಡೆಯಬಹುದು ಎಂದು ಲಿಂಗಸುಗೂರು ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದ ದಿಶಾಂತ ನಾಯ್ಕಗೆ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆಗೋಕರ್ಣ

ರಾಷ್ಟ್ರೀಯ ಈಡಿಗ ಮಹಾಮಂಡಳಿ ವತಿಯಿಂದ ಮಂಗಳವಾರ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಕುಮಟಾ ತಾಲೂಕಿನ ಬಾಡ ಗ್ರಾಮದ ದಿಶಾಂತ ದಯಾನಂದ ನಾಯ್ಕ ಈತನು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ರಲ್ಲಿ 624 ಅಂಕ ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿರುವುದಕ್ಕೆ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಕರಾಟೆ ಶಿಕ್ಷಕ ಅರವಿಂದ ನಾಯ್ಕ, ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಅಂಕೋಲಾ ಘಟಕದ ಅಧ್ಯಕ್ಷ ದಾಮೋದರ ಜಿ. ನಾಯ್ಕ, ಅರ್ಬನ್ ಬ್ಯಾಂಕ್ ನಿರ್ದೇಶಕ ತೇಜಸ್ವಿ ನಾಯ್ಕ, ಶಿಕ್ಷಕ ನಾಗರಾಜ ಹನೇಹಳ್ಳಿ, ನಿವೃತ್ತ ಉಪತಹಸೀಲ್ದಾರ ಎನ್.ಎಂ.ನಾಯ್ಕ, ಸಂಘಟಕರಾದ ಸಂತೋಷ ನಾಯ್ಕ, ನಾಗರಾಜ ಮಂಜಗುಣಿ ಇತರರಿದ್ದರು.

# ಭಟ್ಕಳ ದುರಂತದಲ್ಲಿ ಮಡಿದವರಿಗೆ 10 ಲಕ್ಷ ರೂ. ಪರಿಹಾರ ನೀಡಬೇಕು : ದೇವರಾಜ ನಾಯ್ಕ



• ಮಲ್ಲಮ್ಮ ನುಡಿ ವಾರ್ತೆಗೋಕರ್ಣ

ಜಿಲ್ಲೆಯ ಭಟ್ಕಳ ತಾಲೂಕಿನ ಅಳ್ವೆಕೋಡಿ ಹತ್ತಿರದ ನದಿಯಲ್ಲಿ ನಡೆದ ಜಲದುರಂತದಲ್ಲಿ 11 ಜನರು ಮೃತಪಟ್ಟಿದ್ದಾರೆ. ಇವರು ಕಪ್ಪೆಚಿಪ್ಪು ತೆಗೆಯಲು ಹೋದ ಸಂದರ್ಭದಲ್ಲಿ ಮಳೆಯ ಪರಿಣಾಮವಾಗಿ ಒಮ್ಮೆಲೆ ನೀರು ಏರಿಕೆಯಾದ್ದರಿಂದ ಈ ದುರಂತ ನಡೆದಿದೆ. ಹೀಗಾಗಿ ರಾಜ್ಯ ಸರಕಾರ ಇವರನ್ನು ಕೂಡ ಮೀನುಗಾರರಂತೆ 5 ಲಕ್ಷದ ಬದಲಾಗಿ 10 ಲಕ್ಷ ಪರಿಹಾರ ನೀಡಬೇಕು ಎಂದು ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಜಿಲ್ಲಾಧ್ಯಕ್ಷ ದೇವರಾಜ ಡಿ. ನಾಯ್ಕ ಶಿರಸಿ ಹೇಳಿದರು. ಇಲ್ಲಿಯ ಪುಣ್ಯಾಶ್ರಮದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಒಂದೇ ಕುಟುಂಬದ ಹಲವರು ಸೇರಿ 11 ಜನರು ಸಾವನ್ನಪ್ಪಿರುವುದು ನಿಜಕ್ಕೂ ದುರಂತವಾದದ್ದು. ಈಗ ಆ ಕುಟುಂಬದ ಮಕ್ಕಳು ಜೀವನ ನಡೆಸಬೇಕಾಗಿದೆ. ರಾಜ್ಯ ಸರಕಾರ ತಲಾ 5 ಲಕ್ಷ ರೂ. ಪರಿಹಾರ ಘೋಷಿಸಿದೆ. ಹಾಗೇ ಕೇಂದ್ರ ಸರಕಾರ ತಲಾ 2 ಲಕ್ಷ ರೂ ಘೋಷಿಸಿದೆ. ಆದರೆ ರಾಜ್ಯದಲ್ಲಿ ಮೀನುಗಾರಿಕೆಯ ಸಂದರ್ಭದಲ್ಲಿ ಮೀನುಗಾರರು ದುರಂತಕ್ಕೀಡಾದರೆ ರಾಜ್ಯ ಸರಕಾರದಿಂದ 10 ಲಕ್ಷ ರೂ. ನೀಡಲಾಗುತ್ತದೆ. ಈ ಘಟನೆಯನ್ನು ಜಾತಿಯಿಂದ ಅಳೆಯದೇ ಕಸುಬಿನಿಂದ ಅಳೆದು ರಾಜ್ಯ ಸರಕಾರ ತಲಾ 10 ಲಕ್ಷ ನೀಡಬೇಕು. ಇಲ್ಲದಿದ್ದರೆ ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಡಾ. ಶ್ರೀ ಪ್ರಣವಾನಂದ ಸ್ವಾಮೀಜಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದರು.

ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಭಟ್ಕಳ ತಾಲೂಕು ಅಧ್ಯಕ್ಷ ಶ್ರೀಧರ ನಾಯ್ಕ ಮಾತನಾಡಿ, ಯಾವುದೇ ಸಮುದಾಯದವರು ಯಾವ ಕಸುಬನ್ನು ಮಾಡುತ್ತಾರೋ ಅಂತವರು ದುರಂತಕ್ಕೆ ಒಳಗಾದಾಗ ಆ ಕಸುಬಿಗೆ ನೀಡುವ ಪರಿಹಾರ ನೀಡಬೇಕು. ರಾಜ್ಯ ಸರಕಾರ ಈ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ಹೋರಾಟ ಅನಿವಾರ್ಯವಾಗಲಿದೆ ಎಂದರು.

ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಅಂಕೋಲಾ ತಾಲೂಕು ಪ್ರಧಾನ ಕಾರ್ಯದರ್ಶಿ ನಾಗರಾಜ ಮಂಜಗುಣಿ ಮಾತನಾಡಿ, ಈ ದುರ್ಘಟನೆಯ ಸಂದರ್ಭದಲ್ಲಿ ದೂರದಿಂದಲೇ ಗಮನಿಸಿದ ಯುವಕ ಗಿರೀಶ ದಿನಕರ ಮೊಗೇರ ಇತನು ತನ್ನ ದೋಣಿಯನ್ನು ತಕ್ಷಣ ಅಲ್ಲಿಗೆ ತೆಗೆದುಕೊಂಡು ಹೋಗಿ ಇಬ್ಬರನ್ನು ರಕ್ಷಿಸಿದ್ದಾರೆ. ಇಲ್ಲದಿದ್ದಲ್ಲಿ ಅವರು ಕೂಡ ಸಾವಿನ ದವಡೆಗೆ ಒಳಗಾಗುತ್ತಿದ್ದರು. ಹೀಗಾಗಿ ಗಿರೀಶ ಮೊಗೇರ ಅವರಿಗೆ ರಾಜ್ಯ ಸರಕಾರ ಶೌರ್ಯ ಪ್ರಶಸ್ತಿಯನ್ನು ನೀಡಬೇಕು ಎಂದರು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂತೋಷ ನಾಯ್ಕ ಗಂಗಾವಳಿ, ಅಂಕೋಲಾ ಘಟಕದ ಅಧ್ಯಕ್ಷ ದಾಮೋದರ ಜಿ. ನಾಯ್ಕ, ವರ್ಧನ ನಾಯ್ಕ ಬೇಲೆಕಾನ, ಅವಿನಾಶ ನಾಯ್ಕ ಮಧುರವಳ್ಳಿ ಇತರರಿದ್ದರು.

# ಪಿಂಚಣಿ ವಿಳಂಬ ಖಂಡಿಸಿ

## ತಹಸೀಲ್ದಾರ್ ಮುಖಾಂತರ ಸಚಿವರಿಗೆ ಮನವಿ



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ವಿಕಲಚೇತನರ ಪಿಂಚಣಿ, ಸಂಧ್ಯಾ ಸುರಕ್ಷಾ ಹಾಗೂ ವಿಧವಾ ವೇತನ ಸರಿಯಾದ ಸಮಯಕ್ಕೆ ಜಮೆಯಾಗದೇ ಇರುವುದನ್ನು ಖಂಡಿಸಿ ಗುರುಮಠಕಲ್ ತಾಲೂಕ ಅರ್ಪಿಡಿ ಟಾಸ್ಕ್ ಫೋರ್ಸ್ ವತಿಯಿಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಗ್ರೇಡ್ 2 ತಹಸೀಲ್ದಾರ್ ನರಸಿಂಹಸ್ವಾಮಿ ಮುಖಾಂತರ ಮನವಿಯನ್ನು ಬುಧವಾರ ಸಲ್ಲಿಸಲಾಯಿತು. ಪಿಂಚಣಿಯನ್ನೇ ಜೀವನಾಧಾರವಾಗಿಸಿಕೊಂಡಿರುವ ಬಡ ಹಾಗೂ ನಿಸ್ಸಹಾಯ ಫಲಾನುಭವಿಗಳಿಗೆ ಹಲವು ತಿಂಗಳಿಂದ ಸರಿಯಾಗಿ ಪಿಂಚಣಿ ಜಮೆಯಾಗುತ್ತಿಲ್ಲ. ಅಲ್ಲದೆ 2025–26ನೇ ಸಾಲಿನಲ್ಲಿ ಕೆಲ ತಿಂಗಳುಗಳ ಪಿಂಚಣಿ ಕಡಿತಗೊಂಡಿದ್ದು, ಸುಮಾರು ಹಲವಾರು ಫಲಾನುಭವಿಗಳ ಖಾತೆಗಳಲ್ಲಿ ಹಣ ವ್ಯತ್ಯಾಸ ಕಂಡುಬಂದಿದೆ ಎಂದು ಮನವಿಯಲ್ಲಿ ಆರೋಪಿಸಲಾಗಿದೆ. ಪ್ರತಿ ತಿಂಗಳು ನಿಗದಿತ ದಿನಾಂಕಕ್ಕೆ ಪಿಂಚಣಿ ಜಮೆಯಾಗುವಂತೆ ಕ್ರಮ ಕೈಗೊಳ್ಳಬೇಕು ಹಾಗೂ ಬಾಕಿ ಉಳಿದಿರುವ ಮೊತ್ತವನ್ನು ತಕ್ಷಣ ಫಲಾನುಭವಿಗಳ ಖಾತೆ–ಗೆ ಜಮೆ ಮಾಡಬೇಕೆಂದು ಟಾಸ್ಕ್ ಫೋರ್ಸ್ ಅಧ್ಯಕ್ಷ ಸಿದ್ದನಗೌಡ ಪಾಟೀಲ್ ಆಗ್ರಹಿಸಿದರು. ಈ ಸಂದರ್ಭದಲ್ಲಿ ಅರ್ಪಿಡಿ ಟಾಸ್ಕ್ ಫೋರ್ಸ್ ಪ್ರಧಾನ ಕಾರ್ಯದರ್ಶಿ ಹಣಮಂತು, ಮಲ್ಲಪ್ಪ ಯದ್ಲಾಪುರ, ಸಾಬಣ್ಣ, ದೇವಪ್ಪ ನೀರೆಟಿ, ಸಾಬಣ್ಣ ಕೊತ್ತ ಕುರುವ, ಹಣಮಂತು ಕಂದುರು, ಸೀನಯ್ಯ ಸಿರಿಗೆಂ ಸೇರಿದಂತೆ ಹಲವು ವಿಕಲಚೇತನರು ಇದ್ದರು.

# ಸಂಗೀತ ಎಂಬುದು ಯೋಗವಿದ್ದಂತೆ



• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ

ಸಂಗೀತ ಎಂಬುದು ಯೋಗವಿದ್ದಂತೆ ಅದರಿಂದ ಮಾನಸಿಕ ಒತ್ತಡ ಹಾಗೂ ಹಲವು ರೋಗ ನಿಯಂತ್ರಿಸುವ ಶಕ್ತಿ ಇದೆ. ಸಂಗೀತ ಆಲಿಸುವುದರಿಂದ ಮನಸ್ಸಿಗೆ ನೆಮ್ಮದಿ ಹಾಗೂ ಆನಂದ ಸಿಗುತ್ತವೆ ಎಂದು ಕಲ್ಲೂರು ಹಿರೇಮಠ ಸಂಸ್ಥಾನದ ಪೂಜ್ಯಶ್ರೀ ಶಬ್ರಮೃತ್ಯುಂಜಯ ಶಿವಯೋಗಿ ಶಿವಾಚಾರ್ಯರು ತಾಲ್ಲೂಕಿನ ಹಳ್ಳಿಖೇಡ (ಕೆ) ಗ್ರಾಮದ ಶ್ರೀ ಕಿನ್ನರಿನಾಥ ರುದ್ರ ಸಂಗೀತ ಕಲಾ ಸಂಸ್ಥೆ(ರಿ) ಮತ್ತು ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಸೋಮವಾರ ನಡೆದ ನಾದ ವೈಭವ ಸಂಗಮ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ನುಡಿದರು. ಜೀವನವು ಸ್ಪರ್ಧಾತ್ಮಕವಾಗಿದ್ದು ಸೋಲು–ಗೆಲುವು ಸಹಜ. ಆದರೆ ಯಾವುದೇ ಕಾರಣಕ್ಕೂ ಜೀವನದಲ್ಲಿ ಗುರಿಯನ್ನು ಬಿಡಬಾರದು. ಮಾನವನಾಗಿ ಹುಟ್ಟಿದ ಮೇಲೆ ಮಾನವೀಯತೆಯಿಂದ ಬಾಳಬೇಕು. ಪ್ರತಿಯೊಬ್ಬರಿಗೂ ಕ್ರೀಡೆ, ಸಂಗೀತ ಮತ್ತು ಮನರಂಜನೆಯಲ್ಲಿ ಅಭಿರುಚಿ ಇರಬೇಕು.

ಆಧುನಿಕ ಕಾಲದಲ್ಲಿ ಜನರ ನಡುವೆ ಪ್ರೀತಿ, ವಿಶ್ವಾಸ ಮತ್ತು ನೆಮ್ಮದಿ ಕಡಿಮೆಯಾಗುತ್ತಿದ್ದು, ಇದನ್ನು ಸರಿದೂಗಿಸಲು ಇಂತಹ ಸಾಂಸ್ಕೃತಿಕ ಹವ್ಯಾಸಗಳು ಪೂರಕವಾಗಿವೆ ಎಂದು ತಿಳಿಸಿದರು. ಸಂಗೀತ ಕಲಿಕೆಗೆ ಕೇವಲ ಪಾಲಕರ ಉತ್ಸಾಹ ಇದ್ದರೆ ಸಾಲದು ಅದಕ್ಕೆ ಮಕ್ಕಳ ಉತ್ಸಾಹವು ಬಹಳ ಮುಖ್ಯವಾಗಿದೆ. ದೇಶಿ ಸಂಸ್ಕೃತಿ ಉಳಿಸಿ ಬೆಳೆಸಬೇಕಾದರೆ ಸಂಗೀತ ಕಲಿಯಬೇಕು. ಸಂಗೀತವು ಸಮತೋಲನ ಕಾಪಾಡಲು ಅತ್ಯಂತ ಉಪಯೋಗಕಾರಿ, ಸಂಗೀತ ಕ್ಷೆ?ತ್ರದಲ್ಲಿ ತೊಡಗಿದವರನ್ನು ಗುರುತಿಸಿ ಪ್ರೋತ್ಸಾಹಿಸಬೇಕು ಎಂದು ಶಿವಲಿಂಗ ಮಹಾಸ್ವಾಮಿಗಳು ತಿಳಿಸಿದರು ಮಾಜಿ ಗ್ರಾಮಪಂಚಾಯತ ಅಧ್ಯಕ್ಷ ಸುಭಾಷ ಚಿಲಶೆಟ್ಟಿ ಮಾತನಾಡಿ, ಸಂತೋಷ, ದುಃಖ, ಕೋಪ ಎಲ್ಲವನ್ನೂ ಸಂಗೀತದ ಮೂಲಕ ವ್ಯಕ್ತಪಡಿಸಬಹುದಾಗಿದೆ. ಸಂಗೀತ ಕಲಿಯೋಕೆ ವಯಸ್ಸಿನ ಮಿತಿ ಇಲ್ಲ. ಎಲ್ಲ ವಯಸ್ಸಿನವರೂ ಸಂಗೀತ ಕಲಿಯಬಹುದಾಗಿದೆ ಎಂದು ಹೇಳಿದರು. ದಿವ್ಯ ಸಾನಿಧ್ಯ ಡೊಂಗರಗಾಂವ ಕ್ರಾಸ್ ಶ್ರೀ ರೇಣುಕಾಚಾರ್ಯ ಆಶ್ರಮದ ಷ.ಬ್ರ. ಉದಯರಾಜಯೋಗೆಂದ್ರಶಿವಾಚಾರ್ಯರು, ಖೇಳಗಿ ಪರಮ ಪೂಜ್ಯರು ಶ್ರೀ ಮ ನಿ ಪ್ರ ಸ್ವ ಶಿವಲಿಂಗ ಶಿವಯೋಗಿಗಳು ಸಾನಿಧ್ಯ ವಹಿಸಿದ್ದರು. ಗಂಗಾಧರಯ್ಯ ಚಿಕ್ಕಮಠ ಅಧ್ಯಕ್ಷತೆ, ಮುಖ್ಯ ಅತಿಥಿಗಳಾಗಿ ಸುಭಾಶ ವಾರದ, ಅಣ್ಣೆಪ್ಪ ರಟಕಲ್, ಭಕ್ತರಾಜ ಚಿತ್ತಾಪೂರ, ಹಣಮಂತ ಬುಕ್ಕಾ, ಗುಂಡಪ್ಪ ಕೋರಿ, ಅರವಿಂದ ಸಿದ್ದೇಶ್ವರ, ಜಗನ್ನಾಥ ಚಿಕ್ಕಪಾಟೀಲ ಭೀಮಶಾ ಕೋರಿ ಭಾಗವಹಿಸಿದ್ದರು. ಸೂರ್ಯಕಾಂತ ಕಲಾವಿದರಾದ ಮಹಾಂತಯ್ಯ ಮಂಠಾಳ, ಗುರುಶಾಂತಯ್ಯ ಸ್ಥಾವರಮಠ, ಮಲ್ಲಿಕಾರ್ಜುನ ಶಾಸ್ತ್ರಿ, ಶಾಸ್ತ್ರಿ, ಡೊಂಗರಗಾಂವ, ಪ್ರಶಾಂತ ಉದಯಕುಮಾರ ಗೋಲ್ಡಸ್ಮೀತ್, ಮಠಪತಿ, ತೋಟಯ್ಯ ಮಲ್ಲಯ್ಯ ಅಬ್ಬೇತುಮಕೂರ, ಸ್ವಾಮಿ ಪವಿತ್ರ ವಿಶ್ವನಾಥ, ಓಂಕಾರ ರಾಜೋಳ, ಸೂರ್ಯಕಾಂತ ಹಡಪದ, ಸಾಧನಾ ಬುಕ್ಕಾ, ವಿಕಾಸ ಮಠಪತಿ, ಸವಿತಾ ವೀರಭದ್ರಯ್ಯ, ಜನಾರ್ಧನ ವಾಗ್ಮೋರೆ, ಲೋಕನಾಥ ಕುಂಬಾರ, ಮೃತ್ಯುಂಜಯ ಚಿಕ್ಕಮಠ, ಅಭಿಷೇಕ ಬುಕ್ಕಾ, ಛತ್ರಜ್ಞ ಹಡಪದ ಸಂಗೀತ ಕಾರ್ಯಕ್ರಮ ನೀಡಿದ್ದರು. ಮಲ್ಲಯ್ಯ ಚಿಕ್ಕಮಠ ಸ್ವಾಗತಿಸಿದರೆ, ಲಿಂಗಾನಂದ ಚಿಕ್ಕಮಠ ವಂದಿಸಿದರು. ಮೈಲಾರಿ ಬುಕ್ಕಾ ನಿರೂಪಿಸಿದರು.

# ಗುರುಮಠಕಲ್ ಕ್ಷೇತ್ರದಲ್ಲಿ 9.90 ಕೋಟಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ತಾಲೂಕಿನ ಚಿನ್ನಕಾರ ಗೇಟ್ ಬಳಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶರಣಗೌಡ ಕಂದಕೂರ ಬುಧವಾರ ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಿದರು. ಲೋಕೋಪಯೋಗಿ ಇಲಾಖೆಯ 2025–26ನೇ ಸಾಲಿನ ಕೆ. ಕೆ. ಆರ್. ಡಿ. ಬಿ ಮೈಕ್ರೋ ಸಾಮಾನ್ಯ ಯೋಜನೆ ಅಡಿಯಲ್ಲಿ ಗುರುಮಠಕಲ್ ಮತಕ್ಷೇತ್ರದ ಸಿಂದಗಿ–ಕೊಡಂಗಲ್ ರಾಜ್ಯ ಹೆದ್ದಾರಿ–16 ಮುಖ್ಯ ರಸ್ತೆ ಆಯ್ದು ಭಾಗಗಳಲ್ಲಿ ಮರು ಡಾಂಬರಕರದಣ ಹಾಗೂ ಗುರುಮಠಕಲ್ ಪಟ್ಟಣದ ರಸ್ತೆ ಅಗಲೀಕರಣ ಮತ್ತು ಬ್ರಿಡ್ಜ್ ನಿರ್ಮಾಣ ಹಾಗೂ ಗುರುಮಠಕಲ್ ಪಟ್ಟಣದಲ್ಲಿ ಸೌಂದರ್ಯಕರಣ ಮತ್ತು ಆಧುನಿಕ ಬಸ್ ಸ್ಟಾಂಡ್ ನಿರ್ಮಾಣದ ಸುಮಾರು ಅಂದಾಜು ಮೊತ್ತ ರೂ. 9.90 ಕೋಟಿಗಳ ಕಾಮಗಾರಿಗಳಿಗೆ ಚಾಲನೆ ನೀಡಿದರು. ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಶಾಸಕ ಶರಣಗೌಡ ಕಂದಕೂರ, ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದ್ದು, ಸಾವ ರ್ಜನಿಕರಿಗೆ ಉತ್ತಮ ಮೂಲಸೌಕರ್ಯ ಹಾಗೂ ಸುಗಮ ಸಂಚಾರ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಹೇಳಿದರು. ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಹಾಗೂ ಗುಣಮಟ್ಟದೊಂದಿಗೆ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಸೂಚಿಸಿದ ಅವರು, ಅಭಿವೃದ್ಧಿ ಕಾರ್ಯಗಳಿಂದ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶದ ಜನರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ತಹಸೀಲ್ದಾರ್ ಚನ್ನ ಮಲ್ಲಪ್ಪ ಘಂಟಿ, ತಾಲೂಕ ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ಅಂಬರೀಷ್ ಪಾಟೀಲ್, ಮುಖ್ಯಾಧಿಕಾರಿ ಶರಣಪ್ಪ ಎಮ್, ಪಿಐ ದೌಲತ್ ಎನ್ ಕುರಿ, ಶ್ರೀಕಾಂತ್ ಬದ್ದೇಪಲ್ಲಿ, ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಪರಶುರಾಮ, ಜೆಡಿಎಸ್ ಜಿಲ್ಲಾಧ್ಯಕ್ಷ ಸುಭಾಷ್ ಚಂದ್ರ ಕಟಕಟಿ, ಶರಣು ಆವಂಟಿ ಸೇರಿದಂತೆ ಹಲವಾರು ಉಪಸ್ಥಿತರಿದ್ದರು.

# ಗ್ಯಾರಂಟಿ ಯೋಜನೆಗಳು ಸಮಾಜದ ಕಟ್ಟ ಕಡೆಗೆ ವ್ಯಕ್ತಿಗೂ ತಲುಪಬೇಕು

• ಮಲ್ಲಮ್ಮ ನುಡಿ ವಾರ್ತೆಬಸವನಬಾಗೇವಾಡಿ

ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ವತಿಯಿಂದ ತಾಲೂಕು ಪಂಚಾಯತಿ ಕಾರ್ಯಾಲಯದಲ್ಲಿ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಪ್ರಗತಿಪರಿಶೀಲನಾ ಸಭೆ ಜರುಗಿತು. ಸಭೆಯಲ್ಲಿ ಗ್ಯಾರಂಟಿ ಯೋಜನೆಗಳು ಸಮಾಜದ ಕಟ್ಟ ಕಡೆಗೆ ವ್ಯಕ್ತಿಗೂ ಕೂಡ ತಲುಪಬೇಕೆಂದು ಅಧಿಕಾರಿಗಳಿಗೆ ಸೂಚನೆಯನ್ನು ನೀಡಲಾಯಿತು. ಯೋಜನೆಯಿಂದ ಹೊರಗುಳಿದ ಅರ್ಹ ಫಲಾನುಭವಿಗಳನ್ನು ಗುರುತಿಸಿ ಯೋಜನೆಯನ್ನು ತಲುಪಿಸುವಂತಹ ಕಾರ್ಯ ಮಾಡಲು ಸೂಚಿಸಲಾಯಿತು. ಸಭೆ ಅಧ್ಯಕ್ಷತೆಯನ್ನು ತಾಲೂಕು ಗ್ಯಾರಂಟಿ ಯೋಜನೆಯ ಅಧ್ಯಕ್ಷ ಮೈಬೂಬ.ಲಾ.ನಾಯ್ಕೋಡಿ ವಹಿಸಿದ್ದರು. ಯೋಜನೆಯ ಸಹ ಕಾರ್ಯದರ್ಶಿ ವೆಂಕಟೇಶ ವಂದಾಲ, ಸದಸ್ಯರಾದ ಬಂಡೆಪ್ಪ ನಾಟಿಕಾರ, ಮಹಾಂತೇಶ ತಳೇವಾಡ, ಮಲ್ಲನಗೌಡ ಕೋಳೂರ, ಶಂಕರ ಚಕ್ರಮನಿ, ಕವಿತಾ ಮಣೂರು ಮಠ, ಮಹಾದೇವಿ ಮನಗೂಳಿ, ಮಲ್ಲವ್ವ ಮಾದರ, ಅಭಿಷೇಕ ಪಾಟೀಲ, ರೇವಣಸಿದ್ದಪ್ಪ ಡಿಗ್ಗಾವಿ, ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



# ಪೇಪರಲೆಸ್ ವ್ಯವಸ್ಥೆ ಖಂಡಿಸಿ ದಸ್ತು ಬರಹಗಾರರ ಮುಷ್ಕರ : ಸೇವೆಯಿಂದ ದೂರ ಉಳಿದು ಸರಕಾರಕ್ಕೆ ಮನವಿ

• ಮಲ್ಲಮ್ಮ ನುಡಿ ವಾರ್ತೆಬಸವನಬಾಗೇವಾಡಿ

ನೊಂದಣಿ ಇಲಾಖೆಯಲ್ಲಿ ಪೇಪರಲೆಸ್ ವ್ಯವಸ್ಥೆ ಜಾರಿ ಹಾಗೂ ಆನ್‌ಲೈನ್ ವ್ಯವಸ್ಥೆಯಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಹಾಗೂ ದಸ್ತಾವೇಜು ಬರಹಗಾರರ ಸಹಿ ಕಡ್ಡಾಯಗೊಳಿಸುವಿಕೆ ಕುರಿತು ರಾಜ್ಯ ಸರಕಾರಕ್ಕೆ ಬಸವನಬಾಗೇವಾಡಿ ಅಖಂಡ ತಾಲೂಕಾಗಳ ಅಧಿಕೃತ ದಸ್ತು ಬರಹಗಾರರ ಕ್ಷೇಮಾಭಿವೃದ್ಧಿ ಟ್ರಸ್ಟ (ರಿ) ಪದಾಧಿಕಾರಿಗಳು ಸೇರಿಕೊಂಡು ಬುಧುವಾರ ಸಿಎಂ ಅವರಿಗೆ ಸ್ಥಳೀಯ ಗ್ರೇಡ್ 2 ತಹಶೀಲ್ದಾರ್ ಎಚ್.ಎಸ್ ಅರಕೇರಿ ಅವರ ಮೂಲಕ ಮನವಿ ಅರ್ಪಿಸಲಾಯಿತು.

ಈ ಸಂದರ್ಭದಲ್ಲಿ ಟ್ರಸ್ಟ ಅಧ್ಯಕ್ಷ ಸುರೇಶ ಬ ಹಾರಿವಾಳ ಮಾತನಾಡಿ, ನಮ್ಮ ಹೋರಾಟ ಸರಕಾರದ ವಿರುದ್ಧ ಅಲ್ಲ. ಸಾಮಾನ್ಯ ರೈತರಿಗೆ ಆಂಗ್ಲ ಭಾಷೆಯ ಅರಿವು ಕುರಿತು ಯೋಚಿಸಿ ಕಂದಾಯ ಸಚಿವರು ಪೇಪರಲೆಸ್ ವ್ಯವಸ್ಥೆ ಹಾಗೂ ದಾಖಲೆಯಲ್ಲಿ ಆಂಗ್ಲ ಭಾಷೆ ಮುದ್ರಿತವಾಗುವದನ್ನು ತೆಗೆದು ಕನ್ನಡ ಭಾಷೆಯೇ ಮುದ್ರಿತವಾಗಬೇಕು ಅದನ್ನು ಬಿಟ್ಟು ರೈತರಿಗೆ ತೊಂದರೆಯಾಗುವ ಈ ವ್ಯವಸ್ಥೆಯಿಂದ ರೈತ ಸಮುದಾಯಕ್ಕೆ ತುಂಬಾ ಸಮಸ್ಯೆಯಾಗಿದೆ. ಬರಹಗಾರರಿಗೆ ಪ್ರತ್ಯೇಕ ಲಾಗಿನ ಕೊಡಬೇಕು. ಸಚಿವರಾದ ಕೃಷ್ಣ ಬೈರೆಗೌಡರು ದಸ್ತು ಬರಹಗಾರರನ್ನು ತುಳಿಯುವ ಹುನ್ನಾರದಲ್ಲಿದ್ದಾರೆ.

ಈಗಾಗಲೇ ಬೆಳಗಾವಿ ಅಧಿವೇಶನದಲ್ಲಿ ಈ ಕುರಿತು ಮನವಿ ಅರ್ಪಿಸಿದರೂ ಸ್ಪಂದಿಸಿಲ್ಲ. ಇದರಿಂದ ರಾಜ್ಯದಲ್ಲಿರುವ 10ರಿಂದ 12 ಸಾವಿರ ಬರಹಗಾರರ ಬದುಕು ಬೀದಿಪಾಲಾಗುತ್ತದೆ .ಈ ಕೂಡಲೇ ಈ ವ್ಯವಸ್ಥೆಯನ್ನು ಹಿಂಪಡೆಯಬೇಕು ಎಂದು ಸರಕಾರವನ್ನು ಒತ್ತಾಯಿಸಿದರು.

ಕಾರ್ಯದರ್ಶಿ ಪಾರ್ಶ್ವನಾಥ ಬ ಹೊಸಮನಿ ಮಾತನಾಡಿ, ಕಂದಾಯ ಸಚಿವರದು ರೈತರ ಮೇಲಿನ ಆಂಗ್ಲ ಪ್ರದರ್ಶನ ಸರಿಯಲ್ಲ. ರೈತ ಹಾಗೂ ಬರಹಗಾರರ ಸಮುದಾಯವನ್ನು ಬೀದಿಗೆ ತರುತ್ತಿರುವ ಈ ವ್ಯವಸ್ಥೆಯನ್ನು ಸರಿಪಡಿಸಬೇಕು ಎಂದರು.

ರೈತ ರಾಜ್ಯ ಮುಖಂಡ ಅರವಿಂದ ಕುಲಕರ್ಣಿ, ಮುಖಂಡರಾದ ಸಂಗಮೇಶ ಓಲೇಕಾರ, ಅಶೋಕ ಹಾರಿವಾಳ ಹಾಗೂ ಶಾಂತು ಚೌರಿ ಪೇಪರಲೆಸ್ ವ್ಯವಸ್ಥೆ ಜಾರಿ ಖಂಡಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಉಪನೊಂದಣಾಧಿಕಾರಿ ಎಸ್.ಎ ಬಾಗಾಯತ್, ಸಹ ಕಾರ್ಯದರ್ಶಿ ಉಮೇಶ. ಸ ಹಾರಿವಾಳ, ಸಲಹೆಗಾರರಾದ ಶಿವಾನಂದ ಸಜ್ಜನ, ಚಿದಾನಂದ ಮು ಅಂಗಡಿ, ಸಂಗನಗೌಡ ಬ ಪಾಟೀಲ, ರಾಜಕುಮಾರ ಅಳ್ಳೊಳ್ಳಿ, ಶ್ರೀಶೈಲ ಮಾ ಬುಯ್ಯಾರ ಸೇರಿದಂತೆ ಬರಹಗಾರರ ಸಹಾಯಕರು ಗಣಕಯಂತ್ರ ಸಹಾಯಕರು ಸೇರಿದಂತೆ ಅನೇಕರು ಹಾಜರಿದ್ದರು.




ದಸ್ತಾವೇಜು ಬರಹಗಾರರಿಗೆ ಸರ್ಕಾರ ಲೈಸನ್ಸ್ ನೀಡಿದ್ದು ಪತ್ರ ನೊಂದಣಿ ಮಾಡುವಾಗ ಪ್ರತಿ ದಸ್ತಾವೇಜಿಗೆ ಪತ್ರ ಬರಹಗಾರರ ಅಥವಾ ವಕೀಲರ ಸಹಿ ಮತ್ತು ಸೀಲು ಕಡ್ಡಾಯಗೊಳಿಸುವುದು ಇಲ್ಲದೇ ಹೋದಲ್ಲಿ ರೈತರಿಗೆ ಹಾಗೂ ಸಾರ್ವಜನಕರಿಗೆ ಮೋಸತನ ಆಗುತ್ತದೆ.

**ಸುರೇಶ ಬ ಹಾರಿವಾಳ,** ಅಧಿಕೃತ ದಸ್ತು ಬರಹಗಾರರ ಕ್ಷೇಮಾಭಿವೃದ್ಧಿ ಟ್ರಸ್ಟ(ರಿ).ಬಸವನಬಾಗೇವಾಡಿ.

ದಸ್ತು ಬರಹಗಾರರು ಸೇವೆಯಿಂದ ದೂರ ಉಳಿದು, ಸರ್ಕಾರ ಜಾರಿ ತಂದ ವ್ಯವಸ್ಥೆ ಜಾರಿ ಖಂಡಿಸಿ, ಸರಕಾರಕ್ಕೆ ಮನವಿ ಅರ್ಪಿಸಿದರು.

# ಬಳ್ಳಾರಿ ನಗರದ ಸಮಗ್ರ ಅಭಿವೃದ್ಧಿಗೆ ವೇಗ ನೀಡಲು ಶಾಸಕ ಭರತ್ ರೆಡ್ಡಿ ಸೂಚನೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಇನ್ನಷ್ಟು ವೇಗ ನೀಡಬೇಕು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು ಎಂದು ಬಳ್ಳಾರಿ ನಗರ ಶಾಸಕ ಭರತ್ ರೆಡ್ಡಿ ಅಧಿಕಾರಿಗಳಿಗೆ ಸೂಚಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ ಮಂಗಳವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಗರದಲ್ಲಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಕುರಿತು ಮಾಹಿತಿ ಪಡೆದು ಅಧಿಕಾರಿಗಳೊಂದಿಗೆ ಚರ್ಚಿಸಿದರು. ರಸ್ತೆ ಅಭಿವೃದ್ಧಿ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸೌಲಭ್ಯ, ಸಾರ್ವಜನಿಕ ಉದ್ಯಾನಗಳು ಹಾಗೂ ನಾಗರಿಕರಿಗೆ ಅಗತ್ಯ ಮೂಲಭೂತ ಸೌಕರ್ಯಗಳ ಕುರಿತು ವಿಶೇಷವಾಗಿ ಪರಿಶೀಲನೆ ನಡೆಸಿದರು.

ನಗರದ ವೇಗವಾಗಿ ವಿಸ್ತರಿಸುತ್ತಿರುವ ಪ್ರದೇಶಗಳಿಗೆ ಅನುಗುಣವಾಗಿ ಯೋಜನೆಗಳನ್ನು ರೂಪಿಸಿ, ಜನರಿಗೆ ಯಾವುದೇ ತೊಂದರೆ ಆಗದಂತೆ ಕಾಮಗಾರಿಗಳನ್ನು ಸಮಯಕ್ಕೆ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು. ಸಾರ್ವಜನಿಕರಿಂದ ಬರುತ್ತಿರುವ ದೂರುಗಳು ಹಾಗೂ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ನೀಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರದ ಸೌಂದರ್ಯೀಕರಣ ಹಾಗೂ ಸುಸಜ್ಜಿತ ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡಬೇಕೆಂದು ತಿಳಿಸಿದ ಶಾಸಕ ಭರತ್ ರೆಡ್ಡಿ, ಅಭಿವೃದ್ಧಿ ಕಾಮಗಾರಿಗಳಲ್ಲಿ ಗುಣಮಟ್ಟ ಕಾಪಾಡುವುದು ಅತ್ಯಂತ ಮುಖ್ಯ ಎಂದು ಹೇಳಿದರು. ಸರ್ಕಾರದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ನಗರವನ್ನು ಮಾದರಿ ನಗರವನ್ನಾಗಿ ರೂಪಿಸುವ ನಿಟ್ಟಿನಲ್ಲಿ ಎಲ್ಲರೂ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಕರೆ ನೀಡಿದರು.

ಸಭೆಯಲ್ಲಿ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್. ಆಂಜನೇಯಲು, ನಾಮನಿರ್ದೇಶಿತ ಸದಸ್ಯರಾದ ಥಿಯೇಟರ್ ಶಿವು, ರಾಕಿ, ಭರತ್, ಆಯುಕ್ತ ಖಲೀಲಸಾಬ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ರಜಾ ಅವಧಿಯಲ್ಲಿ ಸಮೀಕ್ಷೆ ಕಾರ್ಯ ನಿರ್ವಹಿಸಿದ ಶಿಕ್ಷಕರಿಗೆ ಗಳಿಕೆ ರಜೆ ಸೌಲಭ್ಯಕ್ಕಾಗಿ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ರಾಜ್ಯದಲ್ಲಿ ನಡೆದ ಎಸ್ಸಿ/ಎಸ್ಟಿ ಒಳ ಮೀಸಲಾತಿಗಣತಿ ಹಾಗೂ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯವನ್ನು ರಜಾ ಅವಧಿಯಲ್ಲಿ ನಿರ್ವಹಿಸಿದ ಶಿಕ್ಷಕರಿಗೆ ಕೆ.ಸಿ.ಎಸ್‌ಆರ್ ನಿಯಮಾನುಸಾರ ಗಳಿಕೆ ರಜೆ (ಇಐ) ಸೌಲಭ್ಯ ನೀಡಬೇಕು ಎಂದು ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಘಟಕ ಸರ್ಕಾರವನ್ನು ಆಗ್ರಹಿಸಿದೆ. ಈ ಕುರಿತು ತಾಲೂಕು ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಿದ ಶಿಕ್ಷಕರು, ತಮ್ಮ ವೈಯಕ್ತಿಕ ರಜೆ ಹಾಗೂ ಕುಟುಂಬ ಸಮಯವನ್ನು ತ್ಯಜಿಸಿ ಸರ್ಕಾರದ ಮಹತ್ವದ ಸಮೀಕ್ಷೆ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಆದ್ದರಿಂದ ಕೆ.ಸಿ.ಎಸ್.ಆರ್ ನಿಯಮ 113(3)(ಎ) ಮತ್ತು (ಬಿ) ಅನ್ವಯ ಕಾರ್ಯನಿರ್ವಹಿಸಿದ ಎಲ್ಲಾ ಶಿಕ್ಷಕರಿಗೂ ಗಳಿಕೆ ರಜೆ ಮಂಜೂರು ಮಾಡುವುದು ನ್ಯಾಯಸಮ್ಮತವಾಗಿದೆಎಂದು ಒತ್ತಾಯಿಸಿದರು. ಮನವಿ ಪತ್ರ ಸಲ್ಲಿಸಿ ಮಾತನಾಡಿದ ಸಂಘದ ಅಧ್ಯಕ್ಷ ದತ್ತು ಕಾಟ್ಕರ, ಶಾಲಾ ರಜಾಅವಧಿಯಲ್ಲಿಯೇ ಶಿಕ್ಷಕರನ್ನು ಸಮೀಕ್ಷೆ ಕಾರ್ಯಕ್ಕೆ ನಿಯೋಜಿಸಿರುವುದರಿಂದ ಅವರಿಗೆ ಹೆಚ್ಚುವರಿ ಕೆಲಸದ ಒತ್ತಡ ಉಂಟಾಗಿದೆ. ಸರ್ಕಾರ ಶಿಕ್ಷಕರ ಸೇವೆಯನ್ನು ಪರಿಗಣಿಸಿ ಸೂಕ್ತ ಗೌರವ ಹಾಗೂ ಕಾನೂನುಬದ್ಧ ಸೌಲಭ್ಯಗಳನ್ನು ನೀಡಬೇಕು ಎಂದು ಒತ್ತಾಯಿಸಿದರು. ಸಮೀಕ್ಷೆ ಕಾರ್ಯದಲ್ಲಿ ಭಾಗವಹಿಸಿದ ಶಿಕ್ಷಕರ ಸೇವೆಯನ್ನು ಗೌರವಿಸುವ ನಿಟ್ಟಿನಲ್ಲಿ ತಕ್ಷಣವೇ ಗಳಿಕೆ ರಜೆ(ಇಐ) ಸೌಲಭ್ಯ ಮಂಜೂರು ಮಾಡುವಂತೆ ಸರ್ಕಾರ ಹಾಗೂ ಜಿಲ್ಲಾಡಳಿತವನ್ನು ಆಗ್ರಹಿಸಿದರು. ಈ ಸಂಧರ್ಭದಲ್ಲಿ ಪ್ರಮುಖರಾದ ಚಂದ್ರಕಾಂತ ಖಂಡಾಳೆ, ಆನಂದ ಹಳೆಬರೇ, ದತ್ತಾತ್ರಿಬಿರಾದಾರ್, ಚಂದ್ರಕಾಂತ ತಳವಾಡೆ, ಜಾಲಿಂದರಮೇತ್ರೆ, ಸತೀಶಸಿದ್ದೇಶ್ವರೆ, ಮಾರುತಿ ಸಗರ ಸೇರಿದಂತೆ ಹಲವರು ಇದ್ದರು.



# ಕೃಷಿ ಇಲಾಖೆ ವತಿಯಿಂದ ರೈತರಿಗೆ ಬಿತ್ತನೆ ಬೀಜ, ಸವಲತ್ತುಗಳ ವಿತರಣೆ: ಶಾಸಕ ಹೆಚ್.ಆರ್.ಗವಿಯಪ್ಪ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)

ಮೇ.27:ತಾಲೂಕಿನ ಕೃಷಿ ಇಲಾಖೆ ವತಿಯಿಂದ ಬುಧವಾರ ಎಪಿಎಂಸಿ ಮಾರುಕಟ್ಟೆ ಆವರಣದಲ್ಲಿನ ರೈತ ಸಂಪರ್ಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ರೈತರ ವಿವಿಧ ಕೃಷಿ ಪರಿಕರಗಳು ಹಾಗೂ ಬಿತ್ತನೆ ಬೀಜಗಳ ವಿತರಣಾ ಕಾರ್ಯಕ್ರಮಕ್ಕೆ ಅರ್ಹ ಫಲಾನುಭವಿ ರೈತರಿಗೆ ಸಾಂಕೇತಿಕವಾಗಿ ಬಿತ್ತನೆ ಬೀಜ ಹಾಗೂ ಪರಿಕರಗಳನ್ನು ವಿತರಿಸುವ ಮೂಲಕ ಶಾಸಕ ಹೆಚ್.ಆರ್.ಗವಿಯಪ್ಪ ಕಾರ್ಯಕ್ರಮಕ್ಕೆ ಅಧಿಕೃತವಾಗಿ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ರೈತ ಬಾಂಧವರನ್ನು ಉದ್ದೇಶಿಸಿ ಮಾತನಾಡಿದ ಕೃಷಿ ಇಲಾಖೆಯ ಅಧಿಕಾರಿಗಳು, ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿಗೆ ರೈತರಿಗೆ ಅಗತ್ಯವಿರುವ ಗುಣಮಟ್ಟದ ಮೆಕ್ಕೆಜೋಳ, ಭತ್ತ ಮತ್ತು ಸಜ್ಜೆ ಬಿತ್ತನೆ ಬೀಜ ಹಾಗೂ ಕೃಷಿ ಪರಿಕರ ಪಿವಿಸಿ ಪೈಪ್‌ಗಳ ಸಕಾಲದಲ್ಲಿ ತಲುಪಿಸುವ ನಿಟ್ಟಿನಲ್ಲಿ ಇಲಾಖೆ ಸಂಪೂರ್ಣ ಸಜ್ಜಾಗಿದೆ ಎಂದು ತಿಳಿಸಿದರು.ಈ ವೇಳೆ ರೈತರ ಬೇಡಿಕೆಯಂತೆ ರೈತರ ಬೆಳೆ ದಾಸ್ತಾನು ಮಾಡಲು ಸ್ಟೋರೇಜ್ ಘಟಕ ಅವಶ್ಯಕತೆಯಿದ್ದು, ಅಧಿಕಾರಿಗಳು ಈ ಬಗ್ಗೆ ಡಿಪಿಆರ್ ಸಿದ್ದಪಡಿಸಿ 2 ಸ್ಟೋರೇಜ್ ಘಟಕ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿದರು. ಈ ಕೋಲ್ಡ್ ಸ್ಟೋರೇಜ್ ಘಟಕ ನಿರ್ಮಾಣದಿಂದ ಜಿಲ್ಲೆಯ ರೈತರಿಗೆ ಸಾಕಸಷ್ಟು ಅನುಕೂಲವಾಗಲಿದೆ ಎಂದರು.ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ಉಪನಿರ್ದೇಶಕ ವಾಮದೇವ ಕೊಳ್ಳಿ, ಸಹಾಯಕ ನಿರ್ದೇಶಕ ಮನೋಹರ್ ಗೌಡ, ಪರಮೇಶ್ವರ್, ಇಲಾಖೆ ಸಿಬ್ಬಂದಿ, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ತಾಲೂಕಿನ ರೈತರು ಉಪಸ್ಥಿತರಿದ್ದರು.



# ಗ್ರಾಮೀಣ ಭಾಗದಲ್ಲಿ ಸಂಸ್ಕಾರಯುತ ಶಿಕ್ಷಣ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಗಡಿಜಿಲ್ಲೆ ಬೀದರ್‌ನ ಗ್ರಾಮೀಣ ಭಾಗದಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಸಂಸ್ಕಾರಯುತ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡುತ್ತಿದೆ ಎಂದು ಮಧ್ಯಪ್ರದೇಶದ ರಾಷ್ಟ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ತೇಜಸ್ವಿ ಕಟ್ಟಿಮನಿ ಮೆಚ್ಚುಗೆ ವ್ಯಕ್ತಪಡಿಸಿದರು.ತಾಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲದ ಅನುಭವ ಮಂಟಪದಲ್ಲಿ ಬುಧವಾರ ಆಯೋಜಿಸಿದ್ದ ಗುರುಕುಲ ಸೌರಭ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಈ ಭಾಗದ ಅಹೋಭಾಗ್ಯ. ಇಲ್ಲಿ ಕಲಿತ ಮಕ್ಕಳು ಇಂದು ದೊಡ್ಡ ದೊಡ್ಡ ಹುದ್ದೆಗಳನ್ನು ಮಾಡುತ್ತ ತಮ್ಮ ಜೀವನವನ್ನು ರೂಪಿಸಿಕೊಳ್ಳುತ್ತಿದ್ದಾರೆ. ಪೂಜ್ಯರು ಮಾಡುತ್ತಿರುವ ಶೈಕ್ಷಣಿಕ ಸೇವೆ ಅಮೋಘವಾಗಿದೆ. ವಿದ್ಯಾರ್ಥಿಗಳು ದೊಡ್ಡವರಿಗೆ ಗೌರವ, ಪ್ರಾಣಿಗಳಿಗೆ ದಯೆ. ಹಸಿದವರಿಗೆ ಅನ್ನ, ಹೆಣ್ಣು ಮಕ್ಕಳಿಗೆ ಗೌರವ, ಪರಸ್ತ್ರಿಯರಲ್ಲಿ ಅಕ್ಕ ತಂಗಿಯ ಭಾವ. ಅನ್ನ ಎಷ್ಟು ಬೇಕು ಅಷ್ಟೇ ತೆಗೆದುಕೊಳ್ಳಬೇಕು. ಇವತ್ತಿನ ಕಾಯಕ ಇವತ್ತೆ ಮುಗಿಸುವುದು. ಇವೆಲ್ಲವೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಪೂಜ್ಯರು ಇಲ್ಲಿ ಶಾಲೆ ನಡೆಸುತ್ತಿಲ್ಲ ಬದಲಾಗಿ ದೇಶ ಕಟ್ಟುವವರನ್ನು ತಯಾರಿಸುತ್ತಿದ್ದಾರೆ. ಯಾವುದೇ ಕೆಲಸ ಚಿಕ್ಕದೆಂದು ಭಾವಿಸಬಾರದು ಬಸವಣ್ಣನವರು ಕಾಯಕವೇ ಕೈಲಾಸ ಎಂಬ ಸಂದೇಶವನ್ನು ಸಾರಿದ್ದಾರೆ. ನಾವೆಲ್ಲರೂ ದೊಡ್ಡ ದೊಡ್ಡ ಕನಸುಗಳನ್ನು ಕಾಣಬೇಕು. ಇಲ್ಲಿಗೆ ಬಂದು ನನ್ನ ಹೃದಯ ತುಂಬಿ ಬಂದಿದೆ ಎಂದು ನುಡಿದರು.

ಸಾನ್ನಿಧ್ಯ ವಹಿಸಿದ್ದ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ತಂದೆ–ತಾಯಿಗಳು ಪ್ರೀತಿ, ತ್ಯಾಗ ಮತ್ತು ಬದುಕಿನ ಮೌಲ್ಯಗಳ ಜೀವಂತ ವಿಶ್ವವಿದ್ಯಾಲಯ. ಮಕ್ಕಳ ಭವಿಷ್ಯಕ್ಕಾಗಿ ತಮ್ಮ ಇಡೀ ಜೀವನವನ್ನೇ ಮುಡಿಪಾಗಿಡುವ ಅವರ ತ್ಯಾಗಕ್ಕೆ ಜಗತ್ತಿನಲ್ಲಿ ಯಾವುದೂ ಸಾಟಿಯಿಲ್ಲ. ವಿದ್ಯಾರ್ಥಿಗಳು ಜೀವನದಲ್ಲಿ ತಂದೆ ತಾಯಿಯರನ್ನು ಗೌರವಿಸಬೇಕು. ಅವರ ಆಜ್ಞೆಯನ್ನು ಪಾಲಿಸಬೇಕು. ಅವರ ಕನಸುಗಳನ್ನು ಈಡೇರಿಸಬೇಕು ಎಂದು ಹೇಳಿ ಈಶ್ವರಚಂದ್ರ ವಿದ್ಯಾಸಾಗರವರ ಜೀವನದ ಒಂದು ಘಟನೆಯನ್ನು ತಿಳಿಸುತ್ತ ಮಕ್ಕಳಿಗೆ ಆಶೀರ್ವದಿಸಿದರು.

ಈ ಸಂದರ್ಭದಲ್ಲಿ ಸಿ.ಬಿ. ಕಾಲೇಜಿನ ಉಪನ್ಯಾಸಕ ಮಂಜು ಮಾರುತಿ ಉಪಸ್ಥಿತರಿದ್ದರು. ಪ್ರಾಚಾರ್ಯ ಬಸವರಾಜ ಮೊಳಕೀರೆ ಸ್ವಾಗತಿಸಿದರು. ಲಕ್ಷ್ಮಣ ಮೇತ್ರ ನಿರೂಪಿಸಿದರು. ಸೃಷ್ಟಿ ಬಾಬು ವಚನ ಗಾಯನ ನಡೆಸಿಕೊಟ್ಟರು. ಉಪಪ್ರಾಚಾರ್ಯ ಸಿದ್ರಾಮ ಗೊಗ್ಗಾ ವಂದಿಸಿದರು.

# ಎಂ.ಎಸ್.ಪಿ.ಎಲ್ ಸಂಸ್ಥೆಯಿಂದ ಉಚಿತ ಲಂಬಾಣಿ ಕಸೂತಿ ತರಬೇತಿ ಕೇಂದ್ರ ಉದ್ಘಾಟನೆ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)

ಮೇ.27:ನಗರದ ಬಿ.ಟಿ.ಆರ್ ನಗರದಲ್ಲಿ 3 ತಿಂಗಳ ಲಂಬಾಣಿ ಕಸೂತಿ ತರಬೇತಿ ಕಾರ್ಯಾಗಾರದ ಉದ್ಘಾಟನೆ ಹಾಗೂ 6 ತಿಂಗಳ ಟೈಲರಿಂಗ್ ತರಬೇತಿ ಪಡೆದ ಶಿಬಿರಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.ಕಾರ್ಯಕ್ರಮದಲ್ಲಿ ನಗರಸಭಾ ಸದಸ್ಯರಾದ ತಾರಳ್ಳಿ ಜಂಬುನಾಥ, ಸಮಾಜ ಸೇವಾ ವಿಭಾಗದ ಉಪಾಧ್ಯಕ್ಷರಾದ ಎಚ್.ಕೆ. ರಮೇಶ್, ಜನರಲ್ ಮ್ಯಾನೇಜರ್ ಅಶ್ವಿನ್ ಕುಮಾರ್, ಬಿ.ಎಂ. ನಾಗರಾಜ್ ಹಾಗೂ ಸ್ಥಳೀಯ ಮುಖಂಡರು ಮತ್ತು ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಮಾಜ ಸೇವಾ ವಿಭಾಗದ ಉಪಾಧ್ಯಕ್ಷರಾದ ಎಚ್.ಕೆ. ರಮೇಶ್ ಅವರು, ಎಂ.ಎಸ್.ಪಿ.ಎಲ್ ಸಂಸ್ಥೆ ಈಗಾಗಲೇ ಹೊಸಪೇಟೆ ನಗರದಲ್ಲಿ ಟೈಲರಿಂಗ್, ಕಂಪ್ಯೂಟರ್, ಸ್ಪೋಕನ್ ಇಂಗ್ಲಿಷ್, ಸೌಂದರ್ಯ ವರ್ಧಕ ಹಾಗೂ ಎಂಬ್ರಾಯ್ಡರಿ ತರಬೇತಿಗಳನ್ನು ನೂರಾರು ಮಹಿಳೆಯರಿಗೆ ನೀಡಿದ್ದು, ಅವರಲ್ಲಿ ಅನೇಕರು ಆರ್ಥಿಕವಾಗಿ ಸ್ವಾವಲಂಬಿ ಜೀವನ ನಡೆಸುತ್ತಿರುವುದು ಸಂತಸದ ವಿಷಯವಾಗಿದೆ ಎಂದು ಹೇಳಿದರು.ಈಗ ಆರಂಭವಾಗಿರುವ ಲಂಬಾಣಿ ಕಸೂತಿ ತರಬೇತಿಗೆ ದೇಶದಾದ್ಯಂತ ಹೆಚ್ಚಿನ ಬೇಡಿಕೆಯಿದ್ದು, ಮಹಿಳೆಯರು ಈ ತರಬೇತಿಯ ಸದುಪಯೋಗ ಪಡೆದು ಸ್ವಾವಲಂಬಿಗಳಾಗಿ ತಮ್ಮ ಕುಟುಂಬಗಳಿಗೆ ಆಸರೆಯಾಗಬೇಕು ಎಂದು ತಿಳಿಸಿದರು.

ನಗರಸಭಾ ಸದಸ್ಯರಾದ ತಾರಳ್ಳಿ ಜಂಬುನಾಥ ಮಾತನಾಡಿ, ಬಡವರು ಹೆಚ್ಚಾಗಿ ವಾಸಿಸುತ್ತಿರುವ ಈ ವಾರ್ಡಿನಲ್ಲಿ ಎಂ.ಎಸ್.ಪಿ.ಎಲ್ ಸಂಸ್ಥೆ ಆರು ತಿಂಗಳ ಟೈಲರಿಂಗ್ ತರಬೇತಿ ನೀಡಿರುವುದು ಶ್ಲಾಘನೀಯ ಕಾರ್ಯವಾಗಿದೆ. ಎಲ್ಲಾ ಶಿಬಿರಾರ್ಥಿಗಳು ಉತ್ತಮ ತರಬೇತಿ ಪಡೆದಿರುವುದು ಅತ್ಯಂತ ಸಂತೋಷದ ವಿಷಯವಾಗಿದ್ದು, ಇದೀಗ ಮೂರು ತಿಂಗಳ ಲಂಬಾಣಿ ಕಸೂತಿ ತರಬೇತಿ ಕೇಂದ್ರವನ್ನು ಆರಂಭಿಸಿರುವುದು ನಮಗೆಲ್ಲ ಹೆಮ್ಮೆಯ ಸಂಗತಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ತರಬೇತಿಗೆ ಹೆಸರು ನೋಂದಾಯಿಸಿಕೊಂಡಿದ್ದ 35 ಮಹಿಳೆಯರು ಭಾಗವಹಿಸಿದ್ದರು. ಹಾಗೆಯೇ ಟೈಲರಿಂಗ್ ತರಬೇತಿ ಪೂರ್ಣಗೊಳಿಸಿದ 37 ಮಹಿಳೆಯರಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು.

ನೇತ್ರಾವತಿ ಕಾರ್ಯಕ್ರಮವನ್ನು ನಿರೂಪಿಸಿದರು. ಗಂಗಮ್ಮ ಸ್ವಾಗತ ಭಾಷಣ ಮಾಡಿದರು ಹಾಗೂ ಅಂಜಲಿ ಪ್ರಾರ್ಥನೆ ಸಲ್ಲಿಸಿದರು. ತರಬೇತಿ ಪಡೆದ ರೇಣುಕಾ, ಅನು ಹಾಗೂ ಶಿವಮ್ಮ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರೆ, ಶಿಲ್ಪಾ ಅವರು ಲಂಬಾಣಿ ಕಸೂತಿ ತರಬೇತಿಯ ಮಹತ್ವ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು



# ಎಸ್ಸಿ ಎಸ್ಟಿ ನೌಕರರ ಸಂಘದ ತಾಲೂಕಾಧ್ಯಕ್ಷರಾಗಿ ವಿಜಯಕುಮಾರ್ ನೇಮಕ

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ಕರ್ನಾಟಕ ರಾಜ್ಯ ಸರ್ಕಾರಿ ಎಸ್ಸಿ ಮತ್ತು ಎಸ್ಟಿ ನೌಕರರ ಸಮನ್ವಯ ಸಮಿತಿಯ ಜಿಲ್ಲಾಧ್ಯಕ್ಷ ಡಾ. ಮಲ್ಲಿಕಾರ್ಜುನ ಕಾಂಬಳೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಣಪತಿ ಭಕ್ತಾ ಇವರುಗಳು ಚಿಟಗುಪ್ಪ ತಾಲೂಕಾಧ್ಯಕ್ಷರಾಗಿ ವಿಜಯಕುಮಾರ್ ಚಾಂಗಲೇರಾ ಇವರನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಉಳಿದ ಹುದ್ದೆಗಳನ್ನು ಅವರ ಅಧ್ಯಕ್ಷತೆಯಲ್ಲಿ ನೇಮಕ ಮಾಡಿಕೊಳ್ಳಲು ಆದೇಶ ಪತ್ರದಲ್ಲಿ ತಿಳಿಸಿದ್ದಾರೆ.

# ವಿಶೇಷ ನೀರಿನ ಪರೀಕ್ಷೆ ಅಭಿಯಾನಕ್ಕೆ ಡಿಸಿ ಅದ್ದೂರಿ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)

ಮೇ.27:ಗ್ರಾಮೀಣ ಪ್ರದೇಶದ ಸಾರ್ವಜನಿಕರ ಆರೋಗ್ಯ ರಕ್ಷಣೆ ಮತ್ತು ಪ್ರತಿಯೊಬ್ಬರಿಗೂ ಸುರಕ್ಷಿತ ಕುಡಿಯುವ ನೀರನ್ನು ಖಾತರಿಪಡಿಸುವ ಮಹತ್ತರ ಉದ್ದೇಶದಿಂದ ವಿಶೇಷ ನೀರಿನ ಪರೀಕ್ಷೆಯ ಅಭಿಯಾನ ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಚಾಲನೆ ನೀಡಿದರು.ನಗರದ ತಾಲೂಕು ಪಂಚಾಯತಿಯ ವಿದ್ಯಾರಣ್ಯ ಸಭಾಂಗಣದಲ್ಲಿ ವಿಶೇಷ ನೀರಿನ ಪರೀಕ್ಷೆಯ ಅಭಿಯಾನಕ್ಕೆ ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಅಧಿಕೃತವಾಗಿ ಚಾಲನೆ ನೀಡಿ ಅವರು ಮಾತನಾಡಿದರು.ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವತಿಯಿಂದ ಮೇ 25 ರಿಂದ ಜೂನ್ 10 ರವರೆಗೆ ಜಿಲ್ಲಾದ್ಯಂತ ಈ ವಿಶೇಷ ಆಂದೋಲನ ನಡೆಯಲಿದ್ದು, ಮೊದಲ ಕುಡಿಯುವ ನೀರಿನ ಗುಣಮಟ್ಟದ ಕುರಿತು ಗ್ರಾಮೀಣ ಮಟ್ಟದಲ್ಲೇ ನಿರಂತರ ನಿಗಾ ವಹಿಸುವುದು ಅತ್ಯಗತ್ಯ.ಮಳೆಗಾಲದ ಆರಂಭದ ಈ ದಿನಗಳಲ್ಲಿ ನೀರಿನ ಮೂಲಗಳು ಕಲುಷಿತಗೊಳ್ಳುವ ಸಾಧ್ಯತೆ ಹೆಚ್ಚಿರುವುದರಿಂದ, ಜಲಮೂಲ ಕಲುಷಿಗೊಳ್ಳದಂತೆ ಎಚ್ಚರವಹಿಸಬೇಕು. ಪ್ರತಿಯೊಂದು ಗ್ರಾಮ ಪಂಚಾಯತಿಯೂ ತಮಗೆ ನೀಡಿರುವ ಕಿಟ್‌ಗಳನ್ನು ಸಮರ್ಪಕವಾಗಿ ಬಳಸಿ, ನಿಯಮಿತವಾಗಿ ನೀರಿನ ಗುಣಮಟ್ಟವನ್ನು ತಪಾಸಣೆ ಮಾಡಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಾಂಕ್ರಾಮಿಕ ರೋಗ ಮುಕ್ತ ಗ್ರಾಮವೇ ನಮ್ಮ ಗುರಿ: ಅಶುದ್ಧ ಹಾಗೂ ಕಲುಷಿತ ನೀರಿನ ಸೇವನೆಯಿಂದ ಗ್ರಾಮೀಣ ಭಾಗದಲ್ಲಿ ಹರಡುವ ಕಾಲರಾ,ಕಾಮಾಲೆ, ಅತಿಸಾರ ಭೇದಿಯಂತಹ ಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆಗೆ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮ ಕೈಗೊಳ್ಳುವುದು ಅತ್ಯಗತ್ಯ ಎಂದ ಅವರು,ಗ್ರಾಮದ ಜಲಮೂಲಗಳಲ್ಲಿ ಕ್ಲೋರಿನೇಷನ್ ಪ್ರಕ್ರಿಯೆಯನ್ನು ಸರಿಯಾದ ಪ್ರಮಾಣದಲ್ಲಿ ನಿರ್ವಹಿಸುವಂತೆ ಮತ್ತು ಶುದ್ಧ ಕುಡಿಯುವ ನೀರಿನ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವಂತೆ ತಿಳಿಸಿದರು.ತಾಲೂಕಿನ ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ ಸದಸ್ಯರು ಹಾಗೂ ಪ್ರಮುಖವಾಗಿ ಪ್ರತಿದಿನ ನೀರು ಸರಬರಾಜು ಮಾಡುವ ನೀರು ಗಂಟಿಗಳಿಗೆ ಕಾರ್ಯಕ್ರಮದಲ್ಲಿ ವಿಶೇಷ ನೀರಿನ ಪರೀಕ್ಷೆಯ ಕಿಟ್ ವಿತರಿಸಲಾಯಿತು.ಜಿಲ್ಲೆಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಹಿರಿಯ ರಸಾಯನ ತಜ್ಞರು ಇಡೀ ತರಬೇತಿಯನ್ನು ಅತ್ಯಂತ ಪ್ರಾಯೋಗಿಕವಾಗಿ ನಡೆಸಿಕೊಟ್ಟರು.ಕಿಟ್ ಬಳಸಿ ನೀರಿನಲ್ಲಿರುವ ಫ್ಲೋರೈಡ್, ನೈಟ್ರೇಟ್,ಕ್ಲೋರೈಡ್ ಹಾಗೂ ಗಡಸುತನದ ಪ್ರಮಾಣವನ್ನು ಸ್ಥಳದಲ್ಲೇ ಪತ್ತೆ ಹಚ್ಚುವುದು ಹೇಗೆ ಎಂದು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು.ಸಭೆಯಲ್ಲಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕಾಧಿಕಾರಿ ಆಲಂ ಭಾಷ,ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ವಿಜಯ್ ಕುಮಾರ್ ,ಕಿರಿಯ ಅಭಿಯಂತರ ಸುರೇಶ್, ನರೇಶ್.ಸಹಾಯಕ ಅಭಿಯಂತರರು ಮಹರುದ್ರಗೌಡ,ಹಿರಿಯ ರಸಾಯನ ತಜ್ಞರು ಅರುಣ್ ಕುಮಾರ್.ಜಿ.ವಿ ಇದ್ದರು



## ಪೂರ್ವ ಭಾವಿ ಸಭೆ



**ಬಸವಕಲ್ಯಾಣ:** ಅಖಿಲ ಕರ್ನಾಟಕ ಹೂಗಾರ ಮಹಾಸಭಾ ಘಟಕ ಬೀದರ ವತಿಯಿಂದ ಇಲ್ಲಿನ ಹರಳಯ್ಯ ಗವಿಯಲ್ಲಿ ಜಿಲ್ಲಾಧ್ಯಕ್ಷರಾದ ರಾಜ್ ಕುಮಾರ ಹೂಗಾರ ಮದುಕಟ್ಟಿ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಈ ಸಭೆಯಲ್ಲಿ ರಾಜ್ಯ ಸಹ ಕಾರ್ಯದರ್ಶಿ ಹಾಗೂ ಪತ್ರಕರ್ತರಾದ ದುರ್ಯೋಧನ ಹೂಗಾರ, ತಾಲೂಕ ಅಧ್ಯಕ್ಷರಾದ ವಿಠ್ಠಲ ಹೂಗಾರ, ಜಿಲ್ಲಾ ಉಪಾಧ್ಯಕ್ಷರಾದ ಶಿವಪುತ್ರಪ್ಪ ಹೂಗಾರ, ಜಿಲ್ಲಾ ಕಾರ್ಯದರ್ಶಿಗಳಾದ ರಾಜೇಂದ್ರ ಹೂಗಾರ, ಹಿರಿಯರಾದ ಲಕ್ಷ್ಮೀಬಾಯಿ ಹೂಗಾರ, ವಕೀಲರಾದ ವಿಜಯಲಕ್ಷ್ಮಿ ಹೂಗಾರ, ರೇಖಾ ಹೂಗಾರ, ರೇಷ್ಮಾ ಹೂಗಾರ, ತಾಲೂಕ ಪ್ರಧಾನ ಕಾರ್ಯದರ್ಶಿ ಹಣಮಂತ ಹೂಗಾರ. ಸಂಘಟನಾ ಕಾರ್ಯದರ್ಶಿ ರವಿ ಹೂಗಾರ ಇನ್ನಿತರು ಭಾಗವಹಿಸಿ ಅತ್ಯಂತ ಹಿಂದುಳಿದ ಸಮಾಜ ಅಂದರೆ ಅದು ಹೂಗಾರ ಸಮಾಜ ಆದ್ದರಿಂದ ಶೇಕಡ 60 ಕ್ಕಿಂತ ಹೆಚ್ಚು ಅಂಕ ಪಡೆದ ಮಕ್ಕಳಿಗೂ ಕೂಡ ಪ್ರತಿಭಾ ಪುರಸ್ಕಾರ ಮಾಡುವುದು ಸೂಕ್ತ ಎನ್ನುವ ಅಭಿಪ್ರಾಯ. ಹಾಗೂ ಪ್ರತಿಭೆಗಳಿಗೆ ಪುರಸ್ಕಾರ ಮಾಡುವುದು ಉತ್ತಮ ಕೆಲಸ ಎಂದು ಸಭೆಯಲ್ಲಿ ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡಿದರು.

ಜಿಲ್ಲಾ ಹೂಗಾರ್ ಸಮಾಜದ ವತಿಯಿಂದ ಬರುವ ದಿನಾಂಕ 1. ಒಳಗೆ ಹತ್ತನೇ ಹಾಗೂ ಪಿಯುಸಿಯಲ್ಲಿ 60 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಹಾಗೂ ಪಾಲಕರು ಇದರ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ. 10ನೇ ತರಗತಿ ಹಾಗೂ ಪಿಯುಸಿಯಲ್ಲಿ ಪಡೆದ ಜೆರಾಕ್ಸ್ ಪ್ರತಿ ಹಾಗೂ ಭಾವಚಿತ್ರ ನೀಡುವುದಾಗಿ ಹೆಚ್ಚಿನ ಮಾಹಿತಿಗಾಗಿ ಈ ದೂರವಾಣಿ ಸಂಖ್ಯೆಗೆ 9449726950, 78899500222, 8150017465 ಸಂಪರ್ಕಿಸಿ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸರ್ಕಾರಿ ಶಾಲೆಗಳ ವಿಲೀನ ವಿರೋಧಿಸಿ ಪ್ರತಿಭಟನೆ



**ಕೊಪ್ಪಳ:** ಕೆಪಿಎಸ್ ಮ್ಯಾಗ್ನೆಟ್ ಯೋಜನೆಯಡಿ ಜಿಲ್ಲೆಯ 100ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸಿ ಮುಚ್ಚಲು ಮುಂದಾಗಿರುವುದನ್ನು ಖಂಡಿಸಿ ಎಐಡಿಎಸ್‌ಓ ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ನೇತೃತ್ವದಲ್ಲಿ ಗ್ರಾಮಸ್ಥರು, ಪೋಷಕರು ಮತ್ತು ವಿದ್ಯಾರ್ಥಿಗಳು ಬುಧವಾರ ಪ್ರತಿಭಟನೆ ನಡೆಸಿದರು.

ನಗರದ ಕನಕದಾಸ ವೃತ್ತದಿಂದ ಅಶೋಕ ವೃತ್ತದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು, ಗ್ರಾಮೀಣ ಪ್ರದೇಶದ ಶಾಲೆಗಳನ್ನು ಉಳಿಸಬೇಕು ಎಂದು ಆಗ್ರಹಿಸಿದರು.

ಬಳಿಕ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮನವಿ ಸ್ವೀಕರಿಸಿದರು. ಈ ವೇಳೆ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯಾಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ, "ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯ ಮೂಲಕ ಸುತ್ತಮುತ್ತಲಿನ ಶಾಲೆಗಳನ್ನು ವಿಲೀನಗೊಳಿಸಲು ಮುಂದಾಗಿದೆ. ಇದರಿಂದ ಬಡ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಲಿದೆ. ಜಿಲ್ಲೆಯಲ್ಲಿ ಒಂದೇ ಒಂದು ಶಾಲೆಯನ್ನೂ ಮುಚ್ಚಬಾರದು," ಎಂದು ಒತ್ತಾಯಿಸಿದರು.

ಎಐಡಿಎಸ್‌ಓ ರಾಜ್ಯ ಸಮಿತಿಯ ಸದಸ್ಯೆ ಸಿಂಧೂ ಕೌದಿ ಮಾತನಾಡಿ, "3ರಿಂದ 5 ಕಿ.ಮೀ ವ್ಯಾಪ್ತಿಯ ಶಾಲೆಗಳನ್ನು ಮ್ಯಾಗ್ನೆಟ್ ಶಾಲೆಗಳಿಗೆ ವಿಲೀನಗೊಳಿಸುವ ಆದೇಶ ಜಾರಿಯಲ್ಲಿದೆ. ಕೊಪ್ಪಳ ಜಿಲ್ಲೆಯ ಹಲವು ಗ್ರಾಮಗಳ ಶಾಲೆಗಳು ಇದರಿಂದ ಮುಚ್ಚುವ ಸ್ಥಿತಿ ಎದುರಿಸುತ್ತಿವೆ," ಎಂದು ಹೇಳಿದರು. ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ಜಿಲ್ಲಾ ಮುಖಂಡ ಶರಣು ಗಡ್ಡಿ ಮಾತನಾಡಿ, "ಗ್ರಾಮೀಣ ಪ್ರದೇಶದ ಬಡ ಹಾಗೂ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಇದು ಅಡ್ಡಿಯಾಗಲಿದೆ. ಶಾಲೆಗಳನ್ನು ಉಳಿಸುವವರೆಗೆ ಹೋರಾಟ ಮುಂದುವರಿಯಲಿದೆ," ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎ.ವಿ. ಕಣವಿ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಜಿಲ್ಲಾ ಸಂಚಾಲಕ ಗಂಗರಾಜ ಅಳ್ಳಳ್ಳಿ, ಪ್ರದೀಪ್, ಶರಣು ಪಾಟೀಲ್, ಶಾರದ ಗಡ್ಡಿ ಸೇರಿದಂತೆ ವಿವಿಧ ಗ್ರಾಮಗಳ ಪೋಷಕರು ಹಾಗೂ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಶಿಶು ಆರೈಕೆ ಘಟಕ ಉನ್ನತೀಕರಣದ ಕಾರ್ಯಕ್ರಮದ ಉದ್ಘಾಟನೆ




**ಗಂಗಾವತಿ:** ಗಂಗಾವತಿಯ ಉಪ ವಿಭಾಗ ಆಸ್ಪತ್ರೆಯ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ನವಜಾತ ಶಿಶು ಆರೈಕೆ ಘಟಕದ ಉನ್ನತೀಕರಣದ ಕಾರ್ಯಕ್ರಮ ಕೆನರಾ ಬ್ಯಾಂಕ್ ಇವರ ಸಂಯುಕ್ತ ಆಶ್ರಯದಲ್ಲಿ ನವಜಾತ ಶಿಶು ಆರೈಕೆ ಘಟಕ ಉನ್ನತೀಕರಣದ ಕಾರ್ಯಕ್ರಮದ ಉದ್ಘಾಟನೆಯನ್ನು ಗಂಗಾವತಿ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಗಾಲಿ ಜನಾರ್ಧನ್ ರೆಡ್ಡಿ ಇವರು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಕೆನರಾ ಬ್ಯಾಂಕಿನ ಶ್ರೀ ವೀರೇಂದ್ರಬಾಬು ಜನರಲ್ ಮ್ಯಾನೇಜರ್ ಸರ್ಕಲ್ ಆಫೀಸ್ ಹುಬ್ಬಳ್ಳಿ ಹಾಗೂ ರಾಯಚೂರು ರೀಜನಲ್ ಆಫೀಸ್ ಕೆನರಾ ಬ್ಯಾಂಕಿನ ಶ್ರೀಮತಿ ರಾಜೇಶ್ವರಿ ಗಂಗಾವತಿ ಕೆನರಾ ಬ್ಯಾಂಕ್ ಚೀಫ್ ಮ್ಯಾನೇಜರ್ ಆದ ಶ್ರೀಧರ್ ಮತ್ತು ಮ್ಯಾನೇಜರ್ ಶ್ರೀ ಸುಧೀಂದ್ರ ಜೋಶಿ ಇವರು ಪಾಲ್ಗೊಂಡಿದ್ದರು ಕಾರ್ಯಕ್ರಮದಲ್ಲಿ ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಯನ್ನು ಉಪ ವಿಭಾಗ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗಳಾದ ಡಾ. ಈಶ್ವರ್ ಸವಡಿ ಸರ್ ಆಸ್ಪತ್ರೆಯಲ್ಲಿ ನವಜಾತ ಶಿಶು ಮರಣ ಹೊಂದುವುದನ್ನು ತಪ್ಪಿಸಲು ಕೆಲವೊಂದು ಯಂತ್ರೋಪಕರಣಗಳ ಅವಶ್ಯಕತೆಯ ಬಗ್ಗೆ ಕೆನರಾ ಬ್ಯಾಂಕ್ ಇವರ ಪ್ರಾಯೋಜಕತ್ವದಲ್ಲಿ ಸಿ ಎಸ್ ಆರ್ ಫಂಡ ಅನೇಕ ಸಾಮಗ್ರಿ ಯಂತ್ರೋಪಕರಣಗಳು ಮತ್ತು ರೂಮಿನ ಉನ್ನತೀಕರಣ ಮಾಡಲಾಯಿತು ಕಾರ್ಯಕ್ರಮದಲ್ಲಿ ತಾಲೂಕ ಆರೋಗ್ಯ ಅಧಿಕಾರಿಗಳಾದ ಡಾ. ಗೌರಿಶಂಕರ್ ಆರೋಗ್ಯ ರಕ್ಷಾ ಸಮಿತಿ ಸದಸ್ಯರು ಆಸ್ಪತ್ರೆಯ ವೈದ್ಯರು ಸಿಬ್ಬಂದಿ ವರ್ಗದವರು ಮತ್ತು ಸ್ಫೂರ್ತಿ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಸಿದ್ಧರಾಮಯ್ಯಗೆ ಇದು ಗೌರವಯುತ ವಿದಾಯವಲ್ಲ

• **ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿರ್ಗಮನ ಕರ್ನಾಟಕ ಕಾಂಗ್ರೆಸ್‌ಗೆ ದೊಡ್ಡ ನಿರ್ವಾತ ಸೃಷ್ಟಿಸಲಿದೆ ಎಂದು ಮಾಜಿ ಸಚಿವ ಇಕ್ಬಾಲ್ ಅನ್ಸಾರಿ ಅವರ ಬೆಂಬಲಿಗ ಗ್ಯಾರಂಟಿ ಸಮಿತಿ ಸದಸ್ಯ, ಹಮೀದ್ ಮುಲ್ಲಾ ಅಭಿಪ್ರಾಯಪಟ್ಟಿದ್ದಾರೆ.



"ಇದು ಸಿದ್ದರಾಮಯ್ಯ ಅವರಿಗೆ ಗೌರವಯುತ ವಿದಾಯವಂತೂ ಖಂಡಿತ ಅಲ್ಲ. ಇತಿಹಾಸದಿಂದ ಪಾಠ ಕಲಿಯದೆ ಕಾಂಗ್ರೆಸ್ ಮತ್ತೆ ಅದೇ ತಪ್ಪು ಮಾಡುತ್ತಿದೆ. ವೀರೇಂದ್ರ ಪಾಟೀಲ್, ಎಸ್. ಬಂಗಾರಪ್ಪ ಅವರನ್ನು ಒತ್ತಾಯಪೂರ್ವಕವಾಗಿ ಕೆಳಗಿಳಿಸಿದಾಗ ಪಕ್ಷಕ್ಕೆ ಮುಟ್ಟಿ ನೋಡಿಕೊಳ್ಳುವಂತ ಏಟು ಬಿದ್ದಿತ್ತು. ಆ ಸಂದರ್ಭದಲ್ಲಿ ಕಾರ್ಯಕರ್ತರಲ್ಲಿ ಮೂಡಿದ ಅಸಮಾಧಾನ, ಮತದಾರರ ದೂರುವಿಕೆ ಪಕ್ಷದ ಬಲಕ್ಕೆ ದೊಡ್ಡ ಹೊಡೆತ ಕೊಟ್ಟಿತ್ತು. ಈಗ ಅದೇ ಪ್ರಯೋಗವನ್ನು ಮತ್ತೆ ಮಾಡಿದರೆ ಫಲಿತಾಂಶ ಬೇರೆಯಾಗಿರಲು ಸಾಧ್ಯವಿಲ್ಲ" ಎಂದು ಹಮೀದ್ ಮುಲ್ಲಾ ನೆನಪಿಸಿದರು.

ಕರ್ನಾಟಕದಲ್ಲಿ ಸಿದ್ದರಾಮಯ್ಯ ಅವರು ಎರಡನೇ ಬಾರಿ ಪೂರ್ಣಾವಧಿ ಮುಗಿಸಿ, ಜನರ ಮಧ್ಯೆ ಗೌರವಯುತವಾಗಿ ಬೀಳ್ಕೊಡುವ ಅವಕಾಶ ಕಾಂಗ್ರೆಸ್‌ಗೆ ಇತ್ತು ಎನ್ನುವುದು ಅವರ ವಾದ. "ಹಿರಿಯ ನಾಯಕನಿಗೆ ಪೂರ್ಣಾವಧಿ ಪೂರೈಸಲು ಅವಕಾಶ ಕೊಟ್ಟು, ಸಂಘಟನೆ ಮೂಲಕ ಸುಗಮ ಅಧಿಕಾರ ಹಸ್ತಾಂತರ ಮಾಡಿದ್ದರೆ, ಅದು ಪಕ್ಷಕ್ಕೆ ಶಕ್ತಿ ತುಂಬುತ್ತಿತ್ತು. ಕಾರ್ಯಕರ್ತರಲ್ಲೂ ಆತ್ಮವಿಶ್ವಾಸ ಹೆಚ್ಚುತ್ತಿತ್ತು. ಆದರೆ ಈಗಿನ ನಿರ್ಧಾರ ಕಾರ್ಯಕರ್ತರಲ್ಲೇ ಗೊಂದಲ ಮೂಡಿಸಿದೆ. 'ನಾಳೆ ನಮ್ಮ ಸರದಿ ಬಂದರೂ ಇದೇ ರೀತಿ ನಡೆದುಕೊಳ್ಳುತ್ತಾರಾ' ಎಂಬ ಅನುಮಾನ ಮೂಡಿದೆ" ಎಂದರು.

ಸಿದ್ದರಾಮಯ್ಯ ಅವರ ರಾಜಕೀಯ ಬಲದ ಬಗ್ಗೆಯೂ ಮುಲ್ಲಾ ವಿಶ್ಲೇಷಿಸಿದರು. "ಅವರು ಕಟ್ಟಿಕೊಂಡಿದ್ದ ಅಹಿಂದ ಮತಬ್ಯಾಂಕ್, ಒಬಿಸಿ ಮತ್ತು ಗ್ರಾಮೀಣ ಜನರ ನಂಬಿಕೆ. ಇದು ಕೇವಲ ಹುದ್ದೆಯ ಬಲವಲ್ಲ, ವ್ಯಕ್ತಿ ಕೇಂದ್ರಿತ ನಂಬಿಕೆ. ಗ್ಯಾರಂಟಿ ಯೋಜನೆಗಳು, ಸಾಮಾಜಿಕ ನ್ಯಾಯದ ಧ್ವನಿ ಮೂಲಕ ಅವರು ಒಂದು ವರ್ಗದ ಜನರಿಗೆ ನೇರ ಸಂಪರ್ಕ ಸಾಧಿಸಿದ್ದರು. ಆ ಬಲವನ್ನು ಒಂದೇ ದಿನದಲ್ಲಿ ಹುದ್ದೆ ಹಂಚಿ ತುಂಬಲು ಸಾಧ್ಯವಿಲ್ಲ" ಎಂದರು.

ಇದೇ ಸಂದರ್ಭದಲ್ಲಿ ಮಾಜಿ ಸಚಿವ ಇಕ್ಬಾಲ್ ಅನ್ಸಾರಿ ಅವರು ಕಾಂಗ್ರೆಸ್ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು ಎಂದು ಹಮೀದ್ ಮುಲ್ಲಾ ಹೇಳಿದರು. "ಇಕ್ಬಾಲ್ ಅನ್ಸಾರಿ ಅವರು ದಶಕಗಳ ಕಾಲ ಕಾಂಗ್ರೆಸ್‌ಗಾಗಿ ದುಡಿದ ನಾಯಕ. ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ತತ್ವಗಳ ಆಧಾರದ ಮೇಲೆ ಅಲ್ಪಸಂಖ್ಯಾತರ, ದಲಿತರ, ಹಿಂದುಳಿದ ವರ್ಗಗಳ ಧ್ವನಿಯಾಗಿ ಅವರು ಪಕ್ಷದಲ್ಲಿ ಗುರುತಿಸಿಕೊಂಡಿದ್ದರು. ಆದರೆ ಈಗ ಪಕ್ಷದ ವರ್ತನೆ ಬಗ್ಗೆ ಅವರಲ್ಲಿ ತೀವ್ರ ಬೇಸರವಿದೆ" ಎಂದು ಹಮೀದ್ ಮುಲ್ಲಾ ತಿಳಿಸಿದರು.

"ನೆಲಮಟ್ಟದ ಕಾರ್ಯಕರ್ತರು ಮತ್ತು ಅಲ್ಪಸಂಖ್ಯಾತ ಸಮುದಾಯದ ನಿಜವಾದ ಸಮಸ್ಯೆಗಳನ್ನು ಕೇಳಿಸಿಕೊಳ್ಳದೆ, ಕೇಂದ್ರದ ಲೆಕ್ಕಾಚಾರಕ್ಕೆ ರಾಜ್ಯವನ್ನು ಒತ್ತೆಯಿಡುವ ಪ್ರಯತ್ನ ನಡೆಯುತ್ತಿದೆ ಎಂಬುದು ಇಕ್ಬಾಲ್ ಅನ್ಸಾರಿ ಅವರ ಆರೋಪ. ಪಕ್ಷದೊಳಗೆ ಹಿರಿಯ ನಾಯಕರಿಗೆ ಗೌರವ ಇಲ್ಲ, ಕಾರ್ಯಕರ್ತರ ತ್ಯಾಗಕ್ಕೆ ಬೆಲೆ ಇಲ್ಲ ಎಂಬ ಭಾವನೆ ಈಗ ವ್ಯಾಪಕವಾಗಿ ಮೂಡಿದೆ. ಇಕ್ಬಾಲ್ ಅನ್ಸಾರಿ ಅವರಂತಹ ಹಿರಿಯ ನಾಯಕರ ಅಸಮಾಧಾನವನ್ನು ಪಕ್ಷ ಗಂಭೀರವಾಗಿ ಪರಿಗಣಿಸದಿದ್ದರೆ, ಅದು ನೆಲಮಟ್ಟದಲ್ಲಿ ದೊಡ್ಡ ಬಿರುಕು ಸೃಷ್ಟಿಸುತ್ತದೆ" ಎಂದು ಹಮೀದ್ ಮುಲ್ಲಾ ಎಚ್ಚರಿಸಿದರು.

ಹಮೀದ್ ಮುಲ್ಲಾ ಅವರ ಪ್ರಕಾರ, ಇಕ್ಬಾಲ್ ಅನ್ಸಾರಿ ಅವರ ಅಸಮಾಧಾನ ಕೇವಲ ವೈಯಕ್ತಿಕ ನೋವಲ್ಲ, ಅದು ಒಂದು ವರ್ಗದ ಜನರ ಪ್ರತಿಬಿಂಬ. "ಅಲ್ಪಸಂಖ್ಯಾತ ಸಮುದಾಯದ ಜನರು ಕಾಂಗ್ರೆಸ್‌ನ್ನು ತಮ್ಮ ರಕ್ಷಕ ಪಕ್ಷವಾಗಿ ನೋಡುತ್ತಿದ್ದರು. ಆದರೆ ಈಗ ಪಕ್ಷದ ನಿರ್ಧಾರ ಪ್ರಕ್ರಿಯೆಯಲ್ಲಿ ಅವರಿಗೆ ಸ್ಥಾನ ಸಿಗುತ್ತಿಲ್ಲ ಎಂಬ ಭಾವನೆ ಮೂಡಿದೆ. ಇಕ್ಬಾಲ್ ಅನ್ಸಾರಿ ಅವರ ಬೇಸರ ಈಗ ಬಹಿರಂಗವಾಗಿ ಕಾಣಿಸುತ್ತಿದೆ, ಮತ್ತು ಇದು ಯುವ ಮತದಾರರ ಮೇಲೂ ಪರಿಣಾಮ ಬೀರಲಿದೆ" ಎಂದರು.

ರಾಹುಲ್ ಗಾಂಧಿ ಅವರ ನಿರ್ಣಯದ ಮೇಲೂ ಮುಲ್ಲಾ ಪ್ರಶ್ನೆ ಎತ್ತಿದ್ದಾರೆ. "ರಾಜೀವ್ ಗಾಂಧಿ ಅವರು ತೆಗೆದುಕೊಂಡ ಕೆಲವು ತ್ವರಿತ ನಿರ್ಣಯಗಳು ರಾಜ್ಯದಲ್ಲಿ ಕಾಂಗ್ರೆಸ್‌ಗೆ ಹಿನ್ನಡೆ ತಂದಿದ್ದವು. ವೀರೇಂದ್ರ ಪಾಟೀಲ್ ಪ್ರಕರಣ ಸಾಕ್ಷಿ. ಈಗ ರಾಹುಲ್ ಗಾಂಧಿ ಕೂಡ ಅದೇ ದಾರಿ ಹಿಡಿದರೇ ಎಂಬ ಅನುಮಾನ ಮೂಡಿದೆ. ರಾಜ್ಯದ ವಾಸ್ತವ ಅರಿಯದೆ, ಕೇಂದ್ರದ ಲೆಕ್ಕಾಚಾರದ ಮೇಲೆ ತೆಗೆದುಕೊಳ್ಳುವ ನಿರ್ಧಾರ ಪಕ್ಷಕ್ಕೆ ದುಬಾರಿ ಆಗಬಹುದು" ಎಂದರು.

# ಎಲ್ಲಾ ವರ್ಗಗಳ ಕಾರ್ಮಿಕರಿಗೆ ಕನಿಷ್ಟ ವೇತನ ಪರಿಷ್ಕರಣೆ ಒತ್ತಾಯ

• **ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ**

ಕಾರ್ಮಿಕರ ನಿರಂತರ ಹೋರಾಟದ ಫಲವಾಗಿ ಸರ್ಕಾರ ಕನಿಷ್ಠ ವೇತನ ಹೆಚ್ಚಳ ಮಾಡಿದ್ದು, ಇದರ ಅನ್ವಯ ಕಾರ್ಮಿಕ ಇಲಾಖೆಯ ಅಧೀನ ಕಾರ್ಯದರ್ಶಿಗಳು ದಿನಾಂಕ: 22–05–2026 ರಂದು ಅಧಿಸೂಚನೆ ಹೊರಡಿಸಿರುವುದು ಸ್ವಾಗತಾರ್ಹವಾಗಿದೆ ಎಂದು ಎ.ಐ.ಸಿ.ಸಿ.ಟಿ.ಯು ಜಿಲ್ಲಾಧ್ಯಕ್ಷರಾದ ವಿಜಯ್ ದೊರೆರಾಜು ಪ್ರಕಟಣೆಯಲ್ಲಿ ತಿಳಿಸಿದರು.



ಅವರು ಇಂದು ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ ವತಿಯಿಂದ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ನಾಲೆಗಳ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಗ್ಯಾಂಗ್ ಮನ್, ಗೇಜ್ ರೀಡರ್, ವರ್ಕಿಂಗ್ ಇನ್ಸಪೆಕ್ಟರ್, ವಾಚ್ ಮನ್, ಸವಡಿ, ಕಂಪ್ಯೂಟರ್ ಆಪರೇಟರ್, ಹೌಸ್ ಕೀಪಿಂಗ್ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಚ್ಚತಾ ವಿಭಾಗಗಳಲ್ಲಿ ಕೆಲಸ ಮಾಡುವ ಡ್ರೈವರ್ಸ್, ಲೋಡರ್ಸ್, ಕ್ಲೀನರ್ಸ್, ಗಾರ್ಡನರ್, ಸೂಪರವೈಸರ್ಸ್, ಬಸ್ ನಿಲ್ದಾಣದ ಸ್ವಚ್ಚತಾ ವಿಭಾಗದ ಸಫಾಯಿ ಕರ್ಮಚಾರಿ ಕಾರ್ಮಿಕರು ಹಾಗೂ ಇತರೆ ಎಲ್ಲಾ ಕಾರ್ಮಿಕರಿಗೆ ಕನಿಷ್ಠ ವೇತನ ಜಾರಿಗೊಳಿಸಬೇಕೆಂದು ಗಂಗಾವತಿ ಕಾರ್ಮಿಕ ನಿರೀಕ್ಷಕರ ಮುಖಾಂತರ ಬೆಂಗಳೂರಿನ ಕಾರ್ಮಿಕ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳಿಗೆ ಹಾಗೂ ಕಲಬುರ್ಗಿ ಪ್ರಾದೇಶಿಕ ಕಛೇರಿಯ ಉಪ ಕಾರ್ಮಿಕ ಆಯುಕ್ತರುರವರುಗಳಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಪ್ರಗತಿಪರ ಪೌರಕಾರ್ಮಿಕರ ಸಂಘದ ಕೊಪ್ಪಳ ಜಿಲ್ಲಾಧ್ಯಕ್ಷರಾದ ಪರಶುರಾಮ ಮಾತನಾಡಿ, ಕೌಶಲ್ಯರಹಿತ ಕಾರ್ಮಿಕರಿಂದ ಹಿಡಿದು ಹೆಚ್ಚು ಕೌಶಲ್ಯಪೂರ್ಣ ಕಾರ್ಮಿಕರವರೆಗಿನ ವರ್ಗಗಳಿಗೆ ಪರಿಷ್ಕೃತ ವೇತನಗಳು ನಿಗದಿಗೊಳಿಸಲಾಗಿದೆ. ನಮ್ಮ ಎಐಸಿಸಿಟಿಯು ವಾಸ್ತವಿಕ ಜೀವನ ವೆಚ್ಚದ ಅಧ್ಯಯನಗಳ ಆಧಾರದ ಮೇಲೆ ತಿಂಗಳಿಗೆ ರೂ. 42,000 ಕನಿಷ್ಠ ವೇತನವನ್ನು ಕೋರಿದ್ದನ್ನು ಇಲ್ಲಿ ಸ್ಮರಿಸುತ್ತೇವೆ. ಕನಿಷ್ಠ ವೇತನದಲ್ಲಿನ ಹೆಚ್ಚಳವು ಕಾರ್ಮಿಕರ ಖರೀದಿ ಶಕ್ತಿ ಮತ್ತು ಬಳಕೆ ಶಕ್ತಿಯನ್ನು ಹೆಚ್ಚಿಸುವ ಮೂಲಕ ರಾಜ್ಯದ ಆರ್ಥಿಕತೆಯನ್ನು ಬಲಪಡಿಸುತ್ತದೆ. ಹೆಚ್ಚಿನ ಬಳಕೆಯು ಒಟ್ಟು ಬೇಡಿಕೆಯನ್ನು ಉತ್ತೇಜಿಸುತ್ತದೆ. ಇದು ಸರಕು ಮತ್ತು ಸೇವೆಗಳ ದೊಡ್ಡ ಉತ್ಪಾದನೆಗೆ ಕಾರಣವಾಗುತ್ತದೆ. ಅಷ್ಟೇ ಅಲ್ಲದೇ ವಿವಿಧ ವಲಯಗಳಲ್ಲಿ ಹೆಚ್ಚುವರಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ. ವೇತನ ಹೆಚ್ಚಳದಿಂದ ಮಾತ್ರ ಭಾರತದ ಆರ್ಥಿಕತೆ ಬಲಗೊಳ್ಳಲು ಸಾಧ್ಯವಾಗಿದೆ. ಆ ನಿಟ್ಟಿನಲ್ಲಿ ಸರ್ಕಾರ ಎಲ್ಲಾ ವರ್ಗಗಳ ಕಾರ್ಮಿಕರ ವೇತನ ಪರಿಷ್ಕರಣೆ ಮಾಡುವುದು ಅವಶ್ಯವಿದೆ ಎಂದರು.

ಈ ಸಂದರ್ಭದಲ್ಲಿ ನಗರಸಭೆಯ ತ್ಯಾಜ್ಯ ಸಾಗಿಸುವ ವಾಹನ ಚಾಲಕರಾದ ಕೀಶು ನಾಯ್ಕ, ಆಲಂಸಾಬ, ಗಣೇಶ, ಮಾರುತಿ ಹಾಗೂ ಪೌರಕಾರ್ಮಿಕರಾದ ಮಾಯಮ್ಮ, ಕೆಂಚಮ್ಮ, ಶೇಖರ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ಧರೆಗುರುಳಿದ ಬೃಹತ್ ವಿದ್ಯುತ್ ಕಂಬ: ರೈತರಲ್ಲಿ ಆತಂಕ

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ರೈತರ ಕೃಷಿ ಹೊಲಗಳಲ್ಲಿ ಹಾದು ಹೋಗಿರುವ ವಿದ್ಯುತ್ ಕಂಬ ಹಾಗೂ ಉನ್ನತ ಮಟ್ಟದ ತಂತಿ ಲೈನ್ ಜೋರಾದ ಗಾಳಿಗೆ ನಲಕ್ ಕೊರಳಿದ್ದು ಗ್ರಾಮೀಣ ರೈತರಲ್ಲಿ ಆತಂಕ ಮನೆ ಮಾಡಿದೆ.



ಜಿಲ್ಲೆಯ ಯಲಬುರ್ಗಾ ತಾಲೂಕಿನ ಸಂಗನಾಳ–ಹಾಳಕೇರಿ ರಸ್ತೆ ಮಧ್ಯೆ ಹಾದು ಹೋಗಿರುವ 400 ಕೆ ವಿ ವಿದ್ಯುತ್ ಲೈನಿನ ಬೃಹತ್ ಕಂಬವು (ವಿದ್ಯುತ್ ಟವರ್ ಎಂಬ) ಜೋರಾದ ಗಾಳಿಗೆ ನೆಲಕ್ಕುರುಳಿದ ಪರಿಣಾಮ ರಸ್ತೆಯ ಮೇಲೆ ವಿದ್ಯುತ್ ತಂತಿಗಳೆಲ್ಲ ಹರಡಿಕೊಂಡ ಪರಿಣಾಮ ಸಂಚಾರ ಸಂಪೂರ್ಣ ಬಂದಾಗಿದ್ದು ರಾತ್ರಿ ವೇಳೆ ಪ್ರಯಾಣಿಸುತ್ತಿದ್ದ ವಾಹನ ಸವಾರರು ಭಾವಿತರಾಗಿರುತ್ತಾರೆ. ಈ ಘಟನೆ ಮಧ್ಯರಾತ್ರಿ ಸಂಭವಿಸಿರುವುದನ್ನು ಯಾವುದೇ ಪ್ರಾಣ ಹಾನಿ ಸಂಭವಿಸದೆ ಇರುವುದು ಸಮಾಧಾನಕರ ಸಂಗತಿಯಾಗಿದೆ.

ಘಟನೆಯ ಸುದ್ದಿ ತಿಳಿಯುತ್ತಿದ್ದಂತೆ ಸಂಗನಾಳ, ಹಾಳಕೇರಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ರೈತರು ಸ್ಥಳಕ್ಕೆ ಆಗಮಿಸಿ ಆತಂಕಗೊಂಡು ವಿದ್ಯುತ್ ಕಂಪನಿಯ ಮೇಲೆ ಆಕ್ರೋಶ ವ್ಯಕ್ತಪಡಿಸಿರುತ್ತಾರೆ. ಇದು ಸಹಜವಾದ ಘಟನೆ ಅಲ್ಲ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ದಿವ್ಯ ನಿರ್ಲಕ್ಷ ಮತ್ತು ಕಳಪೆ ಕಾಮಗಾರಿಯ ಪರಿಣಾಮ ಎಂದು ರೈತರು ಕಿಡಿ ಕಾರಿರುತ್ತಾರೆ. ಈ ರಸ್ತೆ ಮಾರ್ಗವು ಪ್ರತಿ ದಿನ ನೂರಾರು ರೈತರು ಜಮೀನು ಗಳಿಗೆ ತೆರಳಲೂ ಬಳಸುವ ರಸ್ತೆಯಾಗಿದ್ದು ಟ್ರ್ಯಾಕ್ಟರ್, ಎತ್ತಿನ ಬಂಡಿ, ಹಾಗೂ ಇನ್ನಿತರ ಕೃಷಿ ಚಟುವಟಿಕೆಗೆ ಸಂಬಂಧಿಸಿದಂತೆ ಸಾಮಗ್ರಿಗಳನ್ನು ವಾಹನಗಳು ಹಾಗೂ ಕೃಷಿ ಯಂತ್ರೋಪಕರಣಗಳು ಇದೇ ರಸ್ತೆಯಲ್ಲಿ ಸಂಚರಿಸುತ್ತವೆ ಹಗಲು ವೇಳೆಯಲ್ಲಿ ಈ ಕಂಬ ಮುರುಳಿ ಬಿದ್ದಿದ್ದರೆ ರೈತರು, ಕೂಲಿ ಕಾರ್ಮಿಕರು ಹಾಗೂ ಸಾಲ ಮಕ್ಕಳಿಗೆ ಅಪಾಯ ಉಂಟಾಗುವ ಎಲ್ಲಾ ಸಾಧ್ಯತೆಗಳಿದ್ದು ಇದಕ್ಕೆಲ್ಲ ಯಾರು ಹೊಣೆ ಎಂದು ಗ್ರಾಮಸ್ಥರ ಪ್ರಶ್ನೆಯಾಗಿದೆ.

ಗಾಳಿ ಬೀಸಿದರೆ ಕಂಬ ಬೀಳುತ್ತದೆ, ಮಳೆ ಬಂದರೆ ರಸ್ತೆಗಳೆ ಕೊಚ್ಚಿ ಹೋಗುತ್ತವೆ ಇದು ಅಭಿವೃದ್ಧಿಯೋ ಅಥವಾ ಅವ್ಯವಸ್ಥೆಯೋ ಎಂದು ಸ್ಥಳೀಯರು ಪ್ರಶ್ನಿಸುತ್ತಿದ್ದು ಇದಕ್ಕೆಲ್ಲ ಸಂಬಂಧಪಟ್ಟ ಏನೋ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಉತ್ತರ ನೀಡಬೇಕಾಗಿದೆ.

# SIR ವಿರುದ್ಧ ರಾಜ್ಯವ್ಯಾಪಿ ಕರ್ನಾಟಕ ಪ್ರತಿರೋಧಕ್ಕೆ ಕರೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಮತದಾರರ ತೀವ್ರ ಪರಿಷ್ಕರಣೆ ಹೆಸರಿನಲ್ಲಿ ದೇಶಾದ್ಯಂತ ಕೋಟ್ಯಾಂತರ ಜನರ ಮತದಾನದ ಹಕ್ಕು ಕಸಿಯುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿ, SIR ವಿರೋಧಿ ಜಾತ್ಯತೀತ ಪಕ್ಷಗಳು ಹಾಗೂ ಜನಪರ ಸಂಘಟನೆಗಳ ಒಕ್ಕೂಟ ಕರ್ನಾಟಕ ವತಿಯಿಂದ ಮೇ 30ರಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮೊದಲ ಹಂತದ "ಕರ್ನಾಟಕ ಪ್ರತಿ–ರೋಧ" ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಮುಖಂಡರು ತಿಳಿಸಿದ್ದಾರೆ.



ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಮುಖಂಡರು, ಕೇಂದ್ರ ಚುನಾವಣಾ ಆಯೋಗದ SIR ಪ್ರಕ್ರಿಯೆ ಜನವಿರೋಧಿ ಹಾಗೂ ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುವ ಕ್ರಮವಾಗಿದೆ ಎಂದು ಆರೋಪಿಸಿದರು. ಈಗಾಗಲೇ ಹಲವು ರಾಜ್ಯಗಳಲ್ಲಿ ನಡೆದ ಪರಿಷ್ಕರಣೆಯಲ್ಲಿ ಕೋಟ್ಯಾಂತರ ಅರ್ಹ ಮತದಾರರನ್ನು ಮತದಾರರ ಪಟ್ಟಿಯಿಂದ ಹೊರಗಿಡಲಾಗಿದೆ ಎಂದು ದೂರಿದರು.

ಹೊಸ SIR ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಮತದಾರರೂ ಮತ್ತೆ ಹೊಸದಾಗಿ ನೋಂದಣಿ ಮಾಡಿಸಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, 2002ರ ಮತದಾರರ ಪಟ್ಟಿಯ ದಾಖಲೆಗಳು ಅಥವಾ 11 ವಿಧದ ದಾಖಲೆಗಳನ್ನು ಕಡ್ಡಾಯಗೊಳಿಸಲಾಗಿದೆ. ಈ ಪ್ರಕ್ರಿಯೆಯಿಂದ ವಿವಾಹಿತ ಮಹಿಳೆಯರು, ಅಲೆಮಾರಿ ಸಮುದಾಯಗಳು, ಆದಿವಾಸಿಗಳು, ದಲಿತರು, ಗ್ರಾಮೀಣ ಬಡವರು ಹಾಗೂ ಅಲ್ಪಸಂಖ್ಯಾತರು ಹೆಚ್ಚು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ ಎಂದು ಹೇಳಿದರು. "ಲಾಜಿಕಲ್ ಡಿಸ್ಕ್ರೆಪೆನ್ಸಿ" ಹೆಸರಿನ ಸಾಫ್ಟ್‌ವೇರ್ ಬಳಸಿ ಸಣ್ಣಪುಟ್ಟ ಹೆಸರು, ವಿಳಾಸ ಅಥವಾ ದಿನಾಂಕದ ವ್ಯತ್ಯಾಸಗಳನ್ನು ಕಾರಣವನ್ನಾಗಿ ಮಾಡಿ ಮತದಾನದ ಹಕ್ಕು ಕಸಿಯಲಾಗುತ್ತಿದೆ. ಬಿಹಾರ ಮತ್ತು ಬಂಗಾಳದಲ್ಲಿ ಲಕ್ಷಾಂತರ ಜನರು ಎಲ್ಲಾ ದಾಖಲೆಗಳಿದ್ದರೂ ಮತದಾರರ ಪಟ್ಟಿಯಿಂದ ಹೊರಗುಳಿದಿದ್ದಾರೆ. ಕರ್ನಾಟಕದಲ್ಲಿ ಇಂತಹ ಪರಿಸ್ಥಿತಿಗೆ ಅವಕಾಶ ನೀಡಬಾರದು ಎಂದು ಒತ್ತಾಯಿಸಿದರು. SIR ಪ್ರಕ್ರಿಯೆಯ ನಿಜವಾದ ಉದ್ದೇಶ ನುಸುಳುಕೋರರನ್ನು ಪತ್ತೆಹಚ್ಚುವುದು ಅಲ್ಲ. ವಿರೋಧ ಪಕ್ಷಗಳಿಗೆ ಬೆಂಬಲ ನೀಡುವ ಸಮುದಾಯಗಳ ಮತಗಳನ್ನು ಕಡಿತಗೊಳಿಸಿ ರಾಜಕೀಯ ಲಾಭ ಪಡೆಯುವ ಯತ್ನ ನಡೆಯುತ್ತಿದೆ ಎಂದು ಆರೋಪಿಸಿದ ಅವರು, "ಇದು ಅಂಂ–ಓಖಅ ಮಾದರಿಯ ಮತ್ತೊಂದು ಅಪಾಯಕಾರಿ ಕ್ರಮ" ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ "ಕರ್ನಾಟಕ ಪ್ರತಿ–ರೋಧ" ಮೂಲಕ ರಾಜ್ಯದ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದ್ದು, ಸಾಹಿತಿಗಳು, ಚಿಂತಕರು, ಕಲಾವಿದರು, ಪ್ರಗತಿಪರ ಸಂಘಟನೆಗಳು ಹಾಗೂ ಜಾತ್ಯತೀತ ಪಕ್ಷಗಳ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಒಕ್ಕೂಟವು ಖಖಖ ಪ್ರಕ್ರಿಯೆಯನ್ನು ತಕ್ಷಣ ಸ್ಥಗಿತಗೊಳಿಸುವುದು, 'ಲಾಜಿಕಲ್ ಡಿಸ್ಕ್ರೆಪೆನ್ಸಿ' ಸಾಫ್ಟ್‌ವೇರ್ ಬಳಕೆಯನ್ನು ನಿಷೇಧಿಸುವುದು, ಮತದಾರರ ಪಟ್ಟಿಯನ್ನು ಪಾರದರ್ಶಕವಾಗಿ ಪ್ರಕಟಿಸುವುದು, ಗ್ರಾಮಸಭೆ ಹಾಗೂ ವಾರ್ಡ್ ಸಭೆಗಳ ಮೂಲಕ ಸಾರ್ವಜನಿಕ ಪರಿಶೀಲನೆ ನಡೆಸುವುದು ಸೇರಿದಂತೆ ಹಲವು ಹಕ್ಕೊತ್ತಾಯಗಳನ್ನು ಮುಂದಿಟ್ಟಿದೆ. ರಾಜ್ಯ ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಜನರ ಮತದಾನದ ಹಕ್ಕು ರಕ್ಷಿಸಲು ಕ್ರಮ ಕೈಗೊಳ್ಳಬೇಕು. ಅಗತ್ಯವಿದ್ದರೆ ಸುಪ್ರೀಂ ಕೋರ್ಟ್ ಮೊರೆ ಹೋಗಬೇಕು. ಜೊತೆಗೆ ವಿಶೇಷ ಗ್ರಾಮಸಭೆ ಹಾಗೂ ವಾರ್ಡ್ ಸಭೆಗಳನ್ನು ಕರೆದು ಎಲ್ಲಾ ಅರ್ಹ ಮತದಾರರಿಗೆ "ಸ್ಮಾರ್ಟ್ ಕಾರ್ಡ್" ನೀಡಬೇಕು ಎಂದು ಒತ್ತಾಯಿಸಿದರು. "ಕರ್ನಾಟಕ ಪ್ರತಿರೋಧ"ವು ರಾಜ್ಯದ ಪ್ರತಿಯೊಬ್ಬ ನಾಗರಿಕರ ಮತದಾನದ ಹಕ್ಕು ಹಾಗೂ ಬದುಕುವ ಹಕ್ಕು ರಕ್ಷಿಸುವ ಪ್ರಜಾತಾಂತ್ರಿಕ ಹೋರಾಟವಾಗಿದ್ದು, ಎಲ್ಲ ಜವಾಬ್ದಾರಿಯುತ ನಾಗರಿಕರು ಇದರಲ್ಲಿ ಭಾಗವಹಿಸಬೇಕು ಎಂದು ಮುಖಂಡರು ಮನವಿ ಮಾಡಿದರು. ಈ ಸಂದರ್ಭದಲ್ಲಿ ಮಾಜಿ ಬುಡ ಅಧ್ಯಕ್ಷ ಹುಮನ್ ಖಾನ್ ಸತ್ಯಬಾಬು ಎಲ್ಮಾರಣ್ಣ ಶಿವಶಂಕರ್ ಮಾಧವ್ ರೆಡ್ಡಿ ಕರಿಯಪ್ಪ ಗುಡಿಮನಿ ಬೋವಿ ಪಾರ್ಟಿ ವಿಷ್ಣುವರ್ಧನ್ ಸೇರಿದಂತೆ ಹಲವು ಮುಖಂಡರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಮಳೆ: ಬಾಲಕಿ ಸಾವು, ಖಂಡ್ರೆ ಕಂಬನಿ



**ಬೆಂಗಳೂರು:** ಬೀದರ್ ಜಿಲ್ಲೆ ಹುಲಸೂರಿನಲ್ಲಿ ಮಳೆ ಅನಾಹುತಕ್ಕೆ ಕೆ.ಜಿ.ಎನ್. ಕಾಲೋನಿಯಲ್ಲಿ 6 ವರ್ಷದ ಬಾಲಕಿ ಮೃತಪಟ್ಟಿರುವ ಬಗ್ಗೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಕಂಬನಿ ಮಿಡಿದಿದ್ದಾರೆ.

ನಿನ್ನೆ ಸಂಜೆ ಸುರಿದ ಭಾರಿ ಆಲಿಕಲ್ಲು ಮಳೆಯಿಂದಾಗಿ ಪತ್ರೂಸ್ ಹಾರಿಹೋಗಿ, ಮೇಲಿಟ್ಟಿದ್ದ ಕಲ್ಲು ಬಿದ್ದು ಬಾಲಕಿ ಮೃತಪಟ್ಟಿರುವುದು ಅತ್ಯಂತ ನೋವಿನ ಸಂಗತಿ. ಈ ದು-ಃಖದ ಸಂದರ್ಭದಲ್ಲಿ ಸರ್ಕಾರ ಕುಟುಂಬದ ಜೊತೆ ನಿಲ್ಲುತ್ತದೆ. ಕುಟುಂಬದವರಿಗೆ ನಿಯಮಾನುಸಾರ ಪರಿಹಾರ ನೀಡುವಂತೆ ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಗಾಳಿ ಸಹಿತ ಮಳೆ ಬೀಳುತ್ತಿದ್ದು, ಜನರೂ ಸುರಕ್ಷತೆಯಿಂದ ಇರುವಂತೆ ಮನವಿ ಮಾಡಿದ್ದಾರೆ.

## ತ್ರಿನೇಶ್ ಸಿನಿ ಕಂಬೈನ್ಸ್‌ರವರ ಓಂ ಶ್ರೀ ದಿಗ್ವಿಜಯ ಚಿತ್ರೀಕರಣ ಮೂಹೂರ್ತ






**ಗಂಗಾವತಿ:** ಓಂ ಶ್ರೀ ದಿಗ್ವಿಜಯ ಚಿತ್ರೀಕರಣದ ಮೂಹೂರ್ತಕ್ಕೆ ಗಂಗಾವತಿಯ ಪ್ರಮುಖ ಮುಖಂಡರು ಹಾಗೂ ಗಣ್ಯಮಾನ್ಯರು ಮಹಿಳೆಯರು ಸೇರಿದಂತೆ ಚಲನಚಿತ್ರ ಹಾಗೂ ರಂಗ ಕಲಾವಿದರು ನವಗ್ರಹ ಖ್ಯಾತ ನಟ ನಾಗೇಂದ್ರ ಅರಸ್ ಹಾಗೂ ನುರಿತ ಕಲಾವಿದರು ಚಿತ್ರೀಕರಣದ ಕ್ಲ್ಯಾಪ್ ಅನ್ನು ಮಾಡಿ ಚಾಲನೆ ನೀಡುವುದರ ಮೂಲಕ ಓಂ ಶ್ರೀ ದಿಗ್ವಿಜಯ ಚಲನಚಿತ್ರ ತಂಡಕ್ಕೆ ಶುಭ ಹಾರೈಸಿದರು.

ಅದಕ್ಕೂ ಪೂರ್ವದಲ್ಲಿ ಗಂಗಾವತಿಯ ಪ್ರಖ್ಯಾತ ಮಂದಿರವಾದ ಶರಣಂ ಅಯ್ಯಪ್ಪ ಶ್ರೀ ಸ್ವಾಮಿ ಅಯ್ಯಪ್ಪನ ದೇವಸ್ಥಾನದಲ್ಲಿ ಅರ್ಚನ ಮತ್ತು ಮಂಗಳಾರುತಿ ಪೂಜೆ ಸಲ್ಲಿಸಿದರು.

ಬಳಿಕ ಒಂದು ಎರಡು ಸನ್ನಿವೇಶಗಳು ದೇವಸ್ಥಾನದಲ್ಲಿ ತೆ-ಗೆದುಕೊಂಡರು ಬಳಿಕ ಮುಂದುವರಿದ ಸನ್ನಿವೇಶಗಳ ಭಾಗವನ್ನು ಸ್ಥಳೀಯ ಸ್ಥಳಗಳಲ್ಲಿ ಮುಂದುವರೆಸುವಲ್ಲಿ ಪಾಲ್ಗೊಂಡರು.

# ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಹೊಸ ಕೋರ್ಸ್ ಶುರು

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಪ್ರಸಕ್ತ 2026–27ನೇ ಶೈಕ್ಷಣಿಕ ಸಾಲಿಗೆ ಅನ್‌ಲೈನ್ ಪ್ರವೇಶಾತಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ಈಗಾಗಲೆ ಪ್ರವೇಶ ಪರೀಕ್ಷೆಯಲ್ಲಿ ಅಂಕ ಗಳಿಸಿದ ಅಭ್ಯರ್ಥಿಗಳು ವಿ.ವಿ.ಯಲ್ಲಿ ಅಭ್ಯಾಸಕ್ಕೆ ಆನ್ ಲೈನ್ ಮೂಲಕ ಪ್ರವೇಶಾತಿ ನೋಂದಣಿ ಮಾಡಿಕೊಳ್ಳಬಹುದಾಗಿದೆ ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಹೇಳಿದರು.

ಬುಧವಾರಕಡಗಂಚಿಯ ವಿ.ವಿ.ಯ ಅತಿಥಿಗೃಹದಲ್ಲಿ ಸುದ್ದಿಗೋಷ್ಟಿ ಉದ್ದೇಶಿಸಿ ಮಾತನಾಡಿದ ಅವರು ಸಿ.ಯು.ಇ.ಟಿ(ಪಿ.ಜಿ)–2026 ಅಥವಾ ಗೇಟ್ ಪರೀಕ್ಷೆಯಲ್ಕಿ ಅಂಕ ಪಡೆದ ಅಭ್ಯರ್ಥಿಗಳು ಮಾತ್ರ ಸಿ.ಯು.ಕೆ.ಸಮರ್ಥ್ ಪೋರ್ಟಲ್ ಮೂಲಕವೇ http://cukcuet.samarth.edu.in/pg/ಪ್ರವೇಶಾತಿ ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ ಎಂದರು.

ಸಾಮಾನ್ಯ, ಓ.ಬಿ.ಸಿ, ಇ.ಡಬ್ಲ್ಯೂ.ಎಸ್. ಬರ್ಗ ವಿದ್ಯಾರ್ಥಿಗಳು 500 ರೂ., ಎಸ್.ಸಿ–ಎಸ್.ಟಿ–ಪಿ. ಡಬ್ಲ್ಯೂ.ಡಿ ಅಭ್ಯರ್ಥಿಗಳು 100 ರೂ. ಶುಲ್ಕ ಭರಿಸಿ ಜೂನ್ 10ರ ಬೆಳಿಗ್ಗೆ 11 ಗಂಟೆ ವರೆಗೆ ನೋಂದಣಿ ಮಾಡಿಕೊಳ್ಳಬೇಕು. ಪ್ರತ್ಯೇಕ ಕಾರ್ಯಕ್ರಮಗಳಿಗೆ ಅರ್ಜಿ ಸಲ್ಲಿಸುವವರು ಪ್ರತ್ಯೇಕ ನೋಂದಣಿ ಶುಲ್ಕ ಭರಿಸಬೇಕಾಗುತ್ತದೆ. ಮೆರಿಟ್ ಮತ್ತು ಲಭ್ಯವಿರುವ ಮೀಸಲಾತಿಯನ್ವಯ ಜೂನ್ 10 ರಂದು ಬೆಳಿಗ್ಗೆ



11 ನೊಂದಾಯಿತ ಅಭ್ಯರ್ಥಿಗಳ ಪಟ್ಟಿಯನ್ನು ವಿ.ವಿ. ಅಂತರ್ಜಾಲದಲ್ಲಿ ಪ್ರಕಟಿಸಿ ಜೂನ್ 11ರ ಬೆಳಿಗ್ಗೆ 11 ಗಂಟೆ ವರೆಗೆ ಆಕ್ಷೇಪಣೆ ಆಹ್ವಾನಿಸಲಾಗುತ್ತದೆ ಎಂದರು.

ಪ್ರಸ್ತುತ ಸಿ.ಯು.ಕೆ.ಯಲ್ಲಿ ಎರಡು ವರ್ಷ ಅವಧಿಯ 34 ಪಿ.ಜಿ. ಕೋರ್ಸ್‌ಗಳು, ಒಮದು ವರ್ಷ ಅವಧಿಯ 15 ಪಿ.ಜಿ. ಕಾರ್ಯಕ್ರಮಗಳು ಅಭ್ಯಾಸಕ್ಕೆ ಲಭ್ಯಗಳಿವೆ. ಪ್ರವೇಶಾತಿ ಪಡೆಯುವ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಕಲ್ಪಿಸಲಾಗುವುದು. ಕಲ್ಯಾಣ ಕರ್ನಾಟಕ ಭಾಗದ ವಿದ್ಯಾರ್ಥಿಗಳಿಗೆ 371ಜೆ ಅನ್ವಯ ಶೇ.8ರಷ್ಟು ಮೀಸಲಾತಿ ಇದ್ದು, ಪ್ರದೇಶದ ವಿದ್ಯಾರ್ಥಿಗಳು ಲಾಭ ಪಡೆಯಬೇಕೆಂದ ಅವರು, ಪ್ರವೇಶ ಪ್ರಕ್ರಿಯೆ ಹಾಗೂ ಕೋರ್ಸ್ ಗಳ ಕುರಿತು ಹೆಚ್ಚಿನ ವಿವರಗಳಿಗೆ ತಿತಿತಿ.ಛಿಣಞ.ಚಿಛಿ.ಟ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದಿದ್ದಾರೆ.

**6 ಹೊಸ ಕೋರ್ಸ್ ಆರಂಭ:** ಎನ್.ಇ.ಪಿ. ಅಳವಡಿಸಿಕೊಂಡಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಪ್ರಸಕ್ತ 2026–27ನೇ ಶೈಕ್ಷಣಿಕ ಸಾಲಿನಿಂದ ವಿ.ವಿ.ಯಲ್ಲಿ ಎಂ.ಎಸ್ಸಿ ಇನ್ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್, ಎಂ.ಎಸ್ಸಿ (ಪ್ರಾಣಿಶಾಸ್ತ್ರ), ಎಂ.ಎಸ್ಸಿ (ಸಸ್ಯಶಾಸ್ತ್ರ), ಎಂ.ಎಸ್ಸಿ (ಸಂಖ್ಯಾಶಾಸ್ತ್ರ ಮತ್ತು ದತ್ತಾಂಶ ವಿಶ್ಲೇಷಣೆ), ಎಂ.ಟೆಕ್ ಇನ್ ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಅಧ್ಯಯನ ಹಾಗೂ ಮಾಸ್ಟರ್ ಆಫ್ ಲೈಬ್ರರಿ ಮತ್ತು ಮಾಹಿತಿ ವಿಜ್ಞಾನ ಕೋರ್ಸ್ ಆರಂಭಿಸಲಾಗುತ್ತಿದ್ದು, ಇದಕ್ಕೆ ಬೇಕಾದ ಬೋಧಕ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ಪ್ರೊ. ಬಟ್ಟು ಸತ್ಯನಾರಾಯಣ ತಿಳಿಸಿದರು.

ವಿಶ್ವವಿದ್ಯಾಲಯವು ಆರಂಭವಾದಾಗಿನಿಂದಲೂ ಗುಣಮಟ್ಟದ ಉನ್ನತ ಶಿಕ್ಷಣ, ಹೊಸ–ಹೊಸ ಸಂಶೋಧನೆ, ನಾವೀನ್ಯತೆ ಮತ್ತು ಕೌಶಲ್ಯಾಭಿವೃದ್ಧಿಗೆ ಹೆಚ್ಚು ಒತ್ತು ನೀಡುತ್ತಿದೆ. ವಿ.ವಿಯಲ್ಲಿ ಸುಸಜ್ಜಿತ ಹಾಸ್ಟೆಲ್‌ಗಳ ಸೌಲಭ್ಯ, ಆಧುನಿಕ ಗ್ರಂಥಾಲಯ, ಕ್ರೀಡಾಂಗಣ ಸೇರಿದಂತೆ ಅನೇಕ ಸುಸಜ್ಜಿತ ಸೌಲಭ್ಯ ಹೊಂದಿದೆ. ಈ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ 6 ವಿಭಾಗಗಳಲ್ಲಿ ಕಲೆ, ಮಾನವಿಕ, ಸಮಾಜ ವಿಜ್ಞಾನ, ನಿರ್ವಹಣೆ, ವಿಜ್ಞಾನ ಮತ್ತು ಎಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಪದವಿ, ಸ್ನಾತ್ತಕೋತ್ತರ, ಪಿ.ಹೆಚ್.ಡಿ ಶಿಕ್ಷಣ ನೀಡುತ್ತಿರುವ ದೇಶದ ಪ್ರಮುಖ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಯಾಗಿ ಸಿ.ಯು.ಕೆಮ ಹೊರಹೊಮ್ಮುತ್ತಿದೆ ಎಂದರು.

**ಜ್ಞಾನಾರ್ಜನೆಯೊಂದಿಗೆಗಳಿಕೆಕಾರ್ಯಕ್ರಮ ಅನುಷ್ಠಾನ:** ವಿಶ್ವವಿದ್ಯಾನಿಲಯವು ಇದೇ ಪ್ರಥಮ ಬಾರಿಗೆ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಸ್ವಾವಲಂಬನೆ ಮತ್ತು ಕೌಶಲ್ಯ ಅಭಿವೃದ್ಧಿ ಹೆಸರಿನಲ್ಲಿ ಪ್ರಸಕ್ತ 2026–27ನೇ ಶೈಕ್ಷಣಿಕ ಸಾಲಿನಿಂದ ಕಾರ್ಯಕ್ರಮ ಪರಿಚಯಿಸುತ್ತಿದೆ. ಇದಕ್ಕಾಗಿ ಎನ್.ಬಿ.ಸಿ.ಸಿ. ಸಂಸ್ಥೆಯ ಸಿ.ಎಸ್.ಆರ್. ನಿಧಿ ಬಳಕೆ ಮಾಡಲಾಗುತ್ತಿದೆ. ಆರಂಭದಲ್ಲಿ ವಿಶ್ವವಿದ್ಯಾಲಯದ ಪಿ.ಜಿ. ಪ್ರಥಮ ವರ್ಷದ 100 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಪ್ರತಿ ಸೆಮಿಸ್ಟರ್ ಗೆ 3 ತಿಂಗಳಂತೆ ಒಟ್ಟು 6 ತಿಂಗಳ ಕಾಲ ಮಾಸಿಕ 3,000 ರೂ. ಗೌರವ ಸಂಭಾವನೆ ನೀಡಲಾಗುತ್ತದೆ. ಇದಕ್ಕಾಗಿ ವಾರ್ಷಿಕ 10 ಲಕ್ಷ ರೂ. ಮತ್ತು ಐದು ವರ್ಷಕ್ಕೆ ಸಂಸ್ಥೆ 1 ಕೋಟಿ ರೂ. ಹಣ ಖರ್ಚು ಮಾಡಲಿದೆ. ಸ್ವಯಂಪ್ರೇರಿತವಾಗಿ ಬರುವ ವಿದ್ಯಾರ್ಥಿಗಳಿಗೆ ಅವರ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ಪ್ರತಿ ದಿನ ಒಂದೂವರೆ ಗಂಟೆ ವಿ.ವಿ. ಅವರಣದಲ್ಲಿ ಪರಿಸರ ಸಂರಕ್ಷಣೆ, ಗಿಡ ಬೆಳೆಸುವುದು ಅಥವಾ ವಿ.ವಿ. ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯಾರ್ಥಿಗಳಿಗೆ ಪಾಠ ಬೋಧನೆ ಮಾಡಬೇಕಾಗುತ್ತದೆ ಎಂದು ಪ್ರೊ. ಬಟ್ಟು ಸತ್ಯನಾರಾಯಣ ಕಾರ್ಯಕ್ರಮದ ರೂಪರೇಷೆ ಕುರಿತು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಭಾರಿ ಕುಲಸಚಿವ ಹಾಗೂ ಕಾನೂನು ನಿಕಾಯ ಡೀನ್ ಪ್ರೊ. ಬಸವರಾಜ್ ಕುಬಕಡ್ಡಿ, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ. ಕೋಟ ಸಾಯಿ ಕೃಷ್ಣ, ಸಾರ್ವಜನಿಕ ಸಂಪರ್ಕಾಧಿಕಾರಿ ಡಾ.ಗಣಪತಿ ಸಿನ್ನೂರ, ಸಹಾಯಕ ಕುಲಸಚಿವ ಶ್ರೀಕಾಂತ್ ಕುಸೂರ ಸೇರಿದಂತೆ ಎಲ್ಲಾ ನಿಕಾಯದ ಡೀನರು ಉಪಸ್ಥಿತರಿದ್ದರು.

# ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಪೌಷ್ಟಿಕ ಆಹಾರವೇ ಮೂಲ



**ಚೆನ್ನುಡಿ–ಕನ್ನುಡಿ**
**● ಪರಶುರಾಮ ಕರಣಂ**
**ಭಾಲ್ಕಿ**


ಆರೋಗ್ಯವೇ ಜೀವನದ ಮೂಲಾಧಾರ. ಇಂದಿನ ವೇಗದ ಜೀವನಶೈಲಿಯಲ್ಲಿ ಜನರು ಆಹಾರ ಪದ್ಧತಿಗೆ ಕಡಿಮೆ ಗಮನ ನೀಡುತ್ತಿರುವುದರಿಂದ ಮಧುಮೇಹ, ರಕ್ತದೊತ್ತಡ, ಹೃದಯ ರೋಗಗಳು ಮತ್ತು ಬೊಜ್ಜಿನಂತಹ ಜೀವನಶೈಲಿ ಸಂಬಂಧಿತ ಕಾಯಿಲೆಗಳು ಹೆಚ್ಚುತ್ತಿವೆ. ಈ ಹಿನ್ನೆಲೆಯಲ್ಲಿ ಪೌಷ್ಟಿಕ ಆಹಾರದ ಮಹತ್ವವನ್ನು ಜನರಿಗೆ ತಿಳಿಸುವ ಉದ್ದೇಶದಿಂದ ವಿಶ್ವ ಪೌಷ್ಟಿಕಾಂಶ ದಿನಾಚರಣೆಯನ್ನು ಆಚರಿಸಲಾಗುತ್ತದೆ.

ಪ್ರತಿ ವರ್ಷ ಮೇ 28ರಂದು ಆಚರಿಸಲ್ಪಡುವ ಈ ದಿನವು "ಉತ್ತಮ ಪೌಷ್ಟಿಕಾಂಶ –ಉತ್ತಮ ಆರೋಗ್ಯ" ಎಂಬ ಸಂದೇಶವನ್ನು ಸಮಾಜಕ್ಕೆ ನೀಡುತ್ತದೆ.

ಆರೋಗ್ಯಕರ ಜೀವನಕ್ಕೆ ಸಮತೋಲನಯುತ ಆಹಾರವೇ ಮೂಲಾಧಾರವಾಗಿದ್ದು, ದೇಹಕ್ಕೆ ಅಗತ್ಯವಾದ ಪ್ರೋಟೀನ್, ವಿಟಮಿನ್, ಖನಿಜಾಂಶ ಮತ್ತು ನಾರಿನಾಂಶಗಳನ್ನು ಸರಿಯಾದ ಪ್ರಮಾಣದಲ್ಲಿ ಸೇವಿಸುವುದು ಅತ್ಯಂತ ಅಗತ್ಯವಾಗಿದೆ. ಪೌಷ್ಟಿಕ ಆಹಾರದ ಕೊರತೆಯಿಂದ ದೇಹದ ರೋಗ ನಿರೋಧಕ ಶಕ್ತಿ ಕುಂಠಿತವಾಗುತ್ತದೆ. ಇದರ ಪರಿಣಾಮವಾಗಿ ವಿವಿಧ ಆರೋಗ್ಯ ಸಮಸ್ಯೆಗಳು ಉಂಟಾಗುವ ಸಾಧ್ಯತೆ ಹೆಚ್ಚಾಗುತ್ತದೆ. ಹೀಗಾಗಿ ದಿನನಿತ್ಯದ ಆಹಾರ ಪದ್ಧತಿಯಲ್ಲಿ ಹಸಿರು ತರಕಾರಿಗಳು, ಹಣ್ಣುಗಳು, ಧಾನ್ಯಗಳು ಮತ್ತು ಪ್ರೋಟೀನ್‌ಯುಕ್ತ ಆಹಾರಗಳನ್ನು ಸೇರಿಸಿಕೊಳ್ಳುವುದು ಆರೋಗ್ಯ ಕಾಪಾಡಿಕೊಳ್ಳಲು ಸಹಕಾರಿಯಾಗಿದೆ.

**ವಿಶ್ವ ಪೌಷ್ಟಿಕಾಂಶ ದಿನಾಚರಣೆ**

ಈ ಸಂದರ್ಭದಲ್ಲಿ ಭಾಲ್ಕಿಯ ಅನುಭವ ವೆಲ್‌ನೆಸ್ ಸೆಂಟರ್ ವತಿಯಿಂದ ಮೇ 28ರಿಂದ 30ರವರೆಗೆ ಮೂರು ದಿನಗಳ ಉಚಿತ ಆರೋಗ್ಯ ತಪಾಸಣೆ ಹಾಗೂ ಪೌಷ್ಟಿಕಾಂಶ ಸಲಹೆ ಶಿಬಿರವನ್ನು ಆಯೋಜಿಸಲಾಗಿದೆ. ಈ ಶಿಬಿರದಲ್ಲಿ ಸಾರ್ವಜನಿಕರಿಗೆ ಆರೋಗ್ಯ ಜಾಗೃತಿ ಮೂಡಿಸುವ ಉದ್ದೇಶದಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.



**ಆರೋಗ್ಯಕರ ಜೀವನಕ್ಕೆ ಆರೋಗ್ಯವೇ ಮೂಲಾಧಾರ. ಮೇ 28 ರಿಂದ 30ರವರೆಗೆ ಮೂರು ದಿನಗಳ ಉಚಿತ ಆರೋಗ್ಯ ತಪಾಸಣಾ, ಪೌಷ್ಟಿಕಾಂಶ ಸಲಹೆ ಶಿಬಿರ ನಡೆಯಲಿದೆ. ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಹಿತ ದೃಷ್ಟಿಯಿಂದ ಸಮಯವನ್ನು ಮೀಸಲಿಡಬೇಕು ಆರೋಗ್ಯವೇ ಮಹಾಭಾಗ್ಯ.**

**–ಪ್ರಿಯಾ ಓಂ ಪಾಟೀಲ್, ತರಬೇತಿದಾರರು ಅನುಭವ ವೆಲ್ ನೆಸ್ ಕೇಂದ್ರ, ಭಾಲ್ಕಿ**

ಶಿಬಿರದಲ್ಲಿ ಉಚಿತ ಬಿಎಂಐ ತಪಾಸಣೆ, ದೇಹದ ಕೊಬ್ಬಿನ ಪ್ರಮಾಣ ವಿಶ್ಲೇಷಣೆ, ಪೌಷ್ಟಿಕಾಂಶ ಮಾರ್ಗದರ್ಶನ ಹಾಗೂ ಆರೋಗ್ಯಕರ ಉಪಹಾರದ ಪರಿಚಯ ನೀಡಲಾಗುತ್ತದೆ. ಜೊತೆಗೆ ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಪೌಷ್ಟಿಕಾಂಶ ತರಬೇತಿಯನ್ನೂ ಒದಗಿಸಲಾಗುತ್ತದೆ. ಲೆಕ್ಚರರ್ ಕಾಲೋನಿಯ ಹನುಮಾನ್ ದೇವಸ್ಥಾನದ ಹಿಂಭಾಗದಲ್ಲಿರುವ ಅನುಭವ ವೆಲ್‌ನೆಸ್ ಸೆಂಟರ್‌ನಲ್ಲಿ ಪ್ರತಿದಿನ ಬೆಳಿಗ್ಗೆ 8.30ರಿಂದ 10 ಗಂಟೆಯವರೆಗೆ ಈ ಶಿಬಿರ ನಡೆಯಲಿದೆ. 12 ವರ್ಷಗಳ ಅನುಭವ ಹೊಂದಿರುವ ಆರೋಗ್ಯ ಮತ್ತು ಜೀವನಶೈಲಿ ಮಾರ್ಗದರ್ಶಕರಾದ ಓಂ ಪ್ರಕಾಶ್ ಪಾಟೀಲ್ ಹಾಗೂ ಪ್ರಿಯಾ ಓಂ ಪಾಟೀಲ್ ಶಿಬಿರದಲ್ಲಿ ಮಾರ್ಗದರ್ಶನ ನೀಡಲಿದ್ದಾರೆ.

"ಉತ್ತಮ ಪೌಷ್ಟಿಕಾಂಶವೇ ಉತ್ತಮ ಆರೋಗ್ಯದ ರಹಸ್ಯ" ಎಂಬ ಸಂದೇಶದೊಂದಿಗೆ ಈ ಕಾರ್ಯಕ್ರಮವು ಜನರಲ್ಲಿ ಆರೋಗ್ಯ ಜಾಗೃತಿ ಮೂಡಿಸಿ ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಆರೋಗ್ಯಕರ ಸಮಾಜ ದಿಂದ ಆರೋಗ್ಯಕರ ಜೀವನ ನಡೆಸಬಹುದು ಎಂಬ ಗುರಿಯೊಂದಿಗೆ ಆದರ್ಶ ದಂಪತಿಗಳು ಶ್ರಮಿಸುತ್ತಿದ್ದಾರೆ.

# ಬದುಕಿನ ಸಂಘರ್ಷದಲ್ಲಿ ಸಂವೇದನಾಶೀಲ ಮನಸ್ಸು ಮತ್ತು ನಂಬಿಕೆ



**ಭೋಗ–ಐಭೋಗ**
**● ವೀರಣ್ಣ ಕಲಕೇರಿ**
**ಕೆಂಭಾವಿ**

ಕಲ್ಲು ಕಲ್ಲುಗಳ ಮಧ್ಯೆ ಮೃದುತ್ವಕ್ಕೆ ಎಲ್ಲಿ ನೆಲೆ ಎನ್ನುವಂತೆ, ಇಂದಿನ ಹೋರಾಟದ ಬದುಕಿನಲ್ಲಿ ಸ್ವಾರ್ಥದ ಮನೋಭಾವಗಳೇ ಎದ್ದು ಕಾಣುತ್ತಿದ್ದಾಗ, 'ನಂಬಿಕೆ' ಎನ್ನುವ ಪದ ಇಂದು ಕೇವಲ ಶಬ್ದಕ್ಕಷ್ಟೇ ಸೀಮಿತವಾಗಿದೆ ಎಂದೆನಿಸದೆ ಇರದು. ಅದು ಬದುಕಿನಲ್ಲಿ ಗೌಣವಾಗುತ್ತಿದೆ. ಇಂತಹ ಕಠಿಣ ಸನ್ನಿವೇಶದಲ್ಲಿ, ಸಂವೇದನಾಶೀಲ ಮನಸ್ಸುಗಳು ಸ್ವಯಂಪ್ರೇರಿತವಾಗಿ ಗಟ್ಟಿಗೊಳ್ಳಬೇಕಾದ ಅನಿವಾರ್ಯತೆ ಇದೆ.

ಇಂದು ಅನೇಕರು ಇನ್ನೊಬ್ಬರಿಗೆ ತೊಂದರೆ–ಯಾದರೂ ಅಡ್ಡಿಯಿಲ್ಲ ತಮ್ಮ ಏಳಿಗೆಯನ್ನಷ್ಟೇ ಬಯಸುವ ಮನಸ್ಥಿತಿಯಲ್ಲಿದ್ದಾರೆ. ನೀವು ಎಷ್ಟೇ ಸಹಾಯ ಹಸ್ತ ಚಾಚಿದರೂ, ಅದು ಆ ಕ್ಷಣದ ಉಪಕಾರವಾಗಿ ಉಳಿಯುತ್ತದೆಯೇ ಹೊರತು ಶಾಶ್ವತವಾಗಿ ನೆನಪಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ನಿಜವಾದ ಸ್ನೇಹಕ್ಕೆ ಸಿಗಬೇಕಾದ ನ್ಯಾಯ ಸಿಗುವುದು ಕಠಿಣ. ಸ್ವಾರ್ಥದ ತಳಹದಿಯ ಮೇಲೆ ಸ್ನೇಹ ಮುಂದುವರಿದಾಗ, ಅಲ್ಲಿ ಪ್ರಾಮಾಣಿಕತೆ ಎಂಬ ಹೂವು ಅರಳುತ್ತದೆ ಎಂದು ನಿರೀಕ್ಷಿಸುವುದು ನಮ್ಮ ತಪ್ಪು ಕಲ್ಪನೆಯಾಗಬಹುದು. ಸಂಶಯದ ಕಣ್ಣಿನಿಂದ ನೋಡುತ್ತಾ, ಕೈಯಲ್ಲಿ ಮೋಸದ ಕಲ್ಲನ್ನು ಹಿಡಿದುಕೊಂಡೇ ಸಹವಾಸ ಮಾಡುವ ಇಂದಿನ ಸಮಾಜದಲ್ಲಿ 'ನಂಬಿ ಕೆಟ್ಟವರ' ಕಥೆಗಳೇ ಹೆಚ್ಚು ಕೇಳಿಬರುತ್ತಿವೆ. ಹಾಗಾಗಿ ನಮ್ಮ ಬದುಕಿನ ಪ್ರಯಾಣದ ಅವಲೋಕನದಲ್ಲಿ, ನಾವು ಭೇಟಿಯಾಗುವ ಮತ್ತು ಒಡನಾಡುವ ಸ್ನೇಹಿತರನ್ನು ಪ್ರಮುಖವಾಗಿ ನಾಲ್ಕು ವಿಧಗಳಲ್ಲಿ ವಿಂಗಡಿಸಿ ನೋಡಬಹುದು. ಈ ವಿಭಾಗಗಳಿಂದ ಅವರ ಸ್ವಭಾವಗಳು ನಮಗೆ ಇನ್ನಷ್ಟು ಸ್ಪಷ್ಟವಾಗಬಹುದು.

**ಒಳ್ಳೆಯವರು:** ಇವರು ಸದಾ ನಮ್ಮ ಒಳಿತನ್ನು ಬಯಸುವವರು. ನಾವು ಯಶಸ್ಸು ಗಳಿಸಿದಾಗ ಪ್ರಾಮಾಣಿಕವಾಗಿ ಖುಷಿಪಡುವರು. ಕಷ್ಟದಲ್ಲಿದ್ದಾಗ ತಕ್ಕಮಟ್ಟಿಗೆ ಬೆನ್ನೆಲುಬಾಗಿ ನಿಲ್ಲುತ್ತಾರೆ, ಸಹಕಾರಿಗಳಾಗಿಯೂ ಇರುತ್ತಾರೆ. ಇವರ ಒಡನಾಟ ನಮ್ಮ ಬದುಕಿಗೆ ಸದಾ ಧನಾತ್ಮಕ ಶಕ್ತಿಯನ್ನು ನೀಡುತ್ತದೆ.

**ಸಾಮಾನ್ಯರು:** ಇವರು ಕೇವಲ 'ಹಾಯ್, ಬೈ' ಮಟ್ಟಿಗೆ ಇರುವವರು. ಹೆಚ್ಚೆಂದರೆ, ಕೆಲಸದ ನಿಮಿತ್ತ ಆಗಾಗ ಜೊತೆಗಿರುವವರು. ಇವರೊಂದಿಗೆ ಯಾವುದೇ ರೀತಿಯ ಆಳವಾದ ಭಾವನಾತ್ಮಕ ಬಂಧವಿರುವುದಿಲ್ಲ. ಸಂದರ್ಭ ಮುಗಿದಂತೆ ಸಂದರ್ಭಾನುಸಾರ ಇವರು ದೂರಾಗಬಹುದು, ಆದರೆ ಇವರಿಂದ ಯಾವುದೇ ಕೆಡುಕು ಸಂಭವಿಸುವುದು ಬಹಳ ಕಡಿಮೆ.

**ಒಳ್ಳೆಯರಲ್ಲದವರು:** ಇವರು ಕೇವಲ ಸಮಯ ಸಾಧಕರು. ಇವರನ್ನು 'ಗೋಮುಖ ವ್ಯಾಘ್ರರು' ಅಂದರೂ ಅಡ್ಡಿಯಿಲ್ಲ. ತಮ್ಮ ಸ್ವಾರ್ಥಕ್ಕಾಗಿ ಮಾತ್ರ ನಮ್ಮನ್ನು ಬಳಸಿಕೊಳ್ಳುವ ಗುಣ ಹೊಂದಿದವರು. ಒಳ್ಳೆಯ ಕಾಲವಿದ್ದಾಗ, ಅನುಕೂಲಗಳಿದ್ದಾಗ ಮಾತ್ರ ಇವರು ನಮ್ಮ ಸುತ್ತಮುತ್ತ ಸುಳಿಯುತ್ತಾರೆ. ಆದರೆ ಕಷ್ಟದ ಸುಳಿ ಎದುರಾದ ತಕ್ಷಣ ಮಾಯವಾಗುತ್ತಾರೆ. ಕೆಲವೊಮ್ಮೆ ಬೆನ್ನಿನ ಹಿಂದೆ ಚೂರಿ ಹಾಕುವ, ಅಪಪ್ರಚಾರ ಮಾಡುವ, ಸ್ನೇಹದ ಸತ್ಸಂಬಂಧಗಳಲ್ಲಿ ಬಿರುಕು ಮೂಡಿಸಿ ಕಲುಷಿತ ವಾತಾವರಣ ನಿರ್ಮಿಸಿ, ತಾವು ಸಾಚಾಗಳಂತೆ ತೋರಿಸಿಕೊಳ್ಳುವ ಅಥವಾ ನಮ್ಮ ಪ್ರಗತಿಯನ್ನು ಕಂಡು ಒಳಗೊಳಗೇ ಅಸೂಯೆಪಡುವ ಕೆಳಮಟ್ಟದ ಗುಣ ಇವರದ್ದಾಗಿರುತ್ತದೆ. ತಮ್ಮ ಕೆಲಸ ಮುಗಿದ ತಕ್ಷಣ, ನಮ್ಮನ್ನು ಕತ್ತಲಿಗೆ ತಳ್ಳಿ ಮುನ್ನಡೆಯಲು ಇವರು ಹಿಂಜರಿಯುವುದಿಲ್ಲ. ಇಂತಹ ಸ್ವಾರ್ಥ ಸಾಧಕರು ಮುಖಕ್ಕೊಂದು ಮುಖವಾಡ ಧರಿಸಿ ಹತ್ತಿರವಾಗಿರುವುದರಿಂದ ಇವರನ್ನು ಗುರುತಿಸುವುದು ತಕ್ಷಣಕ್ಕೆ ಸುಲಭದ ಮಾತಲ್ಲ. ಆದರೆ ಸಮಯ ಮತ್ತು ಸಂದರ್ಭಗಳು ಇವರ ನಿಜವಾದ ಬಣ್ಣವನ್ನು ಬಯಲು ಮಾಡುತ್ತವೆ. ಇಂಥವರಿಂದ ಸಂವೇದನಾಶೀಲ ಮನಸ್ಸುಗಳು ತೀವ್ರವೇದನೆಗೊಳಗಾಗಬೇಕಾಗುತ್ತದೆ.

**ಆತ್ಮೀಯರು:** ಇಂತಹ ಅಪರೂಪದ ಜೀವಗಳು ಸ್ನೇಹಿತರಿಗಿಂತಲೂ ಮಿಗಿಲಾಗಿ ನಮ್ಮ ಕುಟುಂಬದ ಸದಸ್ಯರಂತೆ, ನಮ್ಮ ಆತ್ಮದ ಭಾಗದಂತೆ ಇರುತ್ತಾರೆ. ಇವರಲ್ಲಿ ಯಾವುದೇ ಮುಖವಾಡ ಇರುವುದಿಲ್ಲ. ನಮ್ಮ ತಪ್ಪುಗಳನ್ನು ಮುಖಾಮುಖಿ ಖಂಡಿಸುವ, ನಮ್ಮ ನೋವನ್ನು ನಾವು ಹೇಳದೆಯೇ ಅರ್ಥಮಾಡಿಕೊಳ್ಳುವ ನಿಷ್ಕಲ್ಮಶ ಗುಣ ಇವರದ್ದು.

ಜೀವನದ ವಿಭಿನ್ನ ಹಂತಗಳಲ್ಲಿ ಮೊದಲ ಮೂರು ವಿಧದ ಸ್ನೇಹಿತರು ಸರಳ ಮತ್ತು ಸಹಜವಾಗಿ ಎದುರಾಗುವರು. ಆದರೆ ನಾಲ್ಕನೆಯವರಾದ 'ಆತ್ಮೀಯರು' ಎದುರಾಗುವುದು ಅತ್ಯಂತ ಅಪರೂಪ. ಬದುಕಿನ ನೆಮ್ಮದಿಗೆ ಇಂತಹ ಆತ್ಮೀಯರನ್ನು ಜೀವನಪೂರ್ತಿ ಉಳಿಸಿಕೊಳ್ಳುವುದು ಎಷ್ಟು ಮುಖ್ಯವೋ, ಮೋಸಕ್ಕೆ ಒಳಗಾಗದಂತೆ ಆ 'ಒಳ್ಳೆಯರಲ್ಲದವರಿಂದ' ಸೂಕ್ತ ಅಂತರ ಕಾಯ್ದುಕೊಳ್ಳುವುದು ಅಷ್ಟೇ ಮುಖ್ಯವಾಗುತ್ತದೆ.

ಆದರೆ, ಈ ವಿವೇಚನೆ ಇಲ್ಲದೆ ಮುಖವಾಡ ಧರಿಸಿದವರನ್ನು ಅತಿಯಾಗಿ ನಂಬಿದಾಗ ಬದುಕು ಹೇಗೆ ಕಷ್ಟಕ್ಕೀಡಾಗುತ್ತದೆ ಎಂಬುದಕ್ಕೆ ಇತಿಹಾಸದಲ್ಲೂ, ಇಂದಿನ ಸಮಾಜದಲ್ಲೂ ಸಾಕಷ್ಟು ಸಾಕ್ಷಿಗಳಿವೆ. ಇದು ಹಲವರ ಅನುಭವ ಸತ್ಯ ಕೂಡ ಎಂದೂ ಹೇಳಬಹುದು.

**ಹೀಗೊಂದು ಸಣ್ಣ ಕಥೆ;** ಒಂದು ಹಳ್ಳಿಯಲ್ಲಿ ಶಿವಪ್ಪ ಎಂಬ ಒಬ್ಬ ಪ್ರಾಮಾಣಿಕ ವ್ಯಕ್ತಿ ಇದ್ದ. ಆತ ಸಂವೇದನಾಶೀಲ ಮೃದು ಸ್ವಭಾವದ ವ್ಯಕ್ತಿಯಾಗಿದ್ದ. ಯಾರಿಗಾದರೂ ಕಷ್ಟ ಎಂದರೆ ಸುಮ್ಮನೆ ನೋಡದೆ ತನ್ನಲ್ಲಿದ್ದುದರಲ್ಲಿ ಕೊಟ್ಟು



ಸಹಾಯ ಮಾಡುತ್ತಿದ್ದ. ಹೀಗಿರಬೇಕಾದರೆ! ಅದೇ ಊರಿನಲ್ಲಿ ರಂಗಣ್ಣ ಎಂಬ ಚಾಣಾಕ್ಷ ವ್ಯಾಪಾರಿ ಶಿವಪ್ಪನ ಗೆಳೆಯನಾಗಿದ್ದ. ರಂಗಣ್ಣನಿಗೆ "ತಾನು ಹೇಗಾದರೂ ಮಾಡಿ ಬೆಳೆಯಬೇಕು, ಅದಕ್ಕೆ ಬೇರೆಯವರು ಏಣಿಯಾಗಬೇಕು" ಎಂಬ ಸ್ವಾರ್ಥ ಮನೋಭಾವ. (ಅವನು ಮೇಲಿನ ವರ್ಗೀಕರಣದ ಪ್ರಕಾರ ಕಪಟ ಮುಖವಾಡ ಧರಿಸಿದ 'ಒಳ್ಳೆಯರಲ್ಲದವನ' ಸಾಲಿಗೆ ಸೇರಿದವನು.)

**ಸ್ವಾರ್ಥದ ಕಲ್ಲುಗಳ ನಡುವೆ**

ಒಮ್ಮೆ ರಂಗಣ್ಣನ ವ್ಯಾಪಾರದಲ್ಲಿ ಭಾರಿ ನಷ್ಟವಾಯಿತು. ಬೀದಿಗೆ ಬರುವ ಪರಿಸ್ಥಿತಿ ಬಂದಾಗ ಅವನು ಗೆಳೆಯನಾದ ಶಿವಪ್ಪನ ಬಳಿ ಹೋಗಿ, "ಗೆಳೆಯ, ನನ್ನನ್ನು ಈ ಸಂಕಷ್ಟದಿಂದ ಪಾರು ಮಾಡು, ಲಾಭ ಬಂದ ತಕ್ಷಣ ನಿನ್ನ ಹಣ ಹಿಂತಿರುಗಿಸುತ್ತೇನೆ" ಎಂದು ಕಣ್ಣೀರಿಟ್ಟ. ಶಿವಪ್ಪನಿಗೆ ಗೆಳೆಯನ ನೋವನ್ನು ಕಣ್ಣಾರೆ ನೋಡಲಾಗದೆ, ಅವನನ್ನು ತನ್ನವನೆಂದು ನಂಬಿ ತನ್ನ ಉಳಿತಾಯದ ಹಣವನ್ನೆಲ್ಲಾ ನೀಡಿ ಉಪಕರಿಸಿದ. ನಾಲ್ಕಾರು ವರ್ಷಗಳಲ್ಲಿ ರಂಗಣ್ಣ ಮತ್ತೆ ಸ್ಥಿತಿವಂತನಾದ. ಆದರೆ ಶಿವಪ್ಪನಿಗೆ ಹಣ ಹಿಂತಿರುಗಿಸುವ ಮಾತು ಬಂದಾಗ ಅವನು ಮುಖ ತಿರುಗಿಸಿದ. "ನಾನು ಯಾವಾಗ ನಿನ್ನ ಬಳಿ ಹಣ ಕೇಳಿದ್ದೆ? ಸಾಕ್ಷಿ ಇದೆಯೇ?" ಎಂದು ನಗುಮುಖದ ನಯವಂತಿಕೆಯಲ್ಲೇ ಸಂಚು ಹೂಡಿ, ಸಮಾಜದ ಮುಂದೆ ಶಿವಪ್ಪನನ್ನೇ ಸುಳ್ಳುಗಾರನನ್ನಾಗಿ ಮಾಡಿದ. (ಇಂಥವರಿಗೆ ಆ ಕೌಶಲ್ಯ ಸಹಜವಾಗಿ ಒಲಿದಿರುತ್ತದೆ). ಆಗ ಶಿವಪ್ಪನಿಗೆ ಜಗತ್ತೇ ಶೂನ್ಯವಾಯಿತು. ನಿಸ್ವಾರ್ಥವಾಗಿ ಸಹಾಯ ಮಾಡಿದ ನನಗೆ ದ್ರೋಹದ ಉಡುಗೊರೆ ಸಿಕ್ಕಿತಲ್ಲಾ ಎಂದು ಬೇಸರಗೊಂಡನು. ಶಿವಪ್ಪ ಇಡೀ ಸಮಾಜವನ್ನೇ ಸಂಶಯದ ಕಣ್ಣಿನಿಂದ ನೋಡತೊಡಗಿದ. ಸಮಾಜವೇ ಕೆಟ್ಟದ್ದು ಎಂಬ ಭಾವನೆ ಅವನಲ್ಲಿ ಮೂಡಿತು.

ಒಂದು ದಿನ ಹೀಗೆ ಬೇಸರದಿಂದ ಊರ ಹತ್ತಿರದ ಗುಡ್ಡದ ಮೇಲೆ ಕುಳಿತಿದ್ದಾಗ, ಅವನಿಗೆ ಅಪರೂಪದ ಒಂದು ದೃಶ್ಯ ಕಂಡಿತು. ಅಲ್ಲಿ ದೊಡ್ಡ ದೊಡ್ಡ ಕಲ್ಲುಗಳ ನಡುವಿನ ಸಣ್ಣ ಬಿರುಕಿನಲ್ಲಿ ಪುಟ್ಟದೊಂದು ಗಿಡ ಬೆಳೆದು ಹೂವು ಅರಳಿಸಿತ್ತು. ಆ ಕಲ್ಲುಗಳು ಎಷ್ಟೇ ಗಟ್ಟಿಯಾಗಿದ್ದರೂ, ಆ ಮೃದುವಾದ ಗಿಡ ಬೆಳೆಯುತ್ತಾ ಹೂವು ಅರಳಿಸಿ ತನ್ನ ಅಸ್ತಿತ್ವವನ್ನು ಬಿಟ್ಟುಕೊಟ್ಟಿರಲಿಲ್ಲ. ಅದನ್ನು ನೋಡಿದ ಶಿವಪ್ಪನಿಗೆ ಅಚ್ಚರಿ ಮೂಡಿ ಜ್ಞಾನೋದಯವಾಯಿತು. "ಸಮಾಜದಲ್ಲಿ ಸ್ವಾರ್ಥದ ಕಲ್ಲುಗಳು ಎಷ್ಟೇ ಇರಲಿ, ನನ್ನೊಳಗಿನ ಸಜ್ಜನಿಕೆ ಮತ್ತು ಪ್ರಾಮಾಣಿಕತೆಯ ಹೂವು ಅರಳುತ್ತಲೇ ಇರಬೇಕು. ರಂಗಣ್ಣ ತನ್ನ ಗುಣವನ್ನು ತೋರಿಸಿದ, ನಾನು ನನ್ನ ಸಜ್ಜನಿಕೆಯನ್ನು ಬಿಡಬಾರದು" ಎಂದು ನಿರ್ಧರಿಸಿದ. ಅನಿವಾರ್ಯವಾಗಿ ತಾಳ್ಮೆಯಿಂದಲೇ ಬದುಕನ್ನು ಮುಂದುವರಿಸಿದನು. ಕಾಲಾನಂತರದಲ್ಲಿ ರಂಗಣ್ಣನ ಮೋಸವು ತಾನಾಗಿಯೇ ಎಲ್ಲರಿಗೂ ತಿಳಿಯಿತು.

ಹೀಗೆ ಸ್ವಾರ್ಥಿಗಳ ನಗುಮುಖದ ಹಿಂದಿರುವ ಸಂಚಿನ ಜಾಲ ಅರಿವಿಗೆ ಬರುವಷ್ಟರಲ್ಲಿ ಕಾಲ ಮಿಂಚಿ ಹೋಗಿರುತ್ತದೆ. ಅಂತಹ ಸಂದರ್ಭದಲ್ಲಿ ಯಾರನ್ನು ನಂಬಬೇಕು, ಯಾರನ್ನು ಬಿಡಬೇಕು ಎಂದು ತಿಳಿಯದೆ ಇಡೀ ಸಮಾಜವೇ ಕೆಟ್ಟದಾಗಿ ಕಾಣುವುದು ಸಹಜ. ಇಂತಹ ಸಂದರ್ಭದಲ್ಲಿ ನಿಸ್ವಾರ್ಥ ಮನಸ್ಸಿಗೆ ದ್ರೋಹದ ಉಡುಗೊರೆ ಸಿಕ್ಕಾಗ, ಈ ಜಗತ್ತೇ ಭಾರವೆನಿಸಿಬಿಡುತ್ತದೆ. ಸಂವೇದನಾಶೀಲ ಮನಸ್ಸುಗಳು ಸಮಾಜದಿಂದ ವಿಮುಖವಾಗಲು ಇಂತಹ ಸನ್ನಿವೇಶಗಳು ಮುಖ್ಯ ಕಾರಣವಾಗಬಹುದು.

ಆದರೂ ಆತ್ಮಸ್ಥೈರ್ಯ ಬಿಡದೆ ಸಾಗುವುದೇ ಬದುಕಿನ ಹೆದ್ದಾರಿ. ಏಕೆಂದರೆ ಪ್ರಾಮಾಣಿಕ ವ್ಯಕ್ತಿತ್ವದ ಮನಸಾಕ್ಷಿ ಎಂದಿಗೂ ಕೆಟ್ಟ ಹಾದಿಯನ್ನು ಒಪ್ಪದು. ಗಾಢ ಕತ್ತಲೆಯ ನಂತರ ಬೆಳಕು ಬರುವುದು ಹೇಗೆ ನಿಶ್ಚಿತವೋ, ಹಾಗೆಯೇ ಕಷ್ಟದ ಕಾಲದಲ್ಲಿ ತಾಳ್ಮೆಯೇ ನಮಗೆ ಬೆಳಕಾಗುತ್ತದೆ ಎಂಬ ನಂಬಿಕೆ ಸಜ್ಜನರದಾಗಿರುತ್ತದೆ. ಮುಖವಾಡ ಧರಿಸಿದ ಜಗತ್ತಿನಲ್ಲಿ ನಮ್ಮೊಳಗಿನ ವಿವೇಕ ಮತ್ತು ಸಂವೇದನೆಯನ್ನು ಉಳಿಸಿಕೊಂಡು ಮುನ್ನಡೆಯುವುದೇ ನಾವು ಬದುಕಿಗೆ ನೀಡಬಹುದಾದ ಗೌರವವಲ್ಲವೇ?.

ಈ ಪ್ರಾಮಾಣಿಕತೆ ಮತ್ತು ಸ್ವಾರ್ಥದ ನಡುವಿನ ಸಂಘರ್ಷ ಇಂದು ನಿನ್ನೆಯದಲ್ಲ, ಅದು ಇತಿಹಾಸದುದ್ದಕ್ಕೂ ನಡೆದುಕೊಂಡು ಬಂದಿರುವ ನಿರಂತರ ಪ್ರಕ್ರಿಯೆ. ಜಗತ್ತಿನಲ್ಲಿ ನಿಸ್ವಾರ್ಥವಾಗಿ ಸಹಾಯ ಮಾಡುವ ಶಿವಪ್ಪನಂತಹ ಸಜ್ಜನರು ಎಷ್ಟು ಜಾಗೃತರಾಗಿದ್ದರೂ, ತಮ್ಮ ಏಳಿಗೆಗಾಗಿ ಇತರರನ್ನೇ ಏಣಿಯನ್ನಾಗಿ ಮಾಡಿಕೊಳ್ಳುವ ರಂಗಣ್ಣನಂತಹ ಕಪಟಿಗಳೂ ಅಷ್ಟೇ ಚಾಣಾಕ್ಷತೆಯಿಂದ ಹೊಂಚು ಹಾಕುತ್ತಿರುತ್ತಾರೆ. ಇಂತಹ ನಂಬಿಕೆ ದ್ರೋಹದ ಸನ್ನಿವೇಶಗಳು ಎದುರಾದಾಗ ಸಮಾಜದ ಮೇಲಿನ ನಂಬಿಕೆಯೇ ಹೊರಟುಹೋಗುವುದು ಸಹಜ. ಆದರೆ, ಕಠಿಣ ಕಲ್ಲುಗಳ ಸೀಳಿನ ನಡುವೆಯೂ ಅರಳಿ ನಗುವ ಪುಟ್ಟ ಹೂವಿನಂತೆ, ಎಂತಹ ಕ್ರೂರ ಪರಿಸ್ಥಿತಿಯಲ್ಲೂ ತನ್ನ ಸಜ್ಜನಿಕೆಯನ್ನು ಬಿಟ್ಟುಕೊಡದ ಮಹಾತ್ಮರ ಉದಾಹರಣೆಗಳೂ ಇತಿಹಾಸದ ಪುಟಗಳಲ್ಲಿ ನಮಗೆ ಪ್ರೇರಣೆಯಾಗಿ ಸಿಗುತ್ತವೆ.

**ಅಮರತ್ವ ಪಡೆದ ಸಾಕ್ರಟೀಸ್ ತತ್ವ:** ಜಗತ್ತಿನ ಶ್ರೇಷ್ಠ ಚಿಂತಕ ಸಾಕ್ರಟೀಸ್ ನ ಬದುಕು ಮತ್ತು ಅವನ ಕೊನೆಯ ಕ್ಷಣಗಳು ಮಾನವಕುಲಕ್ಕೆ ಅತ್ಯಂತ ಮೌಲ್ಯಯುತವಾದ ಸಂದೇಶವನ್ನು ನೀಡುತ್ತವೆ. ಆ ಸಂದರ್ಭದಲ್ಲಿ ಸಾಕ್ರೇಟೀಸ್ ಯುವಕರನ್ನು ದಾರಿತಪ್ಪಿಸುತ್ತಿದ್ದಾನೆ ಮತ್ತು ದೇವರಿಗೆ ಅವಮಾನ ಮಾಡಿದ್ದಾರೆಂಬ ಸುಳ್ಳು ಆರೋಪಗಳ ಮೇಲೆ ಮರಣದಂಡನೆ ವಿಧಿಸಲಾಯಿತು. ಸಾಕ್ರಟೀಸ್‌ಗೆ ಮರಣದಂಡನೆ ಜಾರಿಯಾದಾಗ, ಅಂದಿನ ಅಥೆನ್ಸ್ ನಗರದ ಕಪಟ ರಾಜಕಾರಣಿಗಳು ಮತ್ತು ಸ್ವಾರ್ಥಿ ಪ್ರಭಾವಿಗಳು ನಿಟ್ಟುಸಿರು ಬಿಟ್ಟಿದ್ದರಂತೆ. ಏಕೆಂದರೆ ಆ ಸಂದರ್ಭದಲ್ಲಿ ವ್ಯವಸ್ಥೆಯನ್ನು ಪ್ರಶ್ನಿಸುವ ಜಾಗೃತ ಯುವಕರ ತಂಡ ಸಾಕ್ರಟೀಸ್ ಜೊತೆಗಿತ್ತು. ಯುವಕರಲ್ಲಿ ವೈಚಾರಿಕತೆ ಜಾಗೃತಗೊಳಿಸುತ್ತಿದ್ದ ಹಾಗಾಗಿ ಸಾಕ್ರೇಟಿಸ್ ಗೆ ಕೊನೆಗಾಲ ಬಂತು, ಅಪಾಯಕಾರಿ ವ್ಯಕ್ತಿಯೊಬ್ಬನ ಕಾಟ ಇಂದಿಗೆ ತಪ್ಪಿತು, ತಮ್ಮ ಅಧಿಕಾರ ಮತ್ತು ಸುಳ್ಳಿನ ಸಾಮ್ರಾಜ್ಯಕ್ಕೆ ಎದುರಾಗಿದ್ದ ಬಹುದೊಡ್ಡ ಕಂಟಕ ದೂರವಾಯಿತೆಂದು ಎಂದು ಹಲವರು ಒಳಗೊಳಗೇ ಸಂಭ್ರಮಿಸಿದ್ದರಂತೆ.

ಆದರೆ ಇತಿಹಾಸದ ಕ್ರೂರ ಸತ್ಯವೆಂದರೆ, ಕಪಟಿಗಳ ಇಂತಹ ಸಂಭ್ರಮಗಳು ಯಾವಾಗಲೂ ಅತ್ಯಂತ ಅಲ್ಪಾಯುಷಿಯಾಗಿರುತ್ತವೆ. ಕಾಲ ಉರುಳಿದಂತೆ ಸಮಾಜಕ್ಕೆ ತಾವು ಮಾಡಿದ ಮಹಾಪರಾಧದ ಅರಿವಾಗತೊಡಗಿತು. ಸಾಕ್ರಟೀಸ್‌ನನ್ನು ಭೌತಿಕವಾಗಿ ಕೊಂದ ಅಥೆನ್ಸ್ ನಗರ, ಮುಂದೆ ಜಗತ್ತಿನಾದ್ಯಂತ ಪ್ರಸಿದ್ಧಿಯಾಗಿದ್ದು ಅದೇ ಸಾಕ್ರಟೀಸ್‌ನ ತತ್ವಗಳಿಂದ ಎಂಬುದು ಬಹುದೊಡ್ಡ ಇತಿಹಾಸವಲ್ಲವೇ? ಕಪಟಿಗಳು ಮತ್ತು ಸ್ವಾರ್ಥಿಗಳು ಸತ್ಯದ ಧ್ವನಿಯನ್ನು ತಾತ್ಕಾಲಿಕವಾಗಿ ಹತ್ತಿಕ್ಕಬಹುದು, ಆದರೆ ಸತ್ಯದ ಹೂವು ಒಮ್ಮೆ ಅರಳಿದರೆ, ಅದರ ಸುಗಂಧವನ್ನು ಇತಿಹಾಸದ ಪುಟಗಳಿಂದ ಅಳಿಸಲು ಯಾರಿಂದಲೂ ಸಾಧ್ಯವಿಲ್ಲ ಎಂಬುದಕ್ಕೆ ಸಾಕ್ರಟೀಸ್‌ನ ಬದುಕೇ ಸಾಕ್ಷಿಯಾಗಿದೆ ಎನ್ನಬಹುದು.

ಇದರಿಂದ ಇಡೀ ಮಾನವ ಸಮಾಜವು ಪಡೆದುಕೊಳ್ಳಬೇಕಾದ ಪರಮ ಜ್ಞಾನವೊಂದೇ ಬೇರೆಯವರು ತಮ್ಮ ಸ್ವಾರ್ಥಕ್ಕಾಗಿ ಮುಖವಾಡ ಧರಿಸಿ ದ್ರೋಹ ಬಗೆದರೆ, ಅದು ಅವರ ಗುಣವನ್ನು ತೋರಿಸುತ್ತದೆ. ಆದರೆ ಅದನ್ನೇ ನೆಪವಾಗಿಟ್ಟುಕೊಂಡು ನಾವು ನಮ್ಮ ಸದ್ಗುಣಗಳನ್ನು, ಪ್ರಾಮಾಣಿಕತೆಯನ್ನು ಬಿಟ್ಟುಕೊಡಬಾರದು. ನಮ್ಮ ಸುತ್ತಲಿನ ಸಮಾಜ ಎಷ್ಟೇ ಕಪಟವಾಗಿರಲಿ, ಸ್ವಾರ್ಥಿಗಳಿಂದ ತುಂಬಿರಲಿ, ನಮ್ಮೊಳಗಿನ ಸಜ್ಜನಿಕೆಯ ತತ್ವದ ಸಸಿ ಎಂದಿಗೂ ಬಾಡಬಾರದು. ಕಲ್ಲುಗಳ ನಡುವೆಯೂ ಸದ್ದಿಲ್ಲದೆ ಅರಳಿ ನಗುವ ಪುಟ್ಟ ಹೂವಿನಂತೆ, ಎಂತಹ ಕಠಿಣ ಪರಿಸ್ಥಿತಿಯಲ್ಲೂ ನಮ್ಮೊಳಗಿನ ಮಾನವೀಯತೆ ಬದುಕಿರಬೇಕು ಎಂಬುದೇ ಸಾಕ್ರಟೀಸ್ ಬದುಕು ಸಾರುವ ಅಮರ ಸಂದೇಶವಲ್ಲವೇ.


Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)